ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 11

ಆಗಸ್ಟ್ 12, 2007

ರೂ. 5/-



ಆಂಧ್ರಪ್ರದೇಶ : ತುಂಡುಭೂಮಿ ಕೇಳಿದರೆ ಎದೆಗೆ ಗುಂಡು ಹೊಡೆದ ಸರ್ಕಾರ

ಜನಹಿತ ಮರೆತ ಸದನದ ಕಲಾಪ



ಉಡುಪಿ ಅಭಿವೃದ್ಧಿ

ಸಮುದ್ರದ ಸ್ನೇಹ ಉಪ್ಪಿಗೆ ಬರ



ವಿಶ್ವದ ವಿಸ್ಮಯ ಪಶ್ಚಿಮ ಬಂಗಾಳ



ಡಾ. ಹನೀಫ್ ಪ್ರಕರಣ ಎಚ್ಚರಿಕೆಯ ಗಂಟೆ

‘ಸ್ವಾತಂತ್ರ್ಯ ಮೇಲ್ವರ್ಗದವರ ಕೈಯಲ್ಲಿದೆ’

– ಡಾ. ಅಮೃತ ಸೋಮೇಶ್ವರ

ಮಂಗಳೂರಿನಲ್ಲಿ ಜನಶಕ್ತಿ ಬಿಡುಗಡೆ

ಜನಶಕ್ತಿ ಕನ್ನಡ ವಾರಪತ್ರಿಕೆಯು ವಾರದ ಸಂಚಿಕೆಯನ್ನು ಮಂಗಳೂರು ಜಿಲ್ಲೆಯಲ್ಲಿ ಬಿಡುಗಡೆ ಮಾಡುವ ಸಮಾರಂಭವು ಜುಲೈ 31 ರಂದು ಮಂಗಳೂರಿನ ಕಂಡಾಯ ಭವನದಲ್ಲಿ ನಡೆಯಿತು. ಕೃಷ್ಣಪ್ಪ ಕೊಂಚಾಡಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಖ್ಯಾತ ಸಾಹಿತಿ ಚಿಂತಕರಾದ ಡಾ: ಅಮೃತ ಸೋಮೇಶ್ವರ ಅವರು ಪತ್ರಿಕೆಯನ್ನು ಬಿಡುಗಡೆ ಮಾಡಿದರು. ಸಿಐಟಿಯು ಮುಖಂಡರಾದ ವಸಂತ ಆಚಾರಿಯವರು ಪ್ರಸ್ತಾವಿಕವಾಗಿ ಮಾತನಾಡಿದರು. ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್ ಅವರು, ಆರ್.ರಾಮಕೃಷ್ಣ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಪತ್ರಿಕೆಯ ಅಭಿಮಾನಿ ಓದುಗರು, ವಿವಿಧ ಜನ ಚಳುವಳಿಗಳ ಮುಖಂಡರು, ಚಂದಾದಾರರು, ಏಜೆನ್ಸಿದಾರರು, ಪತ್ರಿಕೆಯ ವರದಿಗಾರರು ಉತ್ಸಾಹದಿಂದ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

‘ಸ್ವಾತಂತ್ರ್ಯ ಮೇಲ್ವರ್ಗದವರ ಕೈಯಲ್ಲಿದೆ’

ಜನಶಕ್ತಿಯಂತಹ ಪತ್ರಿಕೆಗಳು ಜನಪ್ರಿಯವಾಗಿ ಜನರ ಕೈಗೆ ತಲುಪಬೇಕು. ಸಮಾಜ ಜಾಗೃತವಾಗಬೇಕು. ಸಮಾಜ ಹೇಗಿರಬೇಕು ಹೇಗಿರಬಾರದು ಎಂಬುದು ಇಂತಹ ಪತ್ರಿಕೆಯಿಂದ ತಿಳಿಯಬಹುದು. ಪತ್ರಿಕೆಯ ಹೆಸರೂ ಅರ್ಥಪೂರ್ಣವಾಗಿದೆ. ಜನ ಎಂದರೆ ಯಾರು? ಶಕ್ತಿ ಎಂದರೆ ಯಾವುದು? ಜನಸಂಖ್ಯಾ ಬಾಹುಳ್ಯಾವಲ್ಲ, ದೈಹಿಕ ಬಲವೂ ಅಲ್ಲ, ಬೌದ್ಧಿಕ, ವೈಚಾರಿಕ ಬಲ.

60 ವರ್ಷವಾಯ್ತು ಸ್ವಾತಂತ್ರ್ಯ ಬಂದು. ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದೇವೆಯೇ? ಮಧ್ಯಮ ವರ್ಗ, ಕೃಷಿಕರು, ಕಾರ್ಮಿಕರು, ಕೂಲಿಕಾರರು, ಕೆಳ ಮಧ್ಯಮ ವರ್ಗಕ್ಕೆ ಸೇರಿದವರು ಇವರೇ ಬಹು ಸಂಖ್ಯಾತರು. ಸ್ವಾತಂತ್ರ್ಯ ಯಾರಿಗೆ ಬಂದಿದೆ? ಯಾರು ಅನುಭವಿಸುತ್ತಿದ್ದಾರೆ? ಅದು ಮೇಲ್ವರ್ಗದವರ ಕೈಯಲ್ಲಿದೆ. ನಮ್ಮ ಸಂವಿಧಾನವನ್ನು ಶ್ರೇಷ್ಠ ಸಂವಿಧಾನ ಎಂದು ಪರಿಗಣಿಸಲಾಗಿದೆ. ಎಷ್ಟು ಜನಕ್ಕೆ ಹಕ್ಕುಗಳು ಸಿಕ್ಕಿವೆ?

ದೇಶದಲ್ಲಿ ದಲಿತರ ಕಗ್ಗೊಲೆಗಳು ನಡೆಯುತ್ತಲೇ ಇವೆ. ಇಂತಹ ವಿಚಾರಗಳಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯ. ಜನರಲ್ಲಿ ಪತ್ರಿಕೆಗಳನ್ನು ಗಮನಿಸುವ ಪ್ರವೃತ್ತಿ ಬೆಳೆಯುತ್ತಿದೆ. ಆದರೆ ಪತ್ರಿಕೆಗಳು ಜಾಹಿರಾತು ಮಯವಾಗಿವೆ.

ಭಾರತೀಯ ಸಂಸ್ಕೃತಿ ಬೆಳದದ್ದೇ ಪ್ರಶ್ನೆಗಳಿಂದ. ವೇದಗಳಲ್ಲೂ ಪ್ರಶ್ನೆಗಳಿವೆ.

ಜಾತಿ ಮತ ಪ್ರಾದೇಶಿಕತೆ ಒಂದು ಮಿತಿಯ ಒಳಗಿದ್ದರೆ ಅಭಿಮಾನದ ವಿಷಯವಾಗುತ್ತದೆ. ದುರಾಭಿಮಾನವಾದರೆ ಕೆಡಕುಂಟು ಮಾಡುತ್ತವೆ. ಅನ್ಯಮತವನ್ನು ಅನ್ಯ ಧರ್ಮವನ್ನು ಲಘುವಾಗಿ ಕಂಡು ಹಾಸ್ಯ ಮಾಡುವುದು ತಪ್ಪು. ನಿಜವಾಗಿಯೂ ರಾಕ್ಷಸರು ಎಂಬುವರು ಇರಲಿಲ್ಲ. ಕ್ರಾಂತಿಕಾರಿ ವಿಚಾರ ಧಾರೆಯವರನ್ನು ಹಾಗೆ ಕರೆದಿದ್ದಾರೆ. ನಕ್ಸಲ್‌ವಾದ ಹಿಂಸಾವಾದ ಒಪ್ಪುವಂಥದ್ದಲ್ಲ ಜನತೆ ಮತೀಯತೆಗೆ ಮಣಿಯಬಾರದು” ಎಂದು ಡಾ. ಸೋಮೇಶ್ವರ ಹೇಳಿದರು.

ಶೋಷಿತರಾದ ವಿವಿಧ ಜನಸಮುದಾಯಗಳ ಪ್ರತಿನಿಧಿಗಳಿಂದ ಬಿಡುಗಡೆಗೊಂಡ ಜನಶಕ್ತಿಯ ವೈಶಿಷ್ಟ್ಯ, ದೃಷ್ಟಿಕೋನ, ಆದ್ಯತೆ ವಿವರಿಸಿದ ಪತ್ರಿಕೆ ಸಂಪಾದಕರಾದ ಎಸ್.ವೈ.ಗುರುಶಾಂತ್ ಹೆಚ್ಚಿನ ಮಾಧ್ಯಮಗಳಿಗೆ ರೈತರ ಆತ್ಮಹತ್ಯೆ, ದಲಿತರ ಮೇಲೆ ಹಲ್ಲೆಯಂತಹ ವಿಚಾರಗಳು ಆದ್ಯತೆಯಾಗಿಲ್ಲ ಎಂದು ವಿಷಾದಿಸಿದರು. ಅಧ್ಯಕ್ಷತೆ ವಹಿಸಿದ್ದ ಕೃಷ್ಣಪ್ಪ ಕೊಂಚಾಡಿಯವರು ಜನಶಕ್ತಿಯಂತಹ ಪತ್ರಿಕೆಯನ್ನು ಜನರ ನಡುವೆ ಮತ್ತಷ್ಟು ವ್ಯಾಪಕವಾಗಿ ಕೊಂಡೊಯ್ಯುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಕೋರಿದರು.

ಜನಶಕ್ತಿಯ ಸಂಪಾದಕ ಮಂಡಳಿ ಸದಸ್ಯರಾದ ಹಾಗೂ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಬಿ.ಮಾಧವರವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಾಹಿತ್ಯ ಸಮ್ಮೇಳನಕ್ಕೆ ಸಂಘ ಪರಿವಾರಿಯೇ ಅಧ್ಯಕ್ಷ

ಉಡುಪಿಯಲ್ಲಿ ನಡೆವ 74ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಎಸ್.ಎಲ್.ಶೇಷಗಿರಿರಾವ್‌ರನ್ನು ಕ.ಸಾ.ಪ. ‘ಆಯ್ಕೆ’ ಮಾಡಿದೆ. ಈ ಮೊದಲಿನಿಂದಲೂ ಅಲ್ಲಿಯವರೇ ಆದ ಹಿರಿಯ ಸಾಹಿತಿ ವ್ಯಾಸರಾಯ ಬಲ್ಲಾಳರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದಾಗಿ ಹೇಳುತ್ತಾ, ಪ್ರಚಾರಿಸುತ್ತಾ ಬಂದವರೇ ಅವರನ್ನು ಕೈ ಬಿಟ್ಟರು ಎಂಬುದು ವ್ಯಾಪಕವಾಗಿ ಕೇಳಿಬರುವ ಮಾತು.

ಈ ಇಬ್ಬರ ನಡುವೆ ಮಂಗಳೂರಿನ ಹಿರಿಯ ವಿದ್ವಾಂಸರಾದ ಅಮೃತ ಸೋಮೇಶ್ವರರ ಹೆಸರು ಹೇಗೋ ಪ್ರಸ್ತಾಪಿತರಾದರೂ ಅವರೂ ಆಗೋಲ್ಲ ಬಿಡಿ ಎಂದರು ಹಾಗೆಯೇ ಖ್ಯಾತ ‘ವಿದ್ವಾಂಸ’ರಾದ ಚಿ.ಮೂ.ಹೆಸರು ತೇಲಿಬಿಟ್ಟರಲ್ಲ. ಇನ್ನು ಉಡುಪಿ ಜಿಲ್ಲಾ ಕ.ಸಾ.ಪ.ವೂ ಬಲ್ಲಾಳರನ್ನೇ ಸೂಚಿಸಿತ್ತು. ಆದರೆ ಇದೆಲ್ಲಾ ಮೂಲೆಗೆ ತಳ್ಳಿಸಿದ್ದು ಸಾಹಿತ್ಯ-ಸಂಸ್ಕೃತಿ ಎಂಬುದು ಕೇಶವ ಶಿಲ್ಪದಿಂದ ಸ್ರವಿಸಿದ್ದು ಮಾತ್ರ ಎಂದೇ ನಂಬಿರುವ ರಾಯರು ಆಯ್ಕೆಯಾದದ್ದು ಹೇಗೆ?

ರಾಯರು ಸದಾ ಸಂಘಪರಿವಾರಗಳು, ಸಂಘ ಪರಿವಾರದ ಆಟಾಟೋಪ, ರಳಾಯಿಸುವಿಕೆಯೇ ಇರುವ ಉಡುಪಿ ಜಿಲ್ಲೆಗೆ ಬೇರೊಬ್ಬ ಬರುವುದೆಂದರೆ ಏನಾರ್ಥ ? ಹೀಗೆ ‘ಚಿಂತಿಸಿ’ದ ಚೆಡ್ಡಿಗಳು ಕಾರ್ಯಚರಣೆಗೆ ಇಳಿದಿದ್ದಾರೆ. ಕೆಲವು ಜಿಲ್ಲೆಗಳ ಅಧ್ಯಕ್ಷರುಗಳು ಮತದಾನ ಮಾಡದಂತೆ ನೋಡಿಕೊಂಡಿದ್ದಾರೆ, ಇನ್ನು ಕೆಲವರು ಮತದಾನ ಮಾಡಿ ಬಹುಮತದ ಆಯ್ಕೆಯನ್ನು ಮಾಡಿದ್ದಾರೆ. ಬಲ್ಲಾಳರು ವರ್ಸಸ್ ರಾಯರು ಎಂದೇಕೆ ಬಂತು. ಈ ನಿಯೋಜಿತ ಬಹುಮತದ ತೀರ್ಪನ್ನು ಮೆದುವಾಗಿಯೇ ಸ್ವಾಗತಿಸಿದ ಕ.ಸಾ.ಪ ಅಧ್ಯಕ್ಷರಾದ ಚಂಪಾರವರ ಹೇಳಿಕೆಯಲ್ಲಿ ಕಾಳಿಗಿಂತ ಗಾಳಿಯಿದೆ ಎಂಬ ಅಂಬೋಣ.

ರಾಯರ ಸಾಹಿತ್ಯ ಮರಾಣದ ಕಂತೆ ಗೊತ್ತಿದ್ದು, ಈ ನಾಟಕದ ಪ್ರಸಂಗ ನೋಡುತ್ತಾ ಒಂದಕ್ಷರವೂ ಮಾತನಾಡದೇ ಹಾಗೇ ಸಾಗಿರುವ ನಮ್ಮ ಪ್ರಗತಿಪರರು, ಬಂಡಾಯದವರು ಇನ್ನಾದರೂ ಕಣ್ಣು ಬಿಡಬಾರದೇ? ಸಂಘಪರಿವಾರಿಗಳ ಷಡ್ಯಂತ್ರ ಅರಿಯ ಬಾರದೇ.

ಇಎಂಎಸ್ ಭವನ: ಕಟ್ಟಡ ಕೆಲಸ ಆರಂಭ – ಉದಾರ ಧನ ಸಹಾಯಕ್ಕೆ ಮನವಿ


ಬಹಳ ವರ್ಷಗಳಿಂದ ನಿರೀಕ್ಷಿಸಲ್ಪಟ್ಟಿದ್ದ ಇ.ಎಂ.ಎಸ್. ಭವನದ ಕಟ್ಟಡ ಕಾಮಗಾರಿ ಚುರುಕಿನಿಂದ ಆರಂಭಗೊಂಡಿದೆ. ಸಾಧಾರಣ 4100 ಚದರ ಅಡಿ ವಿಸ್ತೀರ್ಣದ ಸೈಟಿನಲ್ಲಿ 5500 ಚದರ ಅಡಿ ವಿಸ್ತೀರ್ಣದ ಕಟ್ಟಡ ಎದ್ದು ಬರಲಿದೆ.

ಸುಸಜ್ಜಿತವಾದ ಗ್ರಂಥಾಲಯ, ಸಭಾಂಗಣ ದೈನಂದಿನ ಚಟುವಟಿಕೆಗಳಿಗೆ ಬೇಕಾದ ಆಕರಗಳು ಇದರಲ್ಲಿರಲಿದ್ದು ತುಳಿತಕ್ಕೊಳಗಾದ ಅಸಂಘಟಿತ ಕಾರ್ಮಿಕರು ಕೃಷಿ ಕೂಲಿಕಾರರು, ರೈತರು ಇನ್ನಿತರ ಜನಸಾಮಾನ್ಯರ ಅಭಿವೃದ್ಧಿಗೆ ಇ.ಎಂ.ಎಸ್. ಭವನದ ಚಟುವಟಿಕೆಗಳು ಕೇಂದ್ರವಾಗಲಿದೆ. ಇಡೀ ರಾಜ್ಯದ ಜನರ ಹೋರಾಟಗಳಿಗೆ, ಚಳುವಳಿಗೆ ಮಾರ್ಗದರ್ಶಿಯಾಗಲಿದೆ. 2008ರ ಮೇ ತಿಂಗಳಲ್ಲಿ ಕಟ್ಟಡದ ಉದ್ಘಾಟನೆ ನಡೆಸಬೇಕೆಂಬ ಅಪೇಕ್ಷೆ ಇದೆ.


ಇ.ಎಂ.ಎಸ್. ನಂಬೂದರಿಪಾದ್ ರವರ ಹೆಸರು ಗೊತ್ತಿಲ್ಲದವರು ಯಾರು? ಅವರು 1957ರಲ್ಲಿ ಸ್ವತಂತ್ರ ಭಾರತದ ಪ್ರಥಮ ಕಾಂಗ್ರೆಸೇತರ ಸರ್ಕಾರದ ಮುಖ್ಯಮಂತ್ರಿಯಾಗಿದ್ದರು ಎಂಬುದು ಒಂದಡೆಯಾದರೆ ಜಗತ್ತಿನಲ್ಲೇ ಪ್ರಥಮ ಚುನಾಯಿತ ಕಮ್ಯುನಿಸ್ಟ್ ಸರಕಾರದ ನೇತೃತ್ವ ವಹಿಸಿದವರು ಎಂದು ಖ್ಯಾತಿ ಪಡೆದಿದ್ದಾರೆ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಅವರ ಆಡಳಿತಾವಧಿಯಲ್ಲಿ ಭೂ ಸುಧಾರಣೆಯ ಮೂಲಕ ಬಡವರಿಗೆ ಭೂಮಿ, ಪಂಚಾಯಿತಿಗಳ ಮೂಲಕ ಅಧಿಕಾರ ವಿಕೇಂದ್ರೀಕರಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹಾಗೂ ಶಿಕ್ಷಣಕ್ಕೆ ಉತ್ತೇಜನ ನೀಡುವುದರ ಮೂಲಕ ಕೇರಳವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದರು.

ಹೆಸರಾಂತ ಮಾರ್ಕ್ಸ್‌ವಾದಿ ಚಿಂತಕರಾದ ನಂಬೂದರಿಪಾದ್‌ರವರು ಬರೆದ ಲೇಖನಗಳಿಗೆ ಗ್ರಂಥ ಗಳಿಗೆ ಲೆಕ್ಕವೇ ಇಲ್ಲ. ಅವರು ಬರೆದ ಲೇಖನಗಳು 100 ಗ್ರಂಥಗಳಲ್ಲಿ ಹೊರ ಬರುತ್ತಿದೆ.

ಅವರ ಹೆಸರಿನಲ್ಲಿ ‘ಭವನ’ ಕಟ್ಟುವುದೆಂದರೆ ಅವರು ಹಾಕಿಕೊಟ್ಟ ದಾರಿಯಲ್ಲಿ ಮುಂದುವರಿಯಲು ಪ್ರಾಮಾಣಿಕ ಪ್ರಯತ್ನ ಮಾಡುವುದು ಎಂದರ್ಥ. ಇ.ಎಂ.ಎಸ್. ಭವನವನ್ನು ಕಟ್ಟುತ್ತಿರುವುದು ಎ.ಕೆ.ಗೋಪಾಲನ್ ಮೆಮೋರಿಯಲ್ ಸೋಷಿಯಲ್ ಎಜುಕೇಷನ್ ಟ್ರಸ್ಟ್ ವತಿಯಿಂದ.


ಪ್ರಗತಿಯಲ್ಲಿರುವ ಕೆಲಸ

ಎ.ಕೆ. ಗೋಪಾಲನ್‌ರವರು ಇನ್ನೋರ್ವ ಧೀಮಂತ ನಾಯಕ. 1952ರಲ್ಲಿ ಪ್ರಥಮ ಲೋಕಸಭೆಯ ವಿರೋಧ ಪಕ್ಷದ ಮುಖಂಡರಾಗಿದ್ದ ಅವರು ರೈತ ಚಳುವಳಿಯ ಅಗ್ರಗಣ್ಯ ನಾಯಕರಲ್ಲೊಬ್ಬರು. ಕರ್ನಾಟಕದಲ್ಲಿ ಭೂಮಿಗಾಗಿ ನಡೆದ ರೈತ ಹೋರಾಟಗಳಲ್ಲಿ, ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಕಾರ್ಮಿಕ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸಿದ್ದರು. ದಲಿತರಿಗೆ ದೇವಸ್ಥಾನ ಪ್ರವೇಶಕ್ಕಾಗಿ ಅವರು ನಡೆಸಿದ ಹೋರಾಟ ಚಿರಸ್ಮರಣೀಯ.


ಯೋಜಿತ ಕಟ್ಟಡ


ಎ.ಕೆ.ಜಿ. ಟ್ರಸ್ಟ್ ವತಿಯಿಂದ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇತ್ತೀಚಿಗೆ ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕೃಷಿ ಕೂಲಿಕಾರರ ನಡುವೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡವರಿಗೆ ಸಹಾಯ ಮಾಡುತ್ತಿದೆ. ಇಂತಹ ಹತ್ತು ಹಲವಾರು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಇದಕ್ಕೆ ಇ.ಎಂ.ಎಸ್. ಭವನ ಸಹಕಾರಿಯಾಗಲಿದೆ.

ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ಎನ್.ಎಲ್. ಉಪಾಧ್ಯಾಯ ಅವರಿಂದ ಆರಂಭಗೊಂಡ ಎ.ಕೆ.ಜಿ. ಟ್ರಸ್ಟ್‌ನಲ್ಲಿ ಪಿ. ರಾಮಚಂದ್ರರಾವ್, ಎಸ್. ಸೂರ್ಯನಾರಾಯಣರಾವ್, ಎನ್.ಕೆ. ಉಪಾಧ್ಯಾಯ, ಸಿ.ನಂಜುಂಡಪ್ಪ ಮೊದಲಾದವರು ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. ಅವರ ಆಶಯಗಳನ್ನು ಮುಂದಕ್ಕೊಯ್ಯಲು ಸಹ ಇ.ಎಂ.ಎಸ್. ಭವನ ತನ್ನ ಕಾಣಿಕೆ ನೀಡಲಿದೆ.

ಇಂದಿನ ಹಾಗೂ ಮುಂದಿನ ಅಗತ್ಯಗಳನ್ನು ಗಮನದಲ್ಲಿರಿಸಿ ಕಟ್ಟಡವನ್ನು ಪೂರ್ಣಗೊಳಿಸಲು 1 ಕೋಟಿ ರೂ. ಖರ್ಚಾಗಬಹುದೆಂದು ಅಂದಾಜಿಸಲಾಗಿದೆ. ಸದ್ಯ ಇರುವ ಹಣದಲ್ಲಿ ಒಂದು ಹಂತದ ಕೆಲಸ ಮುಗಿಯಲಿದ್ದು ಇನ್ನೂ ಹಣ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಹಣ ಸಂಗ್ರಹಕ್ಕೆ ಮುಂದಾಗಬೇಕೆಂದು ಟ್ರಸ್ಟ್ ನಿರ್ಧರಿಸಿದೆ.

ಟ್ರಸ್ಟ್‌ಗೆ ನೀಡುವ ದೇಣಿಗೆಗೆ ಆದಾಯ ತೆರಿಗೆ ವಿನಾಯಿತಿ ಇರುತ್ತದೆ.

ಸಂಗಾತಿಗಳು ಉದಾರಧನ ಸಹಾಯ ನೀಡಿ, ಕರ್ನಾಟಕದಲ್ಲಿ ಉತ್ತಮ ಸಮಾಜವನ್ನು ನಿರ್ಮಿಸುವ ಉದ್ದೇಶದ ಪರಿಕ್ರಮದಲ್ಲಿ ಪಾಲುದಾರರಾಗ ಬೇಕೆಂದು ಆಶಿಸುತ್ತೇವೆ. ಧನ ಸಹಾಯ ನೀಡಿದ ಸಂಗಾತಿಗಳು, ಸಂಘಟನೆಗಳ ಹೆಸರನ್ನು ಜನಶಕ್ತಿಯಲ್ಲಿ ಪ್ರಕಟಿಸಲಾಗುವುದು.


ಕಾಮಗಾರಿಯ ಆರಂಭಿಕ ಹಂತ

ಸಂಪಾದಕೀಯ

ಸದನದ ಕಲಾಪ ಮರೆತ ಜನಹಿತ

ಇನ್ನೇನು ವಿಧಾನಸಭೆಯ ಅಧಿವೇಶನದ ಕಲಾಪಗಳು ಮುಕ್ತಾಯ ಹಂತದಲ್ಲಿದ್ದು ಅದು ಘೋಷಿತ ಉದ್ದೇಶವನ್ನು ಸಾಧಿಸಿದೆಯೇ ಎಂದು ಅವಲೋಕಿಸಬೇಕಿದೆ. ಈ ಅಧಿವೇಶನದಲ್ಲಿ ರಾಜ್ಯದ ಜನತೆಯ ಜೀವನವನ್ನು ಪರಿಣಾಮಿಸುವ ಆಯ-ವ್ಯಯದಂತಹ ಪ್ರಶ್ನೆಯ ಮೇಲೆ ತೀವ್ರವಾದ ಚರ್ಚೆ ಆಗಬೇಕಿತ್ತು. ತಮ್ಮದು ಅಮೋಘ ಬಜೆಟ್, ರೈತರ ಪರವಾದ ಬಜೆಟ್ ಎಂದೆಲ್ಲಾ ಡಂಗುರ ಹೊಡೆದ 'ಕರ್ನಾಟಕ ಅಭಿವೃದ್ಧಿ ರಂಗ' ವಿಶೇಷವಾಗಿ ಬಿಜೆಪಿ ಬೊಗಳೆಗಳನ್ನು ವಿಮರ್ಶಿಸಬೇಕಿತ್ತು. ಆದರೆ ಈ ಅಧಿವೇಶನದಲ್ಲಿ ಅಂತಹ ಯಾವುದೇ ಆಳವಾದ ಚರ್ಚೆಗಳನ್ನು ನಡೆಸಲಿಲ್ಲ ಎಂಬುದು ಒಂದು ವಿಷಾದದ ಸಂಗತಿಯಾಗಿದೆ. ಈ ಬಜೆಟ್‌ನಲ್ಲಿ ಹಂಚಲಾದ ಹಣವನ್ನು ಇಲಾಖಾವಾರು ಪ್ರಶ್ನೆಗಳನ್ನು ಗಂಭೀರವಾಗಿ ಅಧಿವೇಶನದಲ್ಲಿ ಚರ್ಚಿಸಲಾಗಿಲ್ಲ. ಇಂತಹ ಚರ್ಚೆಗಳಿಂದ ರಾಜ್ಯ ಸರ್ಕಾರದ ನೀತಿಗಳನ್ನು, ಗಂಭೀರ ಕೊರತೆಗಳನ್ನು ತಿದ್ದಿಕೊಳ್ಳುವ ಒತ್ತಡ ಹೇರಲಾಗಲಿಲ್ಲ. ಹೀಗಾಗಿ ರಾಜ್ಯ ಸರ್ಕಾರದ ನೀತಿಗಳೇ ಜಾರಿಗೆ ಹೋಗುವಂತಾಗಿದೆ.

ಈ ಅಧಿವೇಶನದಲ್ಲೇ ಸುಮಾರು 19 ಮಸೂದೆಗಳನ್ನು ಅಂಗೀಕರಿಸಲಾಗುವುದು ಎಂದು ಈ ಮೊದಲೇ ಘೋಷಿಸಲಾಗಿತ್ತು. ಇದರಲ್ಲಿ ಪ್ರಮುಖವಾಗಿ ಎ.ಪಿ.ಎಂ.ಸಿ. ಕಾಯ್ದೆಗೆ ತಿದ್ದುಪಡಿಗಳನ್ನು ಆತುರ ಆತುರವಾಗಿ ಅಂಗೀಕರಿಸುವ ಮೂಲಕ ನಮ್ಮ ಕೃಷಿಯನ್ನು, ಕೃಷಿ ಮಾರುಕಟ್ಟೆಯನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ, ಗುತ್ತೇದಾರಿ ಬಂಡವಾಳಗಾರರಿಗೆ ಒಪ್ಪಿಸಲು ಸರ್ಕಾರ ಹೊರಟಿರುವುದು ಅತ್ಯಂತ ಅಪಾಯಕಾರಿಯಾಗಿದೆ. ಈ ಮಸೂದೆಯನ್ನು ಅಂಗೀಕರಿಸದಿದ್ದರೆ ರಾಜ್ಯಕ್ಕೆ ಹಣಕಾಸಿನ ನೆರವು, ಯೋಜನೆಗಳನ್ನು ಅಂಗೀಕರಿಸುವುದಿಲ್ಲವೆಂದು ಈ ಹಿಂದೆಯೇ ಕೇಂದ್ರ ಸರ್ಕಾರ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟಿಕ್ ಸಿಂಗ್‌ರು ಬೆದರಿಕೆಯ ಒತ್ತಡ ಹಾಕಿದ್ದು ಈ ಹಿನ್ನೆಲೆಯಲ್ಲಿ ಎಂಬುದನ್ನು ಗಮನಿಸಬೇಕು. ಆದ್ದರಿಂದಲೇ ಕಾಂಗ್ರೆಸ್ ಪಕ್ಷವೂ ಸಹ 'ಜಾ-ಕೋ' ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿದು ತಿದ್ದುಪಡಿ ಅಂಗೀಕರಿಸಿತು.


ಅಧಿವೇಶನದ ಕಲಾಪಗಳು ನಡೆದಿರುವಾಗಲೇ ಈ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕೆಂದು ಇಡೀ ರಾಜ್ಯದಲ್ಲಿ ಎಲ್ಲಾ ಮಾರುಕಟ್ಟೆಗಳನ್ನು ಬಂದ್ ಮಾಡಿ ವರ್ತಕರು, ಇನ್ನೊಂದೆಡೆ ರೈತರು ಮುಷ್ಕರ ನಡೆಸುತ್ತಿದ್ದರೂ ಸರ್ಕಾರ ಕನಿಷ್ಠ ಕರೆದು ಮಾತನಾಡುವ ಸೌಜನ್ಯ ತೋರದಿರುವುದು ಖಂಡನೀಯ.

ಇನ್ನು ಈ ಅಧಿವೇಶನದಲ್ಲಿ ಸ್ವಲ್ಪಮಟ್ಟಿಗೆ ವಿಶೇಷ ಆರ್ಥಿಕ ವಲಯದ ಕುರಿತಂತೆ ಚರ್ಚೆ ನಡೆದಿದೆಯಾದರೂ ಇನ್ನೂ ಸರ್ಕಾರ ತನ್ನ ಯೋಜನೆಯನ್ನು ಪುನರ್ ವಿಮರ್ಶಿಸಲಿಲ್ಲ, ವಿವರಗಳನ್ನು ಬಾಯಿ ಬಿಟ್ಟಿಲ್ಲ. ಎತ್ತಲಾದ ಅನುಮಾನ, ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಹಾಗೆಯೇ ಶಾಲಾ ಶಿಕ್ಷಕರ ವರ್ಗಾವಣೆಯನ್ನು ನಿರ್ಧರಿಸುವುದೂ ಸೇರಿದಂತೆ ಇತರೆ ಅಂಶಗಳುಳ್ಳ ಮಸೂದೆಯನ್ನು ಅಂಗೀಕರಿಸಿದ್ದು ಸರ್ಕಾರಿ ಶಾಲೆಗಳನ್ನು ವಿಪ್ರೋ ಕಂಪನಿಯ ಸುಪರ್ದಿಗೆ ವರ್ಗಾಯಿಸುವ ಹುನ್ನಾರದ ಒಂದು ಷರತ್ತಿನ ಭಾಗವಾಗಿದೆ.

ಹೀಗೆ ಇಂತಹ ಕೆಲವು ಪ್ರಶ್ನೆಗಳು ಸದನದಲ್ಲಿ ಪ್ರಸ್ತಾಪಿತವಾದರೂ ಪ್ರಧಾನವಾಗಿ ಕಾಲಹರಣದ ಪ್ರಸಂಗಗಳೇ ಅಧಿಕವಾಗಿರುವುದು ಸದನದ ಗೌರವ, ಜನಪ್ರತಿನಿಧಿಗಳ ಜವಾಬ್ದಾರಿಯನ್ನು ಗೌಣಗೊಳಿಸಿದೆ. ವಿಶೇಷವಾಗಿ ಬಿಜೆಪಿಗೆ ಅಧಿಕಾರದ ಹಸ್ತಾಂತರ ಪ್ರಶ್ನೆಯೇ ಪ್ರಧಾನವಾಗಿ, ಪ್ರತಿದಿನವೂ ಬೇತಾಳನಂತೆ ಸದನದಲ್ಲಿ ಅಹೋರಾತ್ರಿ ಕಾಡಿದೆ. ಕಳೆದ ಅಧಿವೇಶನದಿಂದ ಇಲ್ಲಿಯುವರೆಗೂ ಜನತೆ ಹಲವಾರು ಹೋರಾಟಗಳ ಮೂಲಕ, ರಾಜಧಾನಿಗೆ ಬಂದು ರ್‍ಯಾಲಿ ನಡೆಸಿ ಸಲ್ಲಿಸಿದ ಬೇಡಿಕೆಗಳ ಬಗ್ಗೆ ಸರ್ಕಾರದ ಪ್ರತಿಕ್ರಿಯೆ ಏನೂ ಇಲ್ಲವಾಗಿದೆ. ಪಡಿತರ ಸಮಸ್ಯೆ, ನೀರು ವಸತಿಯ ಸಮಸ್ಯೆ, ಬಿತ್ತನೆಯ ಬೀಜದ ಕೊರತೆ ಸಾರಿಗೆ ದರದ ಹೆಚ್ಚಳ ಅಕ್ರಮ ಭೂ ಕಬಳಿಕೆಯ ವರದಿಗಳು ಸದನದೊಳಗೆ ಗಂಭೀರವಾಗಿ ಚರ್ಚೆಗೆ ಬರದೇ ಇರುವುದು, ಸರ್ಕಾರವೂ ಅದನ್ನು ಪ್ರಸ್ತಾಪಿಸದೇ ಇರುವುದು ಒಂದು ಜನವಿರೋಧಿ ಅಂಶವಾಗಿದೆ.

ಸದನದಲ್ಲಿ ಎದ್ದು ಬಂದ ಬಹುತೇಕ ಚರ್ಚೆಗಳನ್ನು ಸಿಪಿಐ(ಎಂ), ವಾಟಾಳ್, ಜೆಡಿ(ಯು)ನಂತಹ ಪಕ್ಷಗಳ ಸದಸ್ಯರೇ ಎತ್ತಿದ್ದಾರೆ. ಹೊರತು ಅಧಿಕೃತ ವಿರೋಧ ಪಕ್ಷವಲ್ಲ ಎಂಬುದು ಕಲಾಪಗಳು ಕಾಲ ಹರಣವಾಗಿಸಲು ಕಾಂಗ್ರೆಸ್‌ನ ಕೊಡುಗೆ ಸಣ್ಣದೇನಲ್ಲ. ಇಂತಹ ಸನ್ನಿವೇಶದಲ್ಲಿ ವಿಧಾನ ಸಭೆಯೊಳಗೆ ಜನಪರ ಧ್ವನಿ ಹೆಚ್ಚು ಕೇಳುವ ಅವಶ್ಯಕತೆ ಇದೆ.

ಡಾ. ಹನೀಫ್ ಪ್ರಕರಣ : ಎಚ್ಚರಿಕೆಯ ಗಂಟೆ



ಡಾ. ಹನೀಫ್ ಬೆಂಗಳೂರಿಗೆ ಮರಳಿದ್ದಾರೆ. 'ಬರಲಾರದೇ ಹೋದಾನೋ ಏನೋ' ಎಂದು ಆತಂಕಿಸುತ್ತಿದ್ದ ಅವರ ಪತ್ನಿ ಹಾಗೂ ಕುಟುಂಬದ ಸದಸ್ಯರು, ಮಿತ್ರರು ಸಂತಸಗೊಂಡಿದ್ದಾರೆ. ಆತನನ್ನು ಸ್ವಾಗತಿಸಲು ಸಂಭ್ರಮಿಸಿದ್ದಾರೆ. ಆದರೆ ಯಥಾ ರೀತಿ ನಮ್ಮ ಮಾಧ್ಯಮಗಳು ಈ ಸನ್ನಿವೇಶವನ್ನು 'ಆಚರಿಸಲು' ಹಿಂದೆ ಬೀಳಲಿಲ್ಲ. ಇನ್ನೂ ಟಿ.ವಿ. ಚಾನೆಲ್‌ಗಳಲ್ಲಿ ಸುದ್ದಿ ತಿಳಿದಾಗಿನಿಂದ ಮಧ್ಯರಾತ್ರಿಯವರೆಗೂ ಮನೆಯ ಬಳಿ, ವಿಮಾನ ನಿಲ್ದಾಣದಲ್ಲಿ ಒಬ್ಬರ ಮೇಲೆ ಒಬ್ಬರು ಸ್ಪರ್ಧೆಯಂತೆ ಕ್ಯಾಮರಾ ಹಿಡಿದು 'ಲೈವ್' ಗಾಗಿ ಕಾದಿದ್ದಾರೆ. ಬಹುಶಃ ಈ ಜಗದ ಎಲ್ಲವೂ ಮಾಯವಾಗಿ ಹೋಗಿದೆ ಏನೋ ಎಂಬಂತೆ.

ಹನೀಫ್ ಜೂನ್‌ನಲ್ಲಿ ಇಂಗ್ಲೆಂಡ್‌ನ ಗ್ಲಾಸ್ಗೋ ವಿಮಾನ ನಿಲ್ದಾಣದಲ್ಲಿನ ಬಾಂಬ್ ಸ್ಫೋಟದ ಘಟನೆಯಲ್ಲಿ ಭಾಗಿಯಾಗಿರುವ ಕಫೀಲ್‌ನ ಸಂಬಂಧಿಯಾಗಿದ್ದು, ಅದರೊಂದಿಗೆ ನಂಟಿದೆ ಎಂಬ ಆರೋಪ ಆಸ್ಟ್ರೇಲಿಯಾದ ಪೋಲೀಸರದು. ಅದಕ್ಕೆ ಆ ಕೃತ್ಯದಲ್ಲಿ ಬಳಸಲಾದ ಕಾರ್‌ನಲ್ಲಿ ಹನೀಫ್‌ನ ಮೊಬೈಲ್ ಸಿಮ್ ಕಾರ್ಡ್ ಸಿಕ್ಕಿದೆ ಎಂದು ಮತ್ತೊಂದು ಆರೋಪವಾಗಿದ್ದರೆ, ಆತನ ಕಂಪ್ಯೂಟರ್‌ನಲ್ಲಿ ಮಗುವಾಗಿದಕ್ಕೆ ಅಭಿನಂದಿಸಿ ಒಂದು ಪತ್ರ ಇರುವುದು, ಮತ್ತು ಪತ್ನಿ, ಮಗುವನ್ನು ನೋಡಲು ಭಾರತಕ್ಕೆ ಹೊರಡುವ ಬಗ್ಗೆ ದೃಢೀಕರಿಸಿದ ಪತ್ರ ಸಿಕ್ಕಿವೆ ಎಂಬುದು. ಈ ಅಂಶಗಳ ಆಧಾರದಲ್ಲೇ ಆಸ್ಟ್ರೇಲಿಯಾದ ಪೋಲೀಸರು ಆತನನ್ನು ಬಂಧಿಸಿದರು. ಅಲ್ಲಿಯ ಭಯೋತ್ಪಾದನಾ ನಿಗ್ರಹ ಕಾನೂನು (ಎಐಎಸ್‌ಓ) ಬಳಸಿದರು, ಜೈಲಿಗಟ್ಟಿದರು.



ಇಂತಹ ಸನ್ನಿವೇಶದಲ್ಲಿ ವಿಚಾರಣೆ ಸಹಜವಾದರೂ ಅಂತಹ ವಿಚಾರಣೆ ಹಾಗೂ ಆರೋಪ ದೃಢಗೊಳ್ಳುವ ಮೊದಲೇ ಆತನೊಬ್ಬ ಭಯೋತ್ಪಾದಕ ಎಂದು ಆಸ್ಟ್ರೇಲಿಯಾದ ಪೋಲೀಸರು ತೀರ್ಮಾನಿಸಿ ಬಿಟ್ಟಿದ್ದರು. ಅದರಂತೆ ವರ್ತಿಸಿದರು. ಆತ ವೈದ್ಯನಾಗಿ ಕೆಲಸ ಮಾಡುತ್ತಿದ್ದ 'ಗೋಲ್ಡ್ ಕೋಸ್ಟ್' ಆಸ್ಪತ್ರೆಯ ಸೇವೆಯಿಂದ ತೆಗೆಯಲಾಯಿತು. ಆತನ 'ವೀಸಾ' ರದ್ದುಪಡಿಸಲಾಗಿತ್ತು ಮತ್ತು ಭಾರತಕ್ಕೆ ಮರಳದಂತೆ ನಿರ್ಬಂಧಿಸಲಾಗಿತ್ತು. ವಿಚಾರಣೆಗೆಂದು ಬಂಧಿಸಲ್ಪಟ್ಟ ಆತನನ್ನು 25 ದಿನಗಳ ಕಾಲ ಜೈಲಿನಲ್ಲಿ ಕೊಳೆಸಿದರು. ವಿದೇಶಾಂಗ ಸಚಿವರೂ ಒಳಗೊಂಡು ಆತ 'ಭಯೋತ್ಪಾದಕ' ಎಂಬ ಬಗ್ಗೆ ದೃಢೀಕರಿಸಿದ್ದು, 'ಆತ ವಿಚಾರಣೆ ವೇಳೆ' ಒಳ್ಳೆ ರೀತಿಯಿಂದ ನಡೆದುಕೊಳ್ಳಲಿಲ್ಲ. ಉತ್ತರ 'ಸರಿಯಾಗಿ' (ಬೇಕಾದಂತೆ) ಹೇಳಲಿಲ್ಲ, ಅನುಮಾನಿಸಲು ಬೇರೇನು ಬೇಕು' ಎಂಬಂತಹ ಹಗುರ ಸಮರ್ಥನೆಗಳನ್ನು ನೀಡಿದ್ದರು.

ಡಾ. ಹನೀಫ್‌ನ ಬಂಧನ ಮತ್ತು ಶಿಕ್ಷೆಯು ಆರಂಭವು ಭಾರತದಲ್ಲಿಯೂ ಆಸ್ಟ್ರೇಲಿಯಾದಲ್ಲಿಯೂ ಸಾಕಷ್ಟು ಆತಂಕ, ಸಾರ್ವಜನಿಕ ವಿರೋಧಗಳನ್ನು ಎದುರಿಸಿತು. ಡಾ. ಹನೀಫ್‌ನ ವಕೀಲರ ತಂಡ ಸಾಕಷ್ಟು ಕಾನೂನು ಹೋರಾಟ ನಡೆಸಿದೆ. ಒಟ್ಟು ವಿಚಾರಣೆಗಳ ಸಂದರ್ಭದಲ್ಲಿ 'ಹನೀಫ್‌ನ ಮೊಬೈಲ್ ಸಿಮ್ ಕಾರ್ಡ್ ಸಿಕ್ಕಿದ್ದು ಬಾಂಬ್ ಸ್ಫೋಟದ ಕಾರ್‌ನಲ್ಲಿ ಅಲ್ಲ, ಬದಲಾಗಿ ಅಲ್ಲಿರುವ 100 ಕಿ.ಮೀ. ದೂರದಲ್ಲಿರುವ ಬಂಧುವಿನ ಮನೆಯಲ್ಲಿ, ಇನ್ನೂ ಇ-ಮೇಲ್‌ಗಳು ಸಹಜವಾಗಿ ಸಂವಾದಿಸಿದ್ದು, ಆಸ್ಟ್ರೇಲಿಯಾದಿಂದ ಮಗುವನ್ನು ನೋಡಲೆಂದು ಒಂದೇ ಹಾದಿಯ ವಿಮಾನ ಟಿಕೆಟ್ ಖರೀದಿಸಲಾಗಿದ್ದು, ಪತ್ನಿ, ಮಗುವನ್ನು ಕರೆದು ತರುವ ಯೋಜನೆ ಇದ್ದುದರಿಂದ ಮತ್ತೆ ವಾಪಸ್ಸಾಗುವ ಟಿಕೆಟ್ ಖರೀದಿಸಿಲ್ಲ ಎಂದೂ ತಿಳಿಯಿತು. ಈ ಆಧಾರದಲ್ಲಿ ಬ್ರಿಸ್‌ಬೇನ್ ನ್ಯಾಯಾಲಯವು ಹನೀಫ್‌ಗೆ ಭಯೋತ್ಪಾದಕರೊಂದಿಗೆ ನೇರ ಸಂಬಂಧ ಇಲ್ಲವೆಂದು ಖುಲಾಸೆಗೊಳಿಸಿತು.

ಹಾವರ್ಡ್ ಸರ್ಕಾರದ ನೂತನ 'ಭಯೋತ್ಪಾದನಾ ನಿಗ್ರಹ ಕಾಯ್ದೆ' ಬಳಸಲು, ಅದನ್ನು ಜಾರಿಗೊಳಿಸಲು ಇಷ್ಟು ಆತುರವೇಕೆ? ನಡೆಯಲಿರುವ ಚುನಾವಣೆಯ ಪ್ರಚಾರಕ್ಕೆ 'ಭಯೋತ್ಪಾದನೆ'ಯನ್ನು ಬಳಸುವ ಆಸ್ಟ್ರೇಲಿಯಾ ಸರ್ಕಾರದ ಇಚ್ಛೆ ನೂತನ ಭಯೋತ್ಪದನಾ ನಿಗ್ರಹ ಕಾನೂನಿನ ಕ್ರೌರ್ಯ ಮತ್ತು ಪೋಲೀಸರ ಅತ್ಯುತ್ಸಾಹದ ಜಾರಿ ಇಲ್ಲಿ ಪ್ರಮುಖವಾದ ಒಂದು ಕಾರಣವಾಗಿದೆ. ಇದೆಲ್ಲಕ್ಕೂ ಮಿಗಿಲಾಗಿ ಅಂತಹ ಕ್ರೂರ ಕಾನೂನನ್ನು ಹಾವರ್ಡ್ ಸರ್ಕಾರ ತನ್ನ ಚುನಾವಣಾ ಪ್ರಚಾರದಲ್ಲಿ ಭಯೋತ್ಪಾದನೆಯ ವಿಷಯವನ್ನು ಬಳಸಲು ನೋಡುತ್ತಿದೆ, ಹಾಗೆಯೇ ಆಸ್ಟ್ರೇಲಿಯಾದಲ್ಲಿನ ಮೂಲ ನಿವಾಸಿಗಳಿಂದ ಭೂಮಿ ಇತ್ಯಾದಿಗಳನ್ನು ಕಸಿಯುವುದು, ಅವರ ಮೇಲೆ ಜನಾಂಗೀಯ ಆಕ್ರಮಣದ ಬಗ್ಗೆಯೂ ಭಯ ಹುಟ್ಟಿಸಿ ಅದರ ಲಾಭ ಹೊಡೆಯಲು ಯತ್ನಿಸಿದೆ ಎಂಬುದು ಗಮನಿಸಬೇಕಾದ ರಾಜಕೀಯ ಸಂಗತಿ. ತನ್ನನ್ನು ಭಯೋತ್ಪಾದಕ ಎಂದು ತೀರ್ಮಾನಿಸಿ ಬಿಡಲು 'ತಾನು ಮುಸ್ಲಿಂ ಎಂಬುದು ಸಾಕಾಯಿತಲ್ಲ' ಎಂದು ಡಾ. ಹನೀಫ್ ಪರಿತಪಿಸಿದ್ದು ಅಂತರರಾಷ್ಟ್ರೀಯ ಭಯೋತ್ಪಾದನೆಯ ಹೆಸರಿನಲ್ಲಿ ಏನೆಲ್ಲಾ ಆಗುತ್ತಿದೆ ಎಂಬುದರ ಸೂಚಕವಷ್ಟೇ.

ಗಂಭೀರ ವಿಷಯವೆಂದರೆ, 'ಭಯೋತ್ಪಾದಕ'ನಿರಬಹುದೇ ಎಂಬ ಅನುಮಾನ ಬಂದ ಕೂಡಲೇ ಕಾರ್ಯ ಪ್ರವೃತ್ತರಾಗಿರುವ ಸರ್ಕಾರ ಪೋಲೀಸರು ಆ ವ್ಯಕ್ತಿಯನ್ನು ಭಯೋತ್ಪಾದಕನೆಂದು ತಾವೇ ನ್ಯಾಯಾಧೀಶರಾಗಿ ತೀರ್ಮಾನ ಕೊಟ್ಟು ಅದರಂತೆ ವರ್ತಿಸುವುದು ಎಷ್ಟೊಂದು ಅಪಾಯಕಾರಿ. ಹೀಗೆ ಮಾಡಿದವರು ಆಸ್ಟ್ರೇಲಿಯಾದ ಕೇವಲ ಪೋಲೀಸರಲ್ಲ, ಸ್ವತಃ ಮಂತ್ರಿಗಳೇ ಹಾಗೆ ಮಾತನಾಡಿದರು. ಕನಿಷ್ಠ ಪ್ರಜೆಯೊಬ್ಬನ ಹಕ್ಕು -ಬಾಧ್ಯತೆಗಳು, ಆತನ ಸ್ಥಾನ - ವಹಿಸುವ ಪಾತ್ರಗಳ ಬಗ್ಗೆ ಹಕ್ಕುಗಳ ಬಗ್ಗೆ ಏನೂ ಹೊಣೆ ಇಲ್ಲದಂತೆ....

ಹಾಗೆಯೇ ನಮ್ಮಲ್ಲಿಯ ಟಿ.ವಿ. ಪತ್ರಿಕೆ ಮಾಧ್ಯಮಗಳೂ ಡಾ: ಹನೀಫ್‌ನ ಪ್ರಕರಣದ ಸುತ್ತ ಸುತ್ತಿ ಭಯೋತ್ಪಾದಕನೆಂಬುದಕ್ಕೆ 'ಪುರಾವೆ' ಪ್ರಕಟಿಸಿಬಿಟ್ಟಿದ್ದರು. ಪ್ರಸಾರದ ಸ್ಪರ್ಧೆಯ ಭರಾಟೆಯಲ್ಲಿ ಯಾರಿಗೆ ಏನಾದರೇನು? ಲಾಭವೇ ಮುಖ್ಯ ತಾನೆ? ಇವೆಲ್ಲದಕ್ಕಿಂತ ಹೊಣೆಗೇಡಿತನ ಮೆರೆದದ್ದು ಕರ್ನಾಟಕ ಗೃಹ ಸಚಿವರಾದ ಎಂ.ಪಿ.ಪ್ರಕಾಶ್‌ರವರು ವಿಧಾನಸಭೆಯಲ್ಲಿ 'ಡಾ. ಹನೀಫ್‌ನಿಗೆ ಭಯೋತ್ಪಾದಕರೊಂದಿಗೆ ನಂಟು ಇರುವ ಬಗ್ಗೆ ತೀರ್ಮಾನಕ್ಕೆ ಬರುವಂತಹ ಪುರಾವೆಗಳು ಇವೆ' ಎಂದು ಹೇಳಿದ್ದು. ಅಂತಹವಿದ್ದರೆ ಬಹಿರಂಗಗೊಳಿಸ ಬಹುದಿತ್ತಲ್ಲ! ಆಸ್ಟ್ರೇಲಿಯಾದ ನ್ಯಾಯಾಲಯದ ತೀರ್ಪು ಖುಲಾಸೆಗೊಳಿಸಿ ಹೀಗೆ ಬರಬಹುದೆಂಬ ಅನುಮಾನವೂ ನಮ್ಮ ಗೃಹ ಸಚಿವರಿಗೆ ಇರಲಿಲ್ಲ ಎನಿಸುತ್ತದೆ. ಒಟ್ಟಾಗಿ, ಅವರು ಹೀಗೆ ಬಯಲಾಗಿ ಬಿಟ್ಟರಲ್ಲ. ಇದು 'ಸಂಘ ಪರಿವಾರ'ಗಳ ಸಂಬಂಧದ ದೋಷವೇ ಇರಬೇಕು.

ಹನೀಫನೇನೋ ಈಗ ಆರೋಪದ ಬಂಧನದಿಂದ ಬಿಡುಗಡೆಯಾಗಿದ್ದಾನೆ. ಆದರೆ ಇದೇ ಸಂಗತಿ ಅದೂ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಅಧಿಕಾರವಧಿಯಲ್ಲಾಗಿದ್ದರೆ...' ಎಂದು ಗೆಳೆಯೊಬ್ಬರು ಉದ್ಘರಿಸಿದರು. ಅಂತರಂಗದಲ್ಲಿನ ದ್ವೇಷವೂ, ಅಮೇರಿಕಾ ಅಧ್ಯಕ್ಷರ ಆದೇಶವನ್ನು ಮಾರ್ಗದರ್ಶಿಯನ್ನಾಗಿರಿಸಿ ಕೊಂಡ ಬಿಜೆಪಿ ಸರ್ಕಾರ 'ಪೋಟಾ' ಕಾಯ್ದೆ ತಂದಿದ್ದು ಮುಸ್ಲಿಂರನ್ನೇ ಗುರಿಯಾಗಿಸಿ ಅದನ್ನು ಬಳಸಿ ಹಿಂಸಿಸಿದ್ದು ಮರೆಯುವುದಾದರೂ ಹೇಗೆ ಸಾಧ್ಯ! ಪೋಟಾದಲ್ಲಿ ಭಯೋತ್ಪಾದಕನ ರಕ್ತ ಸಂಬಂಧಿಯೂ ಸಹ ಭಯೋತ್ಪಾದಕನೆಂದು ತೀರ್ಮಾನಿಸುವುದಕ್ಕೆ ಅವಕಾಶವೇ ಇದೆ.

'ಪೋಟಾ' ಕಾಯ್ದೆಯನ್ನು ಈ ವಿಷಯದಲ್ಲಿ ಎಡಪಕ್ಷಗಳು ಯುಪಿಎ ಸರ್ಕಾರ ರದ್ದುಪಡಿಸಬೇಕೆಂದು ಒತ್ತಾಯಿಸಿದ್ದು, ಅದನ್ನು ಸರ್ಕಾರ ಹಿಂತೆಗೆದುದ್ದರ ಮಹತ್ವ ಅರಿಯಬೇಕು. ಹಾಗೆಯೇ ಕರ್ನಾಟಕದಲ್ಲಿ 'ಕೋಕಾ' ದಂತಹ ಕಾನೂನು ಇನ್ನು ನೆತ್ತಿಯ ಮೇಲೆ ಇದೆ ಎಂಬುದರ ಬಗ್ಗೆ ಇರಬೇಕಾದ ಎಚ್ಚರಿಕೆಯೂ ಸಹ ಅಗತ್ಯ.


ಅಧಿಕಾರ ಹಸ್ತಾಂತರ : ಅದೇ ಧ್ಯಾನ

'ಸದಾಶಿವನಿಗೆ ಅದೇ ಧ್ಯಾನ' ಎಂಬಂತೆ ಬಿಜೆಪಿ ನಾಯಕರಿಗೆ, ಅದರಲ್ಲೂ ಉಪಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಪಟ್ಟದ್ದೇ ಚಿಂತೆ. ಅಧಿಕಾರದ ಹಸ್ತಾಂತರದ ವಿಷಯ ವಿಧಾನಸೌಧದ ಮೊಗಸಾಲೆಯಲ್ಲಿ, ಅಧಿವೇಶನದಲ್ಲಿ ಖಾಸಗಿ ಮಾತುಕತೆಗಳಲ್ಲಿ ಕಾಲು ಸುಟ್ಟ ಬೆಂಕಿನಂತೆ ಸುಳಿದಾಡುತ್ತಿದೆ. 'ದೇವರು ಬಂದು ಕನಸಿನಲ್ಲಿ ಹೇಳಿದರೂ ಕುಮಾರಸ್ವಾಮಿ ವಚನ ಮರಿಯಲಾರರು' ಎಂದೂ 'ಕುಮಾರಣ್ಣನಿಗೆ' ಭವಿಷ್ಯವಿದೆಯೆಂದು ವಿಧ ವಿಧವಾಗಿ 'ಪೂಸಿ' ಹೊಡೆದು ತಿರುಗುತ್ತಿದ್ದಾಗಲೇ ಬಿಜೆಪಿಯೊಳಗೆ ಬಂಡಾಯವೂ ಮೇಲೆದ್ದಿತು. ಬಿಜೆಪಿಯವರು ಮೊದಲು ಒಗ್ಗಟ್ಟಾಗಿ ಬಂದರೆ ಹಸ್ತಾಂತರ ನೋಡಬಹುದು ಎಂಬ ಮಾತು 'ಬಿಜೆಪಿಗೆ ಬಿಸಿಯೇರಿಸಿ' ಎಲ್ಲರೂ ಒಂದಾಗಿಯೇ ಇದ್ದೇವೆ ನೋಡಿ ಎಂದು ಯಶವಂತ ಸಿನ್ಹಾರನ್ನು ಒಳಗೊಂಡು ಪರೇಡ್ ಮಾಡಿದ್ದು ಆಯಿತು.

ಈ ನಡುವೆ ದೇವೇಗೌಡರು ಬಿಜೆಪಿಗೆ ಅಧಿಕಾರ ಹಸ್ತಾಂತರಿಸಲು ಸಿದ್ದರಿಲ್ಲ ಎಂದು ಅದಕ್ಕಾಗಿಯೇ ಜೆಡಿ(ಎಸ್)ನ ಕೆಲವು ಶಾಸಕರು ಕುಮಾರಣ್ಣನೇ ಮುಖ್ಯಮಂತ್ರಿಯಾಗಿ ಮುಂದು ವರೆಯಲಿದ್ದಾರೆ, ಬಿಜೆಪಿಯ ಶಾಸಕರ ಬೆಂಬಲವೂ ಇದೆ ಎಂದೂ ಹೇಳ ತೊಡಗಿದ್ದಾರೆ. ಇದರ ಬೆನ್ನಲ್ಲೇ ಕೇಂದ್ರ ಸಚಿವ ಕಾಂಗ್ರೆಸ್‌ನ ರಾಜಶೇಖರನ್ ಜೊತೆಗೂ ದೇವೇಗೌಡರು ಚರ್ಚಿಸಿದ್ದು, ಕಾಂಗ್ರೆಸ್‌ನೊಂದಿಗೆ ಜೆಡಿ(ಎಸ್) ಸೇರಿ ಸರ್ಕಾರ ರಚಿಸುವುದೇ ಎಂಬ ಅನುಮಾನಗಳನ್ನು ಮೂಡಿಸಿದೆ. ಇದರಿಂದಾಗಿ ಬೇಡವೇ ಬೇಡ ಎಂಬ ಗುಂಪು. ಹೈಕಮಾಂಡ್‌ನ ಗಡಿಯನ್ನು ತಲುಪಿದೆ. ಜೆಡಿ(ಎಸ್)ಗೆ ಬಿಜೆಪಿ ಸಖ್ಯ ತೊರೆಯಬೇಕು ಎಂದು ಒಂದು ಎಳೆ ಇದ್ದಂತೆ ಕಾಣುತ್ತಿದೆಯಾದರೂ ಸನ್ನಿವೇಶ ಏನು ಮಾಡಲು ಬಿಟ್ಟೀತು? ಎಂಬುದೇ ಗೊಂದಲಗಳ ಗೂಡಿನೊಳಗಿನ ಪ್ರಶ್ನೆ?

ಜನಶಕ್ತಿ ಕನ್ನಡ ವಾರಪತ್ರಿಕೆ

1857ರ ಬಂಡಾಯ



ಸಿ.ಯತಿರಾಜು

ಸಮಕಾಲೀನ ಜಗತ್ತಿನಲ್ಲಿ ಕ್ವಿಂಗ್ ಮನೆತನದ ವಿರುದ್ಧ ನಡೆದ ಚೈನಾದ ಟಾಯ್‌ಪಿಂಗ್ ಬಂಡಾಯವೊಂದನ್ನು ಬಿಟ್ಟರೆ ಇಷ್ಟೊಂದು ಬೃಹತ್ ಪ್ರಮಾಣದ ಬಂಡಾಯ ಮತ್ತೊಂದಿಲ್ಲಾ.

ರಾಷ್ಟ್ರೀಯ ಬಂಡಾಯವಾಗಿ 1857 ರ ಹೋರಾಟ

ಇಡೀ ವಿಶ್ವದಲ್ಲೇ ಇದೊಂದು ಬೃಹತ್ತದ ವಸಾಹತು ವಿರೋಧಿ ಬಂಡಾಯವಾಗಿತ್ತು. 1 ಲಕ್ಷ 20 ಸಾವಿರಕ್ಕೂ ಹೆಚ್ಚು ಬಂಗಾಳ ಸೈನ್ಯದ ಸೈನಿಕರು ಶಸ್ತ್ರಾಸ್ತ್ರಗಳನ್ನು ಹಿಡಿದು ರಣರಂಗಕ್ಕೆ ಧುಮುಕಿದ ಜಗದ್ವಿಖ್ಯಾತ ಬಂಡಾಯವಾಗಿತ್ತು. ಪ್ರಪಂಚದ 19ನೇ ಶತಮಾನದ ಇತಿಹಾಸವನ್ನು ಗಮನಿಸಿದರೆ ನಾವು ಕೆಲವು ಯಶಸ್ವಿ ವಸಾಹತು ವಿರೋಧಿ ಕ್ರಾಂತಿಗಳನ್ನು ಲ್ಯಾಟಿನ್ ಅಮೇರಿಕಾದಲ್ಲಿ ಕಾಣಬಹುದು ಬೋಲಿವಾರ್ ನೇತೃತ್ವದ ಸಶಸ್ತ್ರ ಕ್ರಾಂತಿಯ ಉದಾಹರಣೆ ನಮ್ಮ ಮುಂದಿದ್ದರೂ ಕೆಲವೇ ಸಾವಿರದಷ್ಟು ಬಂಡಾಯಗಾರರು ಮಾತ್ರ ಅದರಲ್ಲಿ ಪಾಲ್ಗೊಂಡರು. ಆ ಕಾಲದಲ್ಲಿ ಏಷ್ಯಾದಲ್ಲೇ ಅತ್ಯಾಧುನಿಕವಾದ ಸೈನ್ಯ ಬಂಗಾಳ ಸೈನ್ಯವಾಗಿತ್ತು. ಬ್ರಿಟಿಷರ ಅತ್ಯಂತ ದೊಡ್ಡದಾದ ಸಾಗರೋತ್ತರ ಸೈನ್ಯ ಕೂಡಾ ಅದಾಗಿತ್ತು. ಇಂದಿನ ಭಾರತದ ಒಕ್ಕೂಟದ ಶೇ.35 ರಷ್ಟು ಪ್ರದೇಶ ಬಂಡಾಯದಿಂದ ಭಾದಿಸಲ್ಪಟ್ಟಿತ್ತು.

ಕಾರ್ಲ್ ಮಾರ್ಕ್ಸ್‌ರಿಗೆ 1857ರ ಬಂಡಾಯ ಒಂದು 'ಕ್ರಾಂತಿ' 'ಒಂದು ರಾಷ್ಟ್ರೀಯ ಬಂಡಾಯ'. ಈ ರಾಷ್ಟ್ರೀಯ ಬಂಡಾಯದಲ್ಲಿ ರೈತರು, ಜಮೀನ್ದಾರರು ಮತ್ತು ತಾಲ್ಲೂಕುದಾರರ ಒಂದು ವಿಭಾಗ ಮತ್ತು ಆ ಸಮಯದಲ್ಲಿ ಸಾಮ್ರಾಜ್ಯವಾದದಿಂದ ಭಾದಿಸಲ್ಪಟ್ಟ, ಅದರೊಂದಿಗೆ ವೈರುಧ್ಯ ಹೊಂದಿದ ಎಲ್ಲಾ ಜನ ವಿಭಾಗಗಳು ಇದರಲ್ಲಿ ಪಾಲ್ಗೊಂಡು ಇದಕ್ಕೆ ರಾಷ್ಟ್ರೀಯ ಬಂಡಾಯದ ಸ್ವರೂಪವನ್ನು ನೀಡಿದವು. ಬ್ರಿಟಿಷ್ ಇಂಡಿಯಾದ ಸುಮಾರು ಶೇ.25 ರಷ್ಟು ಜನಸಂಖ್ಯೆ ಮತ್ತು ಪ್ರದೇಶ(5 ಕೋಟಿ ಜನರು) ಬಂಡಾಯಗಾರರ ವಶಕ್ಕೆ ಬಂತು. ಕ್ವಿಂಗ್ ಮನೆತನದ ವಿರುದ್ಧ ನಡೆದ ಚೈನಾದ ಟಾಯ್‌ಪಿಂಗ್ ಬಂಡಾಯವೊಂದನ್ನು ಬಿಟ್ಟರೆ ಇಷ್ಟೊಂದು ಬೃಹತ್ ಪ್ರಮಾಣದ ಬಂಡಾಯ ಮತ್ತೊಂದಿಲ್ಲಾ. ಭಾರತದ ಈ ಕ್ರಾಂತಿ ಆಧುನಿಕ ಯುರೋಪಿನ ಕ್ರಾಂತಿಯಂತಿಲ್ಲ. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ವರ್ಗವಾಗಲೀ, ಕಾರ್ಮಿಕ ವರ್ಗವಾಗಲೀ ಭಾರತದಲ್ಲಿ ರೂಪಿತಗೊಂಡಿರಲಿಲ್ಲ. ಕ್ರಾಂತಿಗೆ ನಾಯಕತ್ವವನ್ನೊದಗಿಸಬಲ್ಲ ಒಂದು ರಾಜಕೀಯ ಪಕ್ಷ ಕೂಡ ಇಲ್ಲಿರಲಿಲ್ಲ. ಈ ಬಂಡಾಯದಲ್ಲಿ



ಸಮವಸ್ತ್ರದಲ್ಲಿನ ರೈತರೇ ಹೋರಾಟ ಮಾಡಿದರೂ ಅವರು ಸಾಂಪ್ರದಾಯಿಕ ಮುಖಂಡರು ಮತ್ತು ಧಾರ್ಮಿಕ ಚಿಹ್ನೆಗಳನ್ನು ಅವಲಂಬಿಸಿದ್ದರು. ಭಾರತ ಇನ್ನೂ ಬಂಡವಾಳಶಾಹಿ ಪೂರ್ವ ವ್ಯವಸ್ಥೆಯಲ್ಲಿತ್ತು. ಇಂತಹ ಸಾಮಾಜಿಕ ಪರಿಸ್ಥಿತಿಯಲ್ಲಿ ರಾಜಮಹಾರಾಜರು ಅಥವಾ ಜಮೀನ್ದಾರಿ ವರ್ಗ ಮಾತ್ರ ನಾಯಕತ್ವ ನೀಡಲು ಸಾಧ್ಯವಿತ್ತು. ಈ ಹೋರಾಟ ರಾಷ್ಟ್ರ ರಾಜ್ಯ (Nation State)ವೊಂದರ ಸ್ಥಾಪನೆಯ ಗುರಿಯನ್ನಾಗಲಿ ಅಥವಾ 20ನೇ ಶತಮಾನದ ಆಧುನಿಕ ರಾಷ್ಟ್ರೀಯತೆಯನ್ನು ಸ್ಥಾಪಿಸುವ ಗುರಿಯನ್ನಾಗಲಿ ಹೊಂದಿರಲಿಲ್ಲ. ವಸಾಹತುಶಾಹಿ ಆಳ್ವಿಕೆಯಿಂದ ಮರ್ಧಿಸಲ್ಪಟ್ಟ, ಶೋಷಿಸಲ್ಪಟ್ಟ, ರಾಜರು ಪಾಳೇಗಾರರು, ಕುಶಲಕರ್ಮಿಗಳು, ಕಸುಬುದಾರರು, ರೈತರು ಮುಂತಾದ ಜನ ವಿಭಾಗಗಳು ನಡೆಸಿದ ಬಂಡಾಯವಾಗಿತ್ತು. ವಸಾಹತುಗಳಾಗಿದ್ದ ದೇಶಗಳ ರಾಷ್ಟ್ರೀಯತೆಯ ಪ್ರಜ್ಞೆ ಪರಕೀಯರ ಆಳ್ವಿಕೆಯ ವಿರುದ್ಧ ನಡೆಯುವ ಹೋರಾಟಗಳ ಮೂಲಕ ರೂಪಿತಗೊಳ್ಳುತ್ತದೆ. ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡಾಗ ಆಧುನಿಕ ಅರ್ಥದಲ್ಲಿ ಅದು ರಾಷ್ಟ್ರವಾಗಿರಲಿಲ್ಲ. ಇದೊಂದು ಐತಿಹಾಸಿಕ ಸತ್ಯ ಮತ್ತು ಇದನ್ನು ನಮ್ಮ ಜನರನ್ನು ಹೀಗಳೆಯುವುದೆಂದೂ ಭಾವಿಸಬೇಕಾಗಿಲ್ಲ. ಇಂಗ್ಲೆಂಡ್ ಆಗಲಿ ಫ್ರಾನ್ಸ್ ಆಗಲಿ ಆ ದೇಶಗಳಲ್ಲಿ ಬಂಡವಾಳಶಾಹಿ ಉಗಮಕ್ಕೆ ಮುನ್ನ ಆಧುನಿಕ ಅರ್ಥದಲ್ಲಿ ಭಾರತ ಒಂದು ರಾಷ್ಟ್ರವಾಗಿರಲಿಲ್ಲ ಎಂದು ಹೇಳಿದ ಮಾತ್ರಕ್ಕೆ ಭಾರತೀಯರು ಪರಸ್ಪರ ಪರಕೀಯರಾಗಿದ್ದರೆಂದು ವಿವಿಧ ಪ್ರದೇಶ ಜನರ ನಡುವೆ ಯಾವುದೇ ಸಾಮ್ಯತೆಗಳಿರಲಿಲ್ಲವೆಂದು ಅರ್ಥವಲ್ಲ. ಸಾಮಾನ್ಯ, ಸಂಸ್ಕೃತಿ, ಮನೋಭಾವ, ತಾತ್ವಿಕ ಸಂಪ್ರದಾಯಗಳು ಮತ್ತು ಭಾರತದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ಹಬ್ಬಿದೆ ಎಂಬ ಬಲವಾದ ಅಭಿಪ್ರಾಯ ಈ ಜನರಲ್ಲಿ ರೂಪಿತಗೊಂಡಿತ್ತು. ಈ ಸಾಮಾನ್ಯ ಸಂಸ್ಕೃತಿ, ಆರ್ಥಿಕ ಐಕ್ಯತೆ ಬದ್ಧತೆಯಿಂದ ಮತ್ತಷ್ಟು ಬಲಗೊಂಡ ಜನತೆ ಬ್ರಿಟಿಷರ ವಿರುದ್ಧ ಒಗ್ಗೂಡಲು ಸಹಕಾರಿಯಾಯಿತು. ನಮ್ಮ ರಾಷ್ಟ್ರೀಯ ಹೋರಾಟದ ಆರಂಭದ ವರ್ಷಗಳಲ್ಲಿ ರಾಷ್ಟ್ರೀಯ ನಾಯಕರು ಭಾರತ ಯಾವಾಗಲೂ ಒಂದು ರಾಷ್ಟ್ರವಾಗಿತ್ತೆಂದು ಒತ್ತಾಯ ಪೂರ್ವಕವಾಗಿ ಹೇಳುವುದು ಸ್ವಾಭಾವಿಕವೂ ಮತ್ತು ಅನಿವಾರ್ಯವೂ ಆಗಿತ್ತು. ಆದರೆ ಅದು ಹಾಗಿರಲಿಲ್ಲವೆಂದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿತ್ತು ಮತ್ತು ರಾಷ್ಟ್ರೀಯತೆಯನ್ನು ರೂಪಿಸುವ ಪ್ರಕ್ರಿಯೆ ಈಗಲೂ ಮುಂದುವರಿಯುತ್ತಿದೆ. ಭಾರತದಂತಹ ಅಗಾಧ ಆಯಾಮಗಳುಳ್ಳ ದೇಶವನ್ನು ವಿದೇಶಿಯರಿಗೆ ನಮ್ಮ ದೇಶದ ಸೈನ್ಯವೇ ಆಕ್ರಮಿಸಿ ಗೆದ್ದುಕೊಟ್ಟಿತ್ತೆಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿದೆ. ಬ್ರಿಟಿಷ್ ಆಳ್ವಿಕೆ ಜಾರಿಗೆ ಬಂದ ನೂರ ವರ್ಷಗಳ ನಂತರವೇ ಗುಲಾಮರಾಗಿಸಿಕೊಂಡವರ ವಿರುದ್ಧ ರಾಷ್ಟ್ರೀಯ ಪ್ರತಿರೋಧವೊಂದನ್ನು ನಮಗೆ ರೂಪಿಸಲು ಸಾಧ್ಯವಾದದ್ದು. ಬಂಡವಾಳಶಾಹಿ ಸಂಬಂಧಗಳು ದುರ್ಬಲವಾಗಿರುವೆಡೆಗಳಲ್ಲಿ ಆಧುನಿಕ ದುಡಿಯುವ ವರ್ಗ ಅತಿ ಕಡಿಮೆ ಸಂಖ್ಯೆಯಲ್ಲಿರುವಡೆಯಲ್ಲಿ ಮತ್ತು ಅದರ ಪ್ರಜ್ಞೆ ಹಳೇ ಸಂರಚನೆಯ ಪ್ರಭಾವದಲ್ಲೇ ಉಳಿದಿರುವ ಕಡೆಗಳಲ್ಲಿ ರಾಷ್ಟ್ರ ರೂಪಿಸುವ ಹೋರಾಟಗಳಿಗೆ ಹೆಚ್ಚಾಗಿ ಹೊಸ ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಪ್ರತಿನಿಧಿಸುವ ಬುದ್ಧಿಜೀವಿಗಳು ನೇತೃತ್ವ ಕೊಡುತ್ತಾರೆ. ಅಲ್ಲಿಯವರೆವಿಗೂ ವಿದೇಶಿ ಆಳ್ವಿಕೆಯ ವಿರುದ್ಧ ನಡೆಯುವ ಹೋರಾಟ ವಿಭಜಿತಗೊಂಡ ಭಾಗಗಳಲ್ಲೇ ನಡೆಯುತ್ತಿರುತ್ತದೆ. ಕೆಲವೊಮ್ಮೆ ಅದು ರಾಷ್ಟ್ರೀಯ ದಂಗೆಯ ಸ್ವರೂಪವನ್ನು ಪಡೆದುಕೊಂಡರೂ ಅದನ್ನು ಹಲವು ವರ್ಷಗಳ ಕಾಲ ಮುಂದುವರಿಸಿಕೊಂಡು ಹೋಗಲು ಅಗತ್ಯವಾದ ಸೂಕ್ತ ಸಿದ್ಧಾಂತವನ್ನಾಗಲಿ ಇಲ್ಲವೇ ಕಾರ್ಯಕ್ರಮವನ್ನಾಗಲೀ ಹೊಂದಿರುವುದಿಲ್ಲ. ಒಂದು ದೇಶದ ಜನ ವಿದೇಶಿಯರ ವಿರುದ್ಧ ಹೋರಾಡುವಾಗ ಎಲ್ಲಾ ಸ್ತರದ ಹೋರಾಟಗಾರರಲ್ಲಿ ಸಂಪೂರ್ಣ ಸಮಾಂಗೀಯತೆಯ ಭ್ರಮೆಯನ್ನು ಅತ್ಯಂತ ಸುಲಭವಾಗಿ ಸೃಷ್ಟಿಸಬಹುದಾಗಿದೆ. ವಿವಿಧ ಆಸಕ್ತಿಗಳ ಪಾತ್ರ ಮತ್ತು ವಿದೇಶಿ ಆಡಳಿತಗಾರರೊಂದಿಗೆ ಅವರು ಹೊಂದಿರಬಹುದಾದ ಸಂಬಂಧಗಳ ಬಗ್ಗೆ ಆ ಸಂದರ್ಭದಲ್ಲಿ ಗಮನ ಹರಿಸಲಾಗುವುದಿಲ್ಲ.

ಈ ಬಂಡಾಯವನ್ನಾರಂಭಿಸಿದ ಸಿಪಾಯಿಗಳಿಗೆ ಆಧುನಿಕ ಮಿಲಿಟರಿ ಸಂಘಟನೆಯ ಮತ್ತು ನಾಯಕತ್ವದ ಪೂರ್ಣ ಅರಿವಿತ್ತು. ಅವರಿಗೆ ಪಾಳೇಗಾರಿಶಾಹಿ ವರ್ಗಗಳೊಂದಿಗೆ ಯಾವುದೇ ಸಂಬಂಧಗಳಿರಲಿಲ್ಲ.

ಮುಂದುವರಿಯುವುದು

ಬಾಗಿನ ಕೊಡೋದು ಹೆಂಗಸರಲ್ವೆ ?

ಶ್ರೀನಿವಾಸ

'ಅಪ್ಪಾ'

'ಏನು ಮಗಳೇ?'

'ಪ್ರತಿಭಾ ಪಾಟೀಲ್ ಯಾರು?'

'ಇದೇನು ಮಗಳೇ ನನಗೆ ಜನರಲ್ ನಾಲೇಜ್ ಟೆಸ್ಟಾ? ಪ್ರತಿಭಾ ಪಾಟೀಲ್ ನಮ್ಮ ರಾಷ್ಟ್ರದ ಪ್ರಪ್ರಥಮ ಮಹಿಳಾ ರಾಷ್ಟ್ರಪತಿಯವರಲ್ಲವೇ?'

'ಅಪ್ಪಾ ಅವರನ್ನು ಮಹಿಳಾ ರಾಷ್ಟ್ರಪತಿ ಅಂತ ಯಾಕೆ ಕರೀತೀರಿ?'

'ಇದೇನು ಮಗಳೇ ಹೀಗೆ ಕಾಮಿಡಿ ಮಾಡ್ತೀಯಾ? ಅವರು ಮಹಿಳೆ ಆದ್ದರಿಂದ ಅವರನ್ನು ಮಹಿಳಾ ರಾಷ್ಟ್ರಪತಿ ಅಂತಾರಲ್ವೇ?'

'ಅಪ್ಪಾ ಹಿಂದೆ ಇಂದಿರಾಗಾಂಧಿ ಪ್ರಧಾನ ಮಂತ್ರಿಯಾಗಿದ್ದರು. ಅವರನ್ನು ಮಹಿಳಾ ಪ್ರಧಾನಮಂತ್ರಿ ಅಂತ ಕರೀತಿದ್ರಾ'? 'ಇಲ್ಲ ಮಗಳೇ, ನಿನಗೊಂದು ವಿಷ್ಯಗೊತ್ತಾ? ಇಂದಿರಾಗಾಂಧಿಯವರನ್ನು ಅವರ ಸಂಪುಟದ ಏಕೈಕ ಗಂಡು ಅಂತ ಕರೀತಿದ್ರು. ಹ್ಹ ಹ್ಹ ಹ್ಹಾ....'

'ಅಪ್ಪಾ ಮನಮೋಹನ್‌ಸಿಂಗ್ ಅವರನ್ನು ಪುರುಷ ಪ್ರಧಾನ ಮಂತ್ರಿ ಅಂತ ಕರೆಯುವುದು ಒಳ್ಳೆದಲ್ವಾ?'

'ಯಾಕೆ ಮಗಳೇ'?

'ಏನಿಲ್ಲ ಅವರಿಗೆ ಆಗಾಗ್ಗೆ ನೆನಪು ಮಾಡೋದು ಒಳ್ಳೇದೇನೋ ಅನ್ನುಸ್ತು'

'ಹಾಗೆಲ್ಲ ಅನ್ನಬಾರದು ಮಗಳೇ'

'ಅಪ್ಪಾ'

'ಏನು ಮಗಳೇ'?

'ಬಾಗಿನ ಕೊಡೋದು ಯಾರು?'

'ಬಾಗಿನ ಕೊಡೋದು ಹೆಣ್ಣು ಮಕ್ಕಳಲ್ವೇ?

'ಅಪ್ಪ ಕರ್ನಾಟಕದಲ್ಲಿ ಮಂತ್ರಿಗಳೆಲ್ಲ ಹೆಂಗಸರೇ?'

'ಛೇ ಇದೇನು ಮಗಳೇ ಹೀಗಂತೀಯ. ಕರ್ನಾಟಕದ ಮಂತ್ರಿ ಮಂಡಲದಲ್ಲಿ ಒಬ್ಬ ಹೆಂಗಸೂ ಇಲ್ಲವಲ್ಲ.'

'ಹಾಗಾದ್ರೆ ಅಪ್ಪಾ ಅವರೆಲ್ಲ ಗಂಡಸರು ಅಂತೀಯಾ?'

'ಛೇ ಮಗಳೇ ಯಾಕೋ ಏನೇನೋ ಮಾತಾಡ್ತೀದೀಯ. ನಾವು ಕೈಗೆ ಬಳೆ ತೊಟ್ಟುಕೊಂಡು ಕೂತಿಲ್ಲ ಅಂತ ಆಗಾಗ್ಗೆ ಹೇಳ್ತಿರ್‍ತಾರಲ್ಲ?'

'ಆದ್ರೆ ಅಪ್ಪ ಈ ಬಳೆ ತೊಡದ ಗಂಡಸರು ನದಿ, ಡ್ಯಾಮು, ಕೆರೆ ತುಂಬಿದಾಗ ಬಾಗಿನ ಬಿಸಾಕೋದು ಯಾಕೆ'?

'ನಿನ್ನ ಪ್ರಶ್ನೆಲೇ ಉತ್ತರ ಇದೆಯಲ್ಲ. ಮಹಿಳೆಯರು ಬಾಗಿನ ಕೊಡ್ತಾರೆ. ಪುರುಷರು ಬಾಗಿನ ಬಿಸಾಕ್ತಾರೆ'.

'ಇದೇನಪ್ಪ ನೀನೂ ಹೀಗೆ ಮಾತಾಡ್ತೀಯಾ? ಬಾಗಿನ ಕೊಡೋದು ಒಂದು ಪೂಜಾ ವಿಧಾನ. ಬಾಗಿನ ಬಿಸಾಕಿದ್ರೆ ಅಗೌರವ ಅಪಚಾರ ಅಲ್ವೇ'?

'ಏನೋ ಮಗಳೇ, ಧಾರ್ಮಿಕ ಕಾರ್ಯಕ್ರಮಗಳನ್ನು ಅವರವರ ಮನಸ್ಸಿಗೆ ತೋಚಿದ ಹಾಗೆ ಮಾಡ್ತಾರೆ. ಅದರಲ್ಲಿ ಸರಿ ತಪ್ಪು ಅನ್ನೋದು ಅವರವರ ಭಕ್ತಿ ಭಾವಗಳಿಗೆ ಸಂಬಂಧಪಟ್ಟಿದ್ದು.'

'ಏನಪ್ಪ ನಾನು ಸೀರಿಯಸ್ ಆಗಿ ಕೇಳ್ದಾಗ ನೀನು ಕಾಮಿಡಿ ಮಾಡ್ತೀಯಾ. ನಾನು ತಮಾಷೆಗೆ ಕೇಳ್ದಾಗ ನೀನು ಸೀರಿಯಸ್ ಆಗ್ತಿಯಾ'

'ಅಲ್ಲ ಮಗಳೇ ಅಸಾಧ್ಯವಾದ ಬೇಡಿಕೆಗಳನ್ನಿಟ್ಟು ಹೋಮ ಹವನ ಮಾಡ್ತಾರೆ ಸರೀನಾ?'

'ಅಪ್ಪಾ ನೀನು ಯಾವ ವಿಷಯ ಹೇಳ್ತಿದೀಯಾ?'

'ಆಗ ಭಾರತ ವಿಶ್ವಕಪ್ ಗೆಲ್ಲಲಿ ಅಂತ ಕೆಲವರು ಹೋಮ ಮಾಡಿದ್ರು. ಈಗ ಯಾರೋ ದೇವೇಗೌಡರ ಕುಟುಂಬಕ್ಕೆ ಸದ್ಬುದ್ಧಿಯನ್ನು ದೇವರು ಕೊಡಲಿ ಅಂತ ಹೋಮ ಮಾಡಿದ್ರಂತೆ. ದೇವರು ಈಡೇರಿಸಲಾಗದಂಥ ಇಂಥ ಕಠೋರ ಬೇಡಿಕೆಗಳನ್ನು ಇಟ್ಟು ಹೋಮ ಮಾಡುವುದು ಸರಿಯೇ'?

'ಗೊತ್ತಿಲ್ಲಪ್ಪ, ಆದ್ರೆ ನಾನೇನೂ ಹೇಳ್ತಿದ್ದೆ. ಆದ್ರೆ ನೀನು ಏನೇನೋ ಹೇಳಿ ವಿಷಯಾಂತರ ಮಾಡಿ ಬಿಟ್ಟೆಯಲ್ಲ'

'ಈ ರಾಜಕೀಯ- ಧಾರ್ಮಿಕ ವಿಚಾರ ಸಾಕಲ್ವ ಮಗಳೆ'

'ಈಗ ಸಾಕು ಅಪ್ಪ'

ದಂಧೆಕೋರರಿಗೆ ಜೀವನ ಅಡವಿಡಲು ಸಿದ್ಧರಿಲ್ಲ'
ನಂದಗುಡಿ ರೈತರ ಅಂತರಾಳದ ನುಡಿ

ಶೇಷ ಆರ್ಥಿಕ ವಲಯ(sez) ಪನೆಯಾಗಲಿರುವ ಹೊಸಕೋಟೆ ಸಮೀಪದ ದಗುಡಿಗೆ ಪ್ರವೇಶಿಸುತ್ತಿದ್ದಂತೆ ಅಲ್ಲಿನ ರೈತರು, ನರ ಮುಖ ಭಾವನೆಗಳಲ್ಲಿ ಆತಂಕ ಎದ್ದು ಣುತ್ತದೆ. ಎಸ್‌ಇಜಡ್ ಕುರಿತು ಅವರಲ್ಲಿ ಮನೆ ಡಿರುವ ಅನುಮಾನ, ಗೊಂದಲ ೀಚರವಾಗುತ್ತದೆ. ಭವಿಷ್ಯದ ಬಗ್ಗೆ ಅಲ್ಲಿನ ನತೆಯ ಎದೆಯಾಳದಲ್ಲಿ ಅಡಗಿರುವ ನೋವುಗಳು ಮ್ಮನ್ನು ಆಹ್ವಾನಿಸುತ್ತವೆ. ಇಂತಹ ಭೀಕರ ರಿಸ್ಥಿತಿಯಲ್ಲಿಯೂ ಕೆಲವರು ಲಾಭ ನಷ್ಟಗಳ ಕ್ಕಾಚಾರದಲ್ಲಿ ತೊಡಗಿದ್ದರೆ ಮತ್ತೆ ಕೆಲವರು ರಿಸ್ಥಿತಿಯ ದುರ್ಲಾಭ ಪಡೆಯುವ ಮಾರ್ಜಾಲ ್ಯಯದಲ್ಲಿ ನಿರತವಾಗಿರುವಂತೆ ಕಾಣುತ್ತದೆ.

ಜುಲೈ 21ರ ಶನಿವಾರ ಮಾರ್ಕ್ಸ್‌ವಾದಿ ಮ್ಯೂನಿಸ್ಟ್ ಪಕ್ಷದ ನಿಯೋಗ ನಂದಗುಡಿ ಪ್ರದೇಶಕ್ಕೆ ೇಟಿ ನೀಡಿತ್ತು. ಈ ಸಂದರ್ಭದಲ್ಲಿ ಹಲವಾರು ೈತ್ರ ಮುಖಂಡರು, ರೈತರು, ಕೃಷಿ ಕೂಲಿಕಾರರು, ವಿಧ ಸಂಘಟನೆಗಳ ಮುಖಂಡರು ುತ್ತಿತರರೊಂದಿಗೆ ಚರ್ಚಿಸಿತು. ಪರಿಸ್ಥಿತಿಯ ೂಲಂಕುಶ ಪರಿಶೀಲನೆ ನಡೆಸಿತು. ನಿಯೋಗದಲ್ಲಿ ೆಂಗಳೂರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಿ.ಎನ್.ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಕರ್ನಾಟಕ ಪ್ರಾಂತ ರೈತಸಂಘದ ಮುಖಂಡರಾದ ವೆಂಕಟಾಚಲಯ್ಯ, ಕಾರ್ಮಿಕ ಮುಖಂಡರಾದ ಕೆ.ಎನ್.ಉಮೇಶ್, ಪ್ರಾಂತ ರೈತಸಂಘದ ಹೊಸಕೋಟೆಯ ಮುಖಂಡರಾದ ಮನೋಹರ್, ಕೆಂಚೇಗೌಡ ಮತ್ತಿತರರು ಉಪಸ್ಥಿತರಿದ್ದರು.

'ಸ್ಕಿಲ್' ಅಲ್ಲ 'ಕಿಲ್' ಕಂಪನಿ

ನಂದಗುಡಿಯಲ್ಲಿ ಸ್ಥಾಪಿಸಲು ಹೊರಟಿರುವ ವಿಶೇಷ ಆರ್ಥಿಕ ಯೋಜನೆ ಕೆಲವಷ್ಟು ಮಂದಿಗೆ ಲಾಭದಾಯಕವಾಗಲಿರುವುದನ್ನು ಹೊರತುಪಡಿಸಿದರೆ, ಬಹುತೇಕ ಮಂದಿಯನ್ನು ಬಿ ಬಿಕಾರಿಗಳನ್ನಾಗಿ ಮಾಡುತ್ತದೆ ಎಂಬುದು ಸರ್ವವಿಧಿತ. ನಿರ್ಮಾಣ ಯೋಜನೆಯನ್ನು ಕೈಗೊಳ್ಳಲಿರುವ ಸ್ಕಿಲ್ ಕಂಪನಿ ಯಮಧರ್ಮನ ರಾಯಭಾರಿಯಂತೆ 'ಕಿಲ್ ಕಂಪನಿ'ಯಾಗಿ ನಂದುಗುಡಿ ಪ್ರವೇಶಿಸಿದೆ ಎಂಬುದರಲ್ಲಿ ಲವಲೇಶವೂ ಅನುಮಾನಗಳಿಲ್ಲ. ಯಾವ ಉದ್ದೇಶಕ್ಕೆ, ಕೈಗಾರಿಕೆಗಳ ಸ್ಥಾಪನೆಗೆ ಎಸ್‌ಇಜಡ್ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಸರ್ಕಾರವಾಗಲಿ, ಕಂಪನಿಯಾಗಲಿ ಇದುವರೆಗೂ ತುಟಿ ಬಿಚ್ಚಿಲ್ಲ. ಈ ಕುರಿತು ತಾಲೂಕು ದಂಡಾಧಿಕಾರಿ ತಹಶೀಲ್ದಾರರನ್ನು ವಿಚಾರಿಸಿದರೇ ಈ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದು ಅಸಹಾಯಕರಾಗಿ ಕೈಚೆಲ್ಲುತ್ತಾರೆ. ಅಪಾರ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗುವುದೆಂದು ಬೊಗಳೆ ಬಿಡಲಾಗುತ್ತಿದೆ. ಆದರೆ ಇದುವರೆಗೂ ಯಾವುದೇ ಸ್ಪಷ್ಟ ವಿವರಗಳನ್ನು ಒದಗಿಸಿಲ್ಲ. ಸರ್ಕಾರ ಮತ್ತು ರೈತರ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆಗೆ ಬಳಕೆ ಮಾಡಿಕೊಂಡು ಅಲ್ಲಿನ ರೈತರು, ಕೃಷಿ ಕೂಲಿಕಾರ್ಮಿಕರನ್ನು ಹೊರಗಟ್ಟುವ ಪಿತೂರಿ ಹೆಣೆಯಲಾಗಿದೆ ಎಂಬುದನ್ನು ಸಾಮಾನ್ಯ ಜ್ಞಾನ ರುವ ಎಲ್ಲರೂ ಊಹಿಸಬಹುದಾಗಿದೆ.

ರೈತರೊಂದಿಗೆ ಸಭೆ

ನಂದಗುಡಿ ಪ್ರಮುಖ ರಸ್ತೆಯ ಕೆನರಾಬ್ಯಾಂಕ್ ಕಟ್ಟಡದ ಮೇಲೆ ಹಲವಾರು ಹಿರಿಯ ನಾಗರಿಕರು, ರೈತರು, ವಿವಿಧ ಸಂಘಸಂಸ್ಥೆಗಳ ಮುಖಂಡರು, ಕೂಲಿಕಾರ್ಮಿಕರು, ಪಕ್ಷದ ಹಿತೈಷಿಗಳು ಸೇರಿದ್ದ ಸಭೆ ಉದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡಿದರು. ಈ ಸಭೆಯಲ್ಲಿ ಹಲವು ಮಾಧ್ಯಮ ಪ್ರತಿನಿಧಿಗಳೂ ಉಪಸ್ಥಿತರಿದ್ದರು. ಪಕ್ಷದ ನಿಲುವನ್ನು ಮತ್ತು ನಂದಗುಡಿ ವ್ಯಾಪ್ತಿಯ ರೈತರು, ಜನತೆ, ಕೃಷಿ ಕೂಲಿಕಾರರ ಮೇಲಾಗುವ ದುಷ್ಪರಿಣಾಮಗಳನ್ನು ಎಳೆಎಳೆಯಾಗಿ ವಿವರಿಸಿದರು. ರೈತರಿಗೆ ಸ್ಥಳೀಯ ಜನತೆಯ ಜೀವನಗಳಿಗೆ ಈ ಯೋಜನೆಯಿಂದ ಧಕ್ಕೆಯಾಗುವಂತಿದ್ದರೆ ಇದನ್ನು ಹಿಮ್ಮೆಟ್ಟಿಸಲು ರೂಪಿಸುವ ಹೋರಾಟಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಕ್ರಿಯವಾಗಿ ಭಾಗವಹಿಸಲಿದೆ ಎಂದು ಹೇಳಿದರು.


ನಂದಗುಡಿ ರೈತರ ಪ್ರತಿಭಟನೆ

ಕೇಂದ್ರ ಸರ್ಕಾರ ಎಸ್‌ಇಜಡ್ ಕಾನೂನು ಜಾರಿಗೆ ತಂದಾಗ ಇದರ ಅಪಾಯವನ್ನು ಅರಿತ ಸಿಪಿಎಂ ಪಕ್ಷ ಮೊಟ್ಟ ಮೊದಲ ಬಾರಿಗೆ ತಿದ್ದುಪಡಿ ತರಬೇಕೆಂದು ಒತ್ತಾಯಿಸಿತು. ರೈತರ ಫಲವತ್ತಾದ, ಬಹುಬೆಳೆಯ ಕೃಷಿ ಭೂಮಿ ಸ್ವಾಧೀನ ಮಾಡಿಕೊಳ್ಳಬಾರದು, ಸಮರ್ಪಕ ಪುನರ್ ವಸತಿ ಯೋಜನೆ ರೂಪಿಸಬೇಕು. ಉದ್ಯೋಗ ಸೃಷ್ಟಿಯಾಗುವ ಕೈಗಾರಿಕೆಗಳನ್ನು ಮಾತ್ರ ಸ್ಥಾಪಿಸಬೇಕು ಎಂದು ಒತ್ತಾಯಿಸಿರುವುದನ್ನು ಅಲ್ಲಿ ನೆರೆದಿದ್ದವರಿಗೆ ಮನದಟ್ಟು ಮಾಡಿಕೊಟ್ಟರು. ಭೂಮಿ ಕಳೆದುಕೊಳ್ಳುವ ರೈತ ಕುಟುಂಬಗಳಿಗೆ, ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಯಾವುದೇ ಕಾರಣಕ್ಕೂ ಹೆಚ್ಚುವರಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಬಾರದೆಂಬ ಹಲವಾರು ಪರ್ಯಾಯ ಪ್ರಸ್ತಾವನೆಗಳನ್ನು ಸಿಪಿಎಂ ಪಕ್ಷ ನೀಡಿದೆ ಎಂದು ವಿವರಿಸಿದರು. ಎಸ್‌ಇಜಡ್‌ನ ಗಾತ್ರ ಮತ್ತು ಅಲ್ಲಿ ಸ್ಥಾಪಿಸುವ ಕೈಗಾರಿಕೆಗೆ ಅಗತ್ಯವಾದಷ್ಟು ಭೂಮಿ ಹೊರತಾಗಿ ಹೆಚ್ಚಿನ ಭೂಮಿ ಸ್ವಾಧೀನಕ್ಕೆ ತೀವ್ರವಾಗಿ ವಿರೋಧ ವ್ಯಕ್ತಪಡಿಸಿದ್ದನ್ನು ಹೇಳಿದರು.


ಹಸಿರು ಮುಕ್ಕಳಿಸುವ ಹೊಲದ ಆಹುತಿ ಆಗಲೇಬೇಕೆ?


ಎಸ್‌ಇಝಡ್‌ಗೆ 4750 ಎಕರೆ ಸರ್ಕಾರಿ ಭೂಮಿ ಸಾಲದೆ?

ಇರುವ ಸರ್ಕಾರಿ ಭೂಮಿಯೇ ಸಾಕು

ನಂದಗುಡಿ ಪ್ರದೇಶದಲ್ಲಿ 4,745 ಎಕರೆ ಸರ್ಕಾರದ ಭೂಮಿ ಇದ್ದು ಅದರಲ್ಲೇ ಎಸ್‌ಇಜಡ್ ಅಭಿವೃದ್ಧಿಪಡಿಸಬೇಕೆಂದು ಒತ್ತಾಯಿದರು. ಯಾವುದೇ ಕಾರಣಕ್ಕೂ ರೈತರ ಒಂದಿಂಚು ಭೂಮಿ ಸ್ವಾಧೀನಕ್ಕೆ ಅವಕಾಶ ನೀಡುವುದಿಲ್ಲ ಎಂದು ಜಿ.ಎನ್.ನಾಗರಾಜ್ ಖಡಾಖಂಡಿತವಾಗಿ ಹೇಳಿದರು. ಹಾಗೇನಾದರೂ ನಡೆದಲ್ಲಿ ಸಮರಧೀರ ಹೋರಾಟಗಳನ್ನು ಕೈಗೊಳ್ಳುವುದಾಗಿ ಎಚ್ಚರಿಸಿದರು. ದೇಶದಲ್ಲಿ ಇಲ್ಲದಿರುವ ಉನ್ನತವಾದ, ಉತ್ತಮ ತಂತ್ರಜ್ಞಾನಗಳನ್ನು ಆಮದು ಮಾಡಿಕೊಂಡು ಎಸ್‌ಇಜಡ್ ಅಭಿವೃದ್ಧಿಪಡಿಸಬೇಕು. ಗರಿಷ್ಠ ಭೂಮಿ ಬಳಕೆ 5000 ಎಕರೆಗಳನ್ನು ಮೀರಬಾರದು ಎಂದು ಆಗ್ರಹಿಸಿದರು. ಭೂಮಿಯು ಖಾಸಗಿಯವರ ಸ್ವತ್ತಾಗದಂತೆ ತಡೆಯಬೇಕೆಂಬುದು ಸಿಪಿಎಂ ಪಕ್ಷದ ನಿಲುವಾಗಿದೆ. ಭೂಮಿಯನ್ನು ಸರ್ಕಾರವೇ ಸ್ವಾಧೀನ ಮಾಡಿಕೊಂಡು ನಿಗದಿತ ಅವಧಿಗೆ ಕಂಪನಿಗೆ ಲೀಸ್ ಆಧಾರದಲ್ಲಿ ಒದಗಿಸಬೇಕು. ಅವಧಿ ಮುಗಿದ ನಂತರ ಭೂಮಿ ಮತ್ತೆ ಸರ್ಕಾರದ ಸ್ವತ್ತಾಗಬೇಕೆಂದು ಒತ್ತಿ ಹೇಳಿದರು.

ನಂದಗುಡಿಗೆ ನಿಷೇಧ

5000 ಎಕರೆ ಪ್ರದೇಶದಲ್ಲಿ ಎಸ್‌ಇಜಡ್ ನಿರ್ಮಾಣ ಮಾಡಲು ಸಾಧ್ಯವಿದ್ದು, 12,500 ಎಕರೆ ಪಡೆಯುವುದು ಸಮರ್ಥನೀಯವಲ್ಲ. ಈ ಕುರಿತು ಸರ್ಕಾರ ಮತ್ತು ಕಂಪನಿಗಳು ಮಾಹಿತಿ ನೀಡುವಲ್ಲಿ ನಂದುಗುಡಿ ಪ್ರದೇಶದ ಜನತೆಗೆ ವಂಚನೆ ಮಾಡುತ್ತಿವೆ ಎಂದು ಜಿಎನ್ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿ ಗ್ರಾಮಗಳಲ್ಲೂ ಸರ್ಕಾರ ಗ್ರಾಮಸಭೆಗಳನ್ನು ನಡೆಸಿ ಯೋಜನೆ ಕುರಿತು ಸಂಪೂರ್ಣ ಮಾಹಿತಿ ನೀಡಬೇಕು. ಆ ಸಭೆಗಳಲ್ಲಿ ಬರುವ ಸಲಹೆ ಸೂಚನೆಗಳಿಗೆ ಅನುಗುಣವಾಗಿ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದರು. ಈ ಯೋಜನೆಯಡಿ ಸ್ಥಾಪಿಸುವ ಕೈಗಾರಿಕೆಗಳಿಗೆ ಅನುಗುಣವಾಗಿ ಸ್ಥಳೀಯ ಜನತೆಗೆ ಪೂರ್ವಭಾವಿಯಾಗಿ ಈಗಿಂದೀಗಲೆ ತರಬೇತಿಗಳನ್ನು ಆರಂಭಿಸಬೇಕೆಂದು ತಿಳಿಸಿದ ಜಿಎನ್, ಸಂಸತ್, ವಿಧಾನಸಭೆ ಒಳಗೂ ಹೊರಗೂ ಇತರ ಎಲ್ಲ ಸಂಘಸಂಸ್ಥೆಗಳೊಡಗೂಡಿ ವ್ಯಾಪಕ ಹೋರಾಟಗಳನ್ನು ನಡೆಸುವುದಾಗಿ ತಿಳಿಸಿದರು.

ಸಹಜವಾಗಿ ಅಲ್ಲಿನ ರೈತರಲ್ಲಿ ಹಲವಾರು ಅನುಮಾನಗಳು ನೆಲೆಗೊಂಡಿದ್ದವು. ಪಶ್ಚಿಮ ಬಂಗಾಳದ ಸಿಂಗೂರು ಕಾರು ತಯಾರಿಕಾ ಘಟಕ ಮತ್ತು ನಂದಿಗ್ರಾಮದಲ್ಲಿ ನಡೆದ ಸಾವಿನ ಘಟನೆಗಳ ಕುರಿತು ಹಲವಾರು ಪ್ರಶ್ನೆಗಳನ್ನು ನೆರೆದಿದ್ದವರು ಕೇಳಿದರು. ಸಿಂಗೂರು ಮತ್ತು ನಂದಿಗ್ರಾಮದ ಕುರಿತು ಅಲ್ಲಿನ ರೈತರಲ್ಲಿದ್ದ ತಪ್ಪು ಮಾಹಿತಿ, ವರದಿಗಳ ಕುರಿತು ಅವರಿಗೆ ಅರ್ಥವಾಗುವಂತೆ ವಿವರಿಸಲಾಯಿತು.

ಮೋಜಿನ ತಾಣಗಳು

ಸ್ಕಿಲ್ ಕಂಪನಿ ಯಾವುದೇ ಮಾಹಿತಿ ನೀಡದೆ ಯೋಜನೆ ಆರಂಭಿಸುತ್ತಿದ್ದು ಇದು ರೈತರು ಮತ್ತು ಇಲ್ಲಿನ ಜನತೆಯನ್ನು ವಂಚಿಸುವ ಯೋಜನೆಯಾಗಿದೆ ಎಂದು ಪ್ರಕಾಶ್ ಹೇಳಿದರು. ದೇವನಹಳ್ಳಿ ಸಮೀಪ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಆರಂಭವಾಗಿದ್ದು ಅದರ ಹಿನ್ನೆಲೆಯಲ್ಲಿ ನಂದಗುಡಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದೊಂದು ರಿಯಲ್ ಎಸ್ಟೇಟ್ ದಂಧೆಯಲ್ಲದೆ ಮತ್ತೇನೂ ಅಲ್ಲ ಎಂದು ಖಚಿತವಾಗಿ ಹೇಳಿದರು. ಈ ಪ್ರದೇಶದಲ್ಲಿನ ಫಲವತ್ತಾದ ಭೂಮಿ ಖರೀದಿಸಿ ರೆಸಾರ್ಟ್‌ಗಳು, ಕ್ಲಬ್‌ಗಳು, ಮೋಜಿನ ತಾಣಗಳು ಸ್ಥಾಪಿಸುತ್ತಾರೆ. ಸ್ಥಳೀಯ ಜನತೆ ಈ ಉದ್ಯಮಗಳಲ್ಲಿ ಕೂಲಿಕಾರರಂತೆ ಕೆಲಸ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಅಲ್ಲಿ ಹೇಗೆ?

30 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಪ್ರಗತಿಪರ ಭೂಸುಧಾರಣೆಗಳನ್ನು ಕೈಗೊಂಡಿದೆ. ಇಡೀ ರಾಜ್ಯದಲ್ಲಿ ಕೇವಲ ಶೇಕಡ ಒಂದರಷ್ಟು ಮಾತ್ರ ಬರಡು ಭೂಮಿಯಿದೆ. ಜನಸಂಖ್ಯೆ ಬೆಳೆಯುತ್ತಿದ್ದಂತೆ ಭೂಮಿ ಲಭ್ಯತೆ ಕಡಿಮೆಯಾಗಿ ಜೀವನ ನಿರ್ವಹಣೆಗಾಗಿ ಜನ ಇತರ ಉದ್ಯೋಗಗಳನ್ನು ಅರಸುವಂತಾಯಿತು. ಈ ಕುರಿತು ಗಂಭೀರವಾಗಿ ಚಿಂತನೆ ನಡೆಸಿದ ಸರ್ಕಾರ ಕೈಗಾರಿಕೆಗಳ ಅಭಿವೃದ್ಧಿಗೆ ಮುಂದಾಯಿತು. ಸಿಂಗೂರಿನಲ್ಲಿ ಟಾಟಾ ಕಾರು ತಯಾರಿಕಾ ಘಟಕಕ್ಕೆ ಭೂಮಿ ಒದಗಿಸುವಾಗ ಮಾರುಕಟ್ಟೆ ದರಕ್ಕಿಂತಲೂ ಒಂದೂವರೆ ಪಟ್ಟು ಹೆಚ್ಚು ಹಣ ನೀಡಲಾಗಿದೆ. ಸದರಿ ಕಾರ್ಖಾನೆಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವ ಕುರಿತು ಒಪ್ಪಂದ ಮಾಡಿಸಲಾಗಿದೆ. ಇಡೀ ಜಗತ್ತಿನಲ್ಲೇ ಇದೇ ಮೊದಲ ಬಾರಿಗೆ ಭೂಮಿ ರಹಿತ ಕೂಲಿಕಾರರಿಗೂ ಪರಿಹಾರ ದೊರಕಿಸಲಾಗಿದೆ ಎಂದು ವಿವರಿಸಿದರು.

ದಂಧೆಕೋರರಿಗೆ ಜೀವನ ಅಡವಿಡಬೇಕೆ?

ನಂತರ ನಿಯೋಗ ಗೋವಿಂದರಾಮ ಪುರ, ಇಟ್ಟಸಂದ್ರ, ಹನುಮಂತ ನಗರಗಳಿಗೆ ಭೇಟಿ ನೀಡಿತು. ಅಲ್ಲಿನ ರೈತರ ಜನರ ಮನದಾಳದ ನೋವನ್ನು ಆಲಿಸಿತು. ನಾವು ಜಮೀನು ಕಳೆದುಕೊಂಡು ಎಲ್ಲಿ ಹೋಗುವುದು ಸ್ವಾಮಿ, ಉದ್ಯಮಿಗಳ ಬಳಿ ಕೂಲಿಕಾರರಂತೆ ಕಾರ್ಯನಿರ್ವಹಿಸಲು ನಾವು ಸಿದ್ಧರಿಲ್ಲ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಣವಾದರೂ ಬಿಡುತ್ತೇವೆ ಆದರೆ ಭೂಮಿಯನ್ನು ನೀಡುವುದಿಲ್ಲ ಎಂದು ಎದೆತಟ್ಟಿ ಹೇಳಿದರು. ಎಕರೆಗೆ ಐವತ್ತು ಅರವತ್ತು ಲಕ್ಷ ನೀಡಿದರೂ ಕೆಲವೇ ವರ್ಷಗಳಲ್ಲಿ ಖರ್ಚಾಗುತ್ತದೆ. ನಮ್ಮ ಮಕ್ಕಳು ಮೊಮ್ಮಕ್ಕಳು ಏನು ಮಾಡುವುದು ಎಂದು ಆತಂಕ ತೋಡಿಕೊಂಡರು.

ನಂದನವನದಂತಿರುವ ಈ ಪ್ರದೇಶದಲ್ಲಿ ಎಸ್‌ಇಜಡ್ ಎಂಬ ಪೆಢಂಭೂತ ಎರಗಿಬಂದಿದೆ. ತರಕಾರಿ, ಹಣ್ಣು, ಹೈನು, ರೇಷ್ಮೆ ಕೃಷಿಯಲ್ಲಿ ತೊಡಗಿ ಸ್ವಾವಲಂಬಿ ಜೀವನ ನಡೆಸುತ್ತಿರುವ ಜನತೆಯಲ್ಲಿ ಇಂದು ಪರಕೀಯತೆಯ ಆತಂಕ ಮೂಡಿದೆ. ವರ್ಷಕ್ಕೆ ಎರಡು ಮೂರು ಬೆಳೆಗಳನ್ನು ತೆಗೆದು ಇದ್ದದ್ದರಲ್ಲಿ ಸಂತೋಷದಿಂದ ಜೀವನ ನಡೆಸುತ್ತಿದ್ದಾರೆ. ಅಂತರ ಜಲ ಸಾವಿರಾರು ಅಡಿಗಳ ಆಳಕ್ಕೆ ಕುಸಿದಿದ್ದರೂ ತನ್ನ ಸಾಹಸೀ ಪ್ರವೃತ್ತಿ ಮೆರೆದಿರುವ ನಂದಗುಡಿಯ ರೈತ ದಿಟ್ಟತನದಿಂದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾನೆ. ವೈಜ್ಞಾನಿಕ ಕೃಷಿ ಪದ್ಧತಿಯನ್ನು ಅಳವಡಿಕೊಂಡಿರುವ ಇಲ್ಲಿನ ರೈತರು ಇಡೀ ರಾಜ್ಯದಲ್ಲಿ ವಿಶೇಷ ಸ್ಥಾನ ಪಡೆದಿದ್ದಾರೆ.

ಯಾರೋ ದಂಧೆಕೋರರು ಬದುಕಲು ನಮ್ಮ ಜೀವನಗಳನ್ನು ಅಡವಿಡಲು ನಾವು ಸಿದ್ಧರಿಲ್ಲ ಎಂದು ರೈತರೊಬ್ಬರು ಹೇಳುತ್ತಾರೆ. ಯಾವನು ಬರುತ್ತಾನೊ ಬರಲಿ ಅವರನ್ನು ಇಲ್ಲೇ ಸಿಗಿದುಹಾಕುತ್ತೇವೆ ಎಂದು ಇಟ್ಟಸಂದ್ರದ ರೈತರೊಬ್ಬರು ಎಚ್ಚರಿಕೆ ನೀಡಿದರು. ಪಕ್ಷಾತೀತವಾಗಿ ಈ ಮಾರಕ ಎಸ್‌ಇಜಡ್ ವಿರುದ್ಧ ಹೋರಾಟ ಮಾಡುವ ದಿಟ್ಟತನವನ್ನು ವ್ಯಕ್ತಪಡಿಸಿದರು. ಬ್ರಿಟೀಷರು ಇನ್ನೂರು ವರ್ಷ ನಮ್ಮನ್ನಾಳಿದರು. ಅದೇ ರೀತಿಯಲ್ಲಿ ಮತ್ತೆ ನಮ್ಮನ್ನು ಗುಲಾಮರನ್ನಾಗಿ ಮಾಡಲು ದೊಡ್ಡದೊಡ್ಡ ಕಂಪನಿಗಳು ಬರುತ್ತಿವೆ ಎಂದು ಟೀಕಿಸಿದರು.

ಪುಟ 9 ಕ್ಕೆ



ಮಂಗಳೂರು : ಬಿಪಿಎಲ್ ಕಾರ್ಡ್‌ಗಾಗಿ ಕಛೇರಿ ಮುತ್ತಿಗೆ

"ಇದ್ದ ಕಾರ್ಡನ್ನು ಕಸಿದುಕೊಂಡು 3 ತಿಂಗಳೊಳಗೆ ಹೊಸ ಕಾರ್ಡು ನೀಡುತ್ತೇವೆಂದು ಕಳೆದ 2006 ಮೇ ತಿಂಗಳಲ್ಲಿ ರಾಜ್ಯ ಸರ್ಕಾರವು ಘೋಷಣೆ ಮಾಡಿತ್ತು. ಆದರೆ ತಿಂಗಳು ಕಳೆದು ವರ್ಷ ಕಳೆದರೂ ಇನ್ನೂ ರೇಷನ್ ಕಾರ್ಡ್ ನೀಡಲಿಲ್ಲ. ನಾಲ್ಕು ಗೋಡೆಗಳ ಮಧ್ಯೆ ಕೂತು ತಪ್ಪು ತಪ್ಪಾಗಿ ಬರೆದ ಸರ್ವೆಯಿಂದಾಗಿ ಗುಡಿಸಲಿನಲ್ಲಿ ಬದುಕು ಸಾಗಿಸುವವರಿಗೆ ಎಪಿಎಲ್ ಕಾರ್ಡ್‌ನ್ನು, ಮಹಲುಗಳಲ್ಲಿ ಐಷಾರಾಮಿ ಸುಖಜೀವನವನ್ನು ಮಾಡುವವರಿಗೆ ಬಿ.ಪಿ.ಎಲ್. ಕಾರ್ಡ್‌ನ್ನು ನೀಡಿ ಅನ್ಯಾಯ ಎಸಗಲಾಗಿದೆ. ತಾತ್ಕಾಲಿಕ ಬಿಪಿಎಲ್ ಕಾರ್ಡ್‌ನಲ್ಲಿ ಮಾಡಿದ ಲೋಪದೋಷ ಗಳಿಂದ ರೇಷನ್ ವಸ್ತುಗಳಿಂದ ಜನರನ್ನು ವಂಚಿತರನ್ನಾಗಿ ಮಾಡಲಾಗಿದೆ. ಇನ್ನೂ ಬರೆಯುತ್ತಾ ಹೋದರೆ ಪುಟಗಟ್ಟಲೆ ಬರೆಯ ಬಹುದು. ಮಣ್ಣಿನ ಮಗನೆಂದು ಬಡಾಯಿಕೊಚ್ಚುವ ಕುಮಾರಸ್ವಾಮಿ ಹಾಗೂ ರೈತನ ಮಗನೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ ಕೊಡುವ ಯಡಿಯೂರಪ್ಪ ಮತ್ತು ಕಂಪನಿಯವರು ಸೃಷ್ಟಿಸಿದ ಅವಾಂತರಗಳ ವಿರುದ್ಧ ಮಂಗಳೂರಿನಲ್ಲಿ ಡಿವೈಎಫ್‌ಐ, ಕರ್ನಾಟಕ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆಗಳು ಜಂಟಿಯಾಗಿ ಜುಲೈ 16 ರಂದು ಮಂಗಳೂರು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಅಂದು ಬೆಳಿಗ್ಗೆಯಿಂದಲೇ ಮಂಗಳೂರಿನಾದ್ಯಂತ ಸುರಿದ ಮಳೆ ಗಾಳಿಯು ಯಾರನ್ನೂ ಹೊರಗೆ ಬಾರದಂತೆ ಮಾಡಿತ್ತು. ಪ್ರತಿಭಟನೆಯಂತೂ ನಡೆಸಲು ಸಾಧ್ಯವಿಲ್ಲವೆಂದು ಕೆಲವರಂತೂ ಅಭಿಪ್ರಾಯಪಟ್ಟಿದ್ದರು. ಆದರೆ ಆ ಅಭಿಪ್ರಾಯವೆಲ್ಲವನ್ನೂ ಡಿವೈಎಫ್‌ಐ, ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಸುಳ್ಳಾಗಿಸಿದರು. ಧಾರಾಕಾರವಾಗಿ ಸುರಿಯುತ್ತಿರುವ ಮಳೆ ತೂಫಾನನ್ನು ಲೆಕ್ಕಿಸದೆ ಹೋರಾಟ ಮಾಡಿಯೇ ಸಿದ್ಧ ಎಂದು ತೀರ್ಮಾನಿಸಿದರು. ಮಳೆಯ ಮಧ್ಯೆಯೇ ಜಿಲ್ಲಾಧಿಕಾರಿ ಕಛೇರಿಯಿಂದ ನೂರಾರು ಸಂಖ್ಯೆಯಲ್ಲಿದ್ದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯರಸ್ತೆಯಲ್ಲಿ ಸಂಚರಿಸಿ ತಹಶೀಲ್ದಾರ್ ಕಚೇರಿಗೆ ಪ್ರವೇಶಿಸಿ ಮುತ್ತಿಗೆ ಹಾಕಿದರು.

ಜನರ ಪ್ರಶ್ನೆಗೆ ಚಡಪಡಿಸಿದ ತಹಶೀಲ್ದಾರ್: 'ಸ್ವಾಮಿ, ನಮ್ಮ ಮನೆಗೆ ಒಮ್ಮೆ ಬನ್ನಿ. ನಮ್ಮ ಮನೆಯ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ನಮಗೆ ಹೊಟ್ಟೆಗೆ ಹಿಟ್ಟಿಲ್ಲ, ವಾಸ ಮಾಡಲು ಸರಿಯಾದ ಸೂರಿಲ್ಲ, ನಮ್ಮ ಬಿಪಿಎಲ್ ಕಾರ್ಡನ್ನು ಕಸಿದುಕೊಂಡ್ರಿ, ನಾವು ಯಾವ ಅನ್ಯಾಯ ಮಾಡಿದ್ದೇವೆ' ಎಂದು ತಮ್ಮ ನೋವನ್ನು ತೋಡಿಕೊಂಡರು. ನಿಮ್ಮ ಅಧಿಕಾರಿಗಳು ತಾತ್ಕಾಲಿಕ ಕಾರ್ಡ್‌ನಲ್ಲಿ ಮಾಡಿದ ತಪ್ಪಿನಿಂದಾಗಿ ನಮಗೆ ರೇಷನ್‌ನಲ್ಲಿ (ಉದಾ:'ಬಿಪಿಎಲ್ ಕಾರ್ಡ್‌ನಲ್ಲಿ' 'ಹಳದಿ ಅನಿಲ ರಹಿತ ಬರೆಯಬೇಕಾಗಿತ್ತು.' 'ಹಳದಿ ಅನಿಲ ಬರೆದಿದ್ದಾರೆ') ಯಾವುದೇ ವಸ್ತುಗಳು ದೊರೆಯುವುದಿಲ್ಲ, ನಾವು ಏನು ಮಾಡಬೇಕು ಎಂದಾಗ ತಹಶೀಲ್ದಾರ್‌ರು ಉತ್ತರ ಕೊಡಲು ಚಡಪಡಿಸಿದರು. ಪಕ್ಕದಲ್ಲಿಯೇ ಇದ್ದ ಗ್ರಾಮಾಂತರ ಆಹಾರ ನಿರ್ದೇಶಕರು ಉತ್ತರಿಸಲು ಮುಂದಾದರು. ಜನರು ಅವರ ಮೇಲೆ ಟೀಕೆಗಳ ಮೂಲಕ ಪ್ರಹಾರ ಮಾಡಿದಾಗ ತಮ್ಮಿಂದ ಆದ ತಪ್ಪನ್ನು ಮುಚ್ಚಿ ಹಾಕಲು ಪ್ರಯತ್ನಿಸಿದರು. ಆಗ ಸೇರಿದ ಜನರೆಲ್ಲಾ ಅವರ ವಿರುದ್ಧ ಘೋಷಣೆಯನ್ನು ಕೂಗಿದಾಗ ಆತ ಇನ್ನು ನಾನು ಬಜಾವ್ ಆಗುವುದಿಲ್ಲ ಎಂದು ಅರಿತು ಸ್ಥಳದಿಂದ ಕಾಲ್ಕಿತ್ತರು.

ಉತ್ತರವಿಲ್ಲದ ಪ್ರಶ್ನೆಗಳು

ಈ ಎಲ್ಲಾ ಸಮಸ್ಯೆಗಳಿಗೆ ಜಿಲ್ಲಾಧಿಕಾರಿಯವರು ಉತ್ತರಿಸಬೇಕು ಹಾಗೂ ರೇಷನ್ ಸಮಸ್ಯೆಗೆ ಒಳಪಟ್ಟವರು ಹೆಚ್ಚಿನವರು ನಗರ ಭಾಗದ ಜನರು ಆದ್ದರಿಂದ ಜಿಲ್ಲಾಧಿಕಾರಿ ಇಲ್ಲವೇ ನಗರ ಆಹಾರ ನಿರ್ದೇಶಕರು ಕೂಡಲೇ ಬರಬೇಕೆಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಜಿಲ್ಲಾಧಿಕಾರಿಯವರು ಅಗತ್ಯ ಕೆಲಸದ ಕಾರಣ ಬರಲಾಗುವುದಿಲ್ಲ, ನಗರ ಆಹಾರ ನಿರ್ದೇಶಕರು ಬರುತ್ತಿದ್ದಾರೆ ಎಂದು ತಿಳಿಯಿತು. ಅವರೂ ಬಂದರು. ಜನರು ಅವರಲ್ಲಿ ಕಳೆದ 5-6 ತಿಂಗಳಿನಿಂದ ರೇಷನ್ ಕಾರ್ಡಿಗೆ ಅರ್ಜಿಸಲ್ಲಿಸಿದವರಿಗೆ ಯಾಕೆ ಕಾರ್ಡ್ ನೀಡಲಿಲ್ಲ? ಬಿ.ಪಿ.ಎಲ್. ಕಾರ್ಡ್‌ಗೆ ನೀಡುತ್ತಿರುವ 8 ಲೀಟರ್ ಸೀಮೆಎಣ್ಣೆಯಲ್ಲಿ 2 ಲೀಟರ್ ಕಡಿತಗೊಳಿಸಿ ಕಾಳಸಂತೆಯಲ್ಲಿ 30-35 ರೂಪಾಯಿಗೆ ಮಾರಾಟ ಮಾಡುವುದರ ಹಿಂದೆ ಇರುವ ಗುಟ್ಟೇನು? ನಿಮಗೆಷ್ಟು ಕಮೀಷನ್ ಬರುತ್ತದೆ? ತಾತ್ಕಾಲಿಕ ಕಾರ್ಡ್‌ನಲ್ಲಿನ ಲೋಪದೋಷದಿಂದಾಗಿ ಮಾರ್ಚ್ ತಿಂಗಳಿಂದ ಬಿಪಿಎಲ್ ಕಾರ್ಡ್‌ದಾರರಿಗೆ ಆಹಾರ ಸಾಮಗ್ರಿಯನ್ನು ಸ್ಥಗಿತಗೊಳಿಸಿದ್ದೀರಿ, ಆದರೆ ಜನವರಿಯಿಂದಲೇ ಹೆಚ್ಚಿನ ರೇಷನ್ ಅಂಗಡಿಯಲ್ಲಿ ಆಹಾರ ಸಾಮಗ್ರಿ ನೀಡಿರುವುದಿಲ್ಲ, ಆ ಅಂಗಡಿಯನ್ನು ಮುಟ್ಟುಗೋಲು ಮಾಡುತ್ತೀರಾ? ರೇಷನ್ ಸೀಮೆಎಣ್ಣೆ ಕಾಳಸಂತೆಯಲ್ಲಿ ಬ್ಯಾರಲ್ ಗಟ್ಟಲೆ ಮಾರಾಟವಾಗುತ್ತಿದೆಯಲ್ಲಾ ಅದನ್ನು ಕಂಡು ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವ ತಾಕತ್ತು ನಿಮಗೆ ಇದೆಯಾ? ಎಂದು ನಿರಂತರ ಪ್ರಶ್ನೆಗಳ ಬಾಣವನ್ನು ಬಿಟ್ಟಾಗ ಅವನ ಬತ್ತಳಿಕೆಯಲ್ಲಿ ಯಾವ ಅಸ್ತ್ರವೂ ಉಳಿದಿರಲಿಲ್ಲ.

ಪರಿಹಾರದ ಭರವಸೆ

ಸುಮಾರು ಎರಡು ಗಂಟೆಗಳವರೆಗೆ ಸಾಗಿದ ಪ್ರತಿಭಟನೆಯಲ್ಲಿ ತಾಲ್ಲೂಕು ಕಛೇರಿಯ ಬಾಗಿಲನ್ನು ನಮ್ಮ ಕಾರ್ಯಕರ್ತರು ಬಂದ್ ಮಾಡಿ ಯಾವುದೇ ಮನುಷ್ಯ ಒಳಗೆ ಹೊರಗೆ ಹೋಗದಂತೆ ದಿಗ್ಬಂಧನ ಮಾಡಿದ್ದರು. ಅಂತಿಮವಾಗಿ ಹೋರಾಟವು ಉಗ್ರ ಸ್ವರೂಪವನ್ನು ಪಡೆಯುತ್ತಿರುವುದನ್ನು ಗಮನಿಸಿದ ತಹಶೀಲ್ದಾರ್‌ರು 15 ದಿವಸದ ಒಳಗೆ ಎಲ್ಲಾ ರೇಷನ್ ಸಂತ್ರಸ್ತರ ಸಮಸ್ಯೆಯನ್ನು ಪರಿಹರಿಸುವುದಾಗಿ ಘೋಷಣೆ ಮಾಡಿಯೇ ಬಿಟ್ಟರು. ಇದಕ್ಕಾಗಿ ನಗರ ಭಾಗದ ಜನರಿಗೆ ಜಿಲ್ಲಾಧಿಕಾರಿ ಕಛೇರಿಹಾಗೂ ಗ್ರಾಮಾಂತರ ಭಾಗದವರಿಗೆ ತಹಶೀಲ್ದಾರ್ ಕಛೇರಿಯಲ್ಲಿ ವಿಶೇಷ ಕೌಂಟರನ್ನು ತೆರೆಯುವುದಾಗಿ ಹೇಳಿದರು. ಆ ಪ್ರಕಾರ ಹಲವಾರು ಪ್ರದೇಶಗಳಿಂದ ಬಂದಿರುವ ಜನರಿಗೆ ಉಚಿತವಾಗಿ ಅರ್ಜಿಗಳನ್ನು ಬರೆಯಲು ಆಯಾಯ ಪ್ರದೇಶದ ಡಿವೈಎಫ್‌ಐ, ಜೆ.ಎಂ.ಎಸ್. ರೈತ ಸಂಘದ ಮುಖಂಡರುಗಳಿಗೆ ಜವಾಬ್ದಾರಿಯನ್ನು ನೀಡಲಾಯಿತು.

ಕುಮಾರಸ್ವಾಮಿಗೆ 4 ಕೆ.ಜಿ. ಅಕ್ಕಿ ರವಾನೆ

'ಯುನಿಟ್ ಪದ್ಧತಿಯ ಮೂಲಕ ಬಡವರ ಆಹಾರವನ್ನೇ ಕಸಿದು ಬಿಪಿಎಲ್ ಕಾರ್ಡ್‌ಗೆ 4 ಕೆ.ಜಿ.ಅಕ್ಕಿಯನ್ನು ಸೀಮಿತಗೊಳಿಸಿದ್ದಾರೆ. ನಮ್ಮ ಮುಖ್ಯಮಂತ್ರಿಯವರು ಅದರಲ್ಲೂ ದ.ಕ. ಜಿಲ್ಲೆಯ ಜನ ಕುಚ್ಚಲು ಅಕ್ಕಿ ತಿನ್ನುವುದು ಗೊತ್ತಿದ್ದರೂ ಇಲ್ಲಿ ಬೆಳ್ತಿಗೆ ಅಕ್ಕಿಯನ್ನು ನೀಡುತ್ತಿದ್ದಾರೆ. ಇದನ್ನು ಹೆಚ್ಚಿನ ಜನ ಸ್ವೀಕರಿಸದೆ ಅಂಗಡಿಯವನಿಗೆ ಬಿಟ್ಟು ಹೋಗುತ್ತಾರೆ. ಇದರಿಂದಾಗಿ ಅಂಗಡಿಯವರಿಗೆ ಇನ್ನಷ್ಟು ದೋಚಲು ಅವಕಾಶ ಮಾಡಿಕೊಟ್ಟಂತಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಮಂಗಳೂರಿನ ಡಿವೈಎಫ್‌ಐ ಮುಖಂಡರೊಬ್ಬರು ಗದ್ದೆಯಲ್ಲಿ ಬೆಳೆದ ತಾಜಾ 4 ಕೆ.ಜಿ. ಕುಚ್ಚಲು ಅಕ್ಕಿಯನ್ನು ಮುಖ್ಯಮಂತ್ರಿಯವರ ವಿಳಾಸ ಬರೆದು ತಹಶೀಲ್ದಾರ್‌ರ ಮೂಲಕ ಕಳುಹಿಸಿ 'ನೀವು ಮೊದಲು ಈ 4 ಕೆ.ಜಿ. ಅಕ್ಕಿಯಿಂದ ಬದುಕಲು ಸಾಧ್ಯವೇ ಎಂದು ತೋರಿಸಿಕೊಡಿ' ಎಂದು ಮುಖ್ಯಮಂತ್ರಿಗೆ ಸವಾಲು ಹಾಕಿದರು ಒಬ್ಬರು.

ಪ್ರತಿಭಟನೆಯನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಕೆ.ಯಾದವಶೆಟ್ಟಿ, ಯು.ಬಿ. ಲೋಕಯ್ಯ, ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಹೇಮಲತಾ ಮಾತನಾಡಿದರು. ನೇತೃತ್ವವನ್ನು ಪ್ರಾಂತ ರೈತ ಸಂಘದ ರಾಮಚಂದ್ರ ಉಚ್ಚಿಲ್, ಗಂಗಯ್ಯ ಅಮೀನ್, ಶ್ರೀನಿವಾಸ್‌ಶೆಟ್ಟಿ, ಜೆ.ಎಂ.ಎಸ್. ಪ್ರಮೀಳಾ, ಜಯಂತಿ, ಭಾರತಿ, ಪದ್ಮಾವತಿಶೆಟ್ಟಿ, ಡಿವೈಎಫ್‌ಐ ನ ಅಶೋಕ ಕೊಂಚಾಡಿ, ದಯಾನಂದಶೆಟ್ಟಿ, ಮಹಾಬಲ ಬಟ್ಟೆದಡಿ, ಶಶಿಧರ್.ಕೆ.ಶಕ್ತಿನಗರ ಊರ್ವ ಸ್ಟೋರ್ ಕಟ್ಟಡ ಕಾರ್ಮಿಕರ ಸಂಘದ ಗೌರವಾಧ್ಯಕ್ಷರಾದ ಸಾಮ್ಯುವೆಲ್ ಟೈಟಸ್‌ರವರು ವಹಿಸಿದ್ದರು.

ವರದಿ: **ಅಶೋಕ್ ಕೊಂಚಾಡಿ**

ಅದ್ಭುತ ಸಾಧನೆ - 'ಪಾರ್ತಿ ಸುಬ್ಬ ಯಕ್ಷಗಾನ ಕಲಾಕ್ಷೇತ್ರ'

'ಯಕ್ಷಗಾನ' ಕರಾವಳಿ ಕರ್ನಾಟಕ ಮತ್ತು ಮಲೆನಾಡಿನ ಕೆಲ ಭಾಗ ಹಾಗೂ ಕಾಸರಗೋಡು ಜಿಲ್ಲೆಯ ಪ್ರಮುಖ ಕಲೆ. ಇಂತಹ ಯಕ್ಷಗಾನದ ಪಿತಾಮಹ ಕುಂಬಳೆಯ ಪಾರ್ತಿ ಸುಬ್ಬ. ಇಂತಹ ಐತಿಹಾಸಿಕ ಕಲಾಕ್ಷೇತ್ರವನ್ನು ಮಂಜೇಶ್ವರದಲ್ಲಿ ದೀರ್ಘ ಅವಧಿಯಲ್ಲಿ ಜನಪ್ರತಿನಿಧಿಯಾಗಿದ್ದ ಕಾಂಗ್ರೆಸ್ ಬೆಂಬಲಿತ ಮುಸ್ಲಿಂ ಲೀಗ್‌ನ ಚೆರ್ಕರ್ ಅಬ್ದುಲಾ ಪರಿಗಣಿಸಲೇ ಇಲ್ಲ. ಮಂಜೇಶ್ವರದ ಶಾಸಕರ ಕಥೆ ಹೀಗೆ ಕರ್ನಾಟಕದ ವಿಧಾನಸಭೆಯಲ್ಲಿ ಯಕ್ಷಗಾನ ವೇಷ ಬಳಿದು ಪೋಸ್ ಕೊಡುತ್ತಿದ್ದ ಕಾಂಗ್ರೆಸ್ಸಿನ ರಮಾನಾಥ ರೈ ಹಾಗೂ ಸ್ವತಃ ವೃತ್ತಿಪರ ಯಕ್ಷಗಾನ ಕಲಾವಿದರಾಗಿ, ಶಾಸಕರಾದ ಬಿಜೆಪಿಯ ಕುಂಬ್ಳೆ ಸುಂದರರಾವ್‌ರವರೇ ಏನೇನೂ ಮಾಡಿಲ್ಲ. ಇವೆರಡರ ಮಧ್ಯೆ ಸಿಪಿಐ(ಎಂ) ನಿಂದ ಮಂಜೇಶ್ವರದ ಶಾಸಕರಾಗಿ ಆಯ್ಕೆಯಾದ ಸಿ.ಹೆಚ್. ಕುಞ್ಞಂಬುರವರು ತೆಗೆದುಕೊಂಡ ದಿಟ್ಟ ನಿಲುವು ಸಾಕಾರಗೊಂಡು 'ಪಾರ್ತಿ ಸುಬ್ಬ ಯಕ್ಷಗಾನ ಅಧ್ಯಯನ ಕೇಂದ್ರ' ದ ಕಛೇರಿಯನ್ನು 29ರಂದು ಕಂಬಳೆಯಲ್ಲಿ ಶಾಸಕ ಸಿ.ಹೆಚ್. ಕುಞ್ಞಂಬುರವರು ಉದ್ಘಾಟಿಸಿದರು.

ಯಕ್ಷಗಾನ ಕ್ಷೇತ್ರದ ಗಣ್ಯರು, ವಿದ್ಯಾವಂತರು ಮತ್ತು ಮಾಜಿ ಶಾಸಕ ಕುಂಬಳೆ ಸುಂದರರಾವ್ ರವರೂ ಅತಿಥಿಗಳಾಗಿದ್ದ ಸಭೆಯಲ್ಲಿ ಉದ್ಘಾಟನಾ ಭಾಷಣ ಮಾಡಿದ ಸಿ.ಹೆಚ್.ರವರು "ಸರ್ಕಾರದ ನೇತೃತ್ವದಲ್ಲಿ ಪಾರ್ತಿ ಸುಬ್ಬ ಯಕ್ಷಗಾನ ಕಲಾಕ್ಷೇತ್ರದ ಹೆಸರಲ್ಲಿ ಟ್ರಸ್ಟ್ ರೂಪೀಕರಿಸಿ ಕೇರಳ, ಕರ್ನಾಟಕ ಮತ್ತು ಕೇಂದ್ರ ಸರ್ಕಾರದ ನಿಧಿಯನ್ನು ಬಳಸಿ ಬೃಹತ್ ಸ್ಮಾರಕ ರೂಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. 1ರಿಂದ 3 ಕೋಟಿ ರೂಪಾಯಿ ವೆಚ್ಚದಲ್ಲಿ ಕುಂಬಳೆ ಶೇಡಿ ಕಾವು ಬಳಿಯಲ್ಲಿ ಸುಸಜ್ಜಿತ ಸ್ಮಾರಕ ನಿರ್ಮಿಸಿ, ಅತ್ಯುತ್ತಮ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಯೋಜಿಸಲಾಗಿದೆ" ಎಂದು ಹೇಳಿದರು.

ಬಿಜೆಪಿಯ ಮಾಜಿ ಶಾಸಕ ಕುಂಬಳೆ ಸುಂದರರಾವ್‌ರವರು, ಶಾಸಕರಾಗಿ ಪಕ್ಷದ ಮತ್ತು ಕರ್ನಾಟಕ ಸರ್ಕಾರ ವೈಫಲ್ಯವನ್ನು ಬಹಿರಂಗವಾಗಿ ಒಪ್ಪಿಕೊಂಡು, ಅವರು ತಮ್ಮ ಭಾಷಣದಲ್ಲಿ" ತಾವು ಶಾಸಕರಾಗಿದ್ದಾಗ ಅಂದಿನ ಸಂಸ್ಕೃತಿ ಸಚಿವೆಯ ಗಮನಕ್ಕೆ ವಿಷಯವನ್ನು ತಂದರೂ ಫಲಕಾರಿಯಾಗಲಿಲ್ಲ. ಈಗ ನಮ್ಮ ಸರ್ಕಾರವಿದ್ದರೂ ಈ ಕಾರ್ಯ ಕೈಗೂಡಲಿಲ್ಲ. ಆದರೆ ಇಲ್ಲಿನ ಶಾಸಕ ಸಿ.ಹೆಚ್. ಕುಞ್ಞಂಬು ಅವರದು ಕಲಾ ಕ್ಷೇತ್ರದ ನಿರ್ಮಾಣದ ಹಿಂದೆ ಆರೋಗ್ಯಕರ ಚಿಂತನೆ ಇದೆ. ಚುನಾವಣೆಯ ಕಾಲವಾದರೆ ಇದನ್ನು ಗಿಮಿಕ್ ಎನ್ನಬಹುದಿತ್ತು. ಆದರೆ ಈಗ ಇದನ್ನು ಶಾಸಕರ ಬದ್ಧತೆ ಎನ್ನದೆ ವಿಧಿಯಿಲ್ಲ. ಆದರೆ ತಾವು ಶಾಸಕರಾಗಿ ಏನೇನೂ ಮಾಡಿಲ್ಲ! ಅದಕ್ಕೇ... ಸೋತೆ' ಎಂದು ಹೇಳಿದರು. ಕುಂಬಳೆಯ ನೆಲ ಯಕ್ಷಗಾನಕ್ಕೆ ಬರಡಾಗಿ ಹೋಗಿದ್ದು ಅಷ್ಟರಲ್ಲಿ ಈ ನೆಲದ ಜನ ಪ್ರತಿನಿಧಿಯಾಗಿ ಕುಞ್ಞಂಬು ಅವರು ಮೂಡಿ ಬಂದು ಯಕ್ಷಗಾನ ಅಭಿವೃದ್ಧಿಗೆ ಮುಂದೆ ಬಂದರು ಎಂದು ಹೇಳಿದರು.

ಶಾಸಕ ಸಿ.ಹೆಚ್. ಕುಞ್ಞಂಬು ರವರು ಈ ಸಮಯದಲ್ಲಿ ಮಾಡಿದ ಭಾಷಣದ ತುಣುಕೊಂದು ಎಲ್ಲರಿಂದಲೂ ಪ್ರಶಂಸೆಗೆ ಪಾತ್ರವಾಗಿದೆ" "ಸಂಕುಚಿತ ರಾಜಕೀಯ ಎತ್ತದೆ ಕಲೆಗೆ ಬೆಲೆ ಕೊಡುವ ಮನಸ್ಸುಗಳು ಕೈಜೋಡಿಸಬೇಕು. ಕೇವಲ ರಸ್ತೆ ಸೇತುವೆಗಳ ನಿರ್ಮಾಣವೇ ನಾಡಿನ ಅಭಿವೃದ್ಧಿಯಲ್ಲ ಕಲೆ ಸಾಂಸ್ಕೃತಿಕ ವಿಷಯದ ಕಡೆಗೂ ಗಮನಹರಿಸಬೇಕು" ಎಂದು ಹೇಳಿದರು.

ಹೌದು! ಸುನೀಲ್ ಮೈತ್ರಾರವರು ಹೇಳುತ್ತಾರೆ... 'ಟ್ರೇಡ್ ಯೂನಿಯನ್‌ಗಳೇ ದೇಶದ ಸಾಂಸ್ಕೃತಿಕ ಪರಂಪರೆಯ ಸಮರ್ಥ ಉತ್ತರಾಧಿಕಾರಿಗಳಾಗಿದ್ದರೆಂದು ನಿಚ್ಚಳವಾಗಿದೆ. ದುಡ್ಡಿನ ದನಿಗಳ ಅಥವಾ ಉತ್ಪಾದನೆಯ ಸಾಧನಗಳೆನ್ನೆಲ್ಲಾ ತಮ್ಮ ಕೈಯಲ್ಲಿಟ್ಟುಕೊಂಡಿರುವ ಮಂದಿಗೆ ವರ್ಣಮಯ, ವೈವಿಧ್ಯಮಯ ಸಂಸ್ಕೃತಿಯ ಸಂಸ್ಕಾರ ಇದ್ದೇ ತೀರಬೇಕೆಂಬ ಅಂತಃಸ್ಫೂರ್ತಿಯಲ್ಲ. ಈ ಜನರ ಮಟ್ಟಿಗೆ ಸಂಸ್ಕೃತಿ ಒಂದು ಹಂತದವರೆಗೆ ಮಾತ್ರ ಅರ್ಥವಾಗಬಲ್ಲದು. ಆದುದರಿಂದ ತಮ್ಮೆಲ್ಲ ಬದುಕಿದ ಒತ್ತಡಗಳ ನಡುವೆ ಸಂಸ್ಕೃತಿಯ ದೀವಿಗೆಯನ್ನು ಬೆಳಗಿ ಕೈಯಿಂದ ಕೈಗೆ ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಶ್ರಮ ಜೀವಿಗಳ ಮೇಲಿದೆ" ಸಿಐಟಿಯು ಶಾಸಕ ಸಿ.ಹೆಚ್. ಕುಞ್ಞಂಬು ಅದನ್ನೇ ಮಾಡಿರುತ್ತಾರೆ.

ವರದಿ : **ಕೃಷ್ಣಪ್ಪ ಕೊಂಚಾಡಿ**

ಹ್ಹ...ಹ್ಹಾ...ಹ್ಹಾ...

ಗುಂಡ ಕಾಲೇಜು ವಿದ್ಯಾರ್ಥಿ. ತನ್ನ ಕ್ಲಾಸಿನಲ್ಲಿ ಯಾವಾಗಲೂ ಹುಡುಗಿಯರೇ ಹುಡುಗಿರಿಗಿಂತ ಓದಿನಲ್ಲಿ ಮುಂದಿದ್ದರು. ತನಗೆ ಗೊತ್ತಿರುವ ಪರಿಚಿತವಾದ ಯಾವುದೇ ಮನೆಯಲ್ಲಿ ನೋಡಿದರೂ ಹೆಣ್ಣು ಮಕ್ಕಳಿಗೆ, ಅಡಿಗೆ ಮಾಡುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಮನೆಯಲ್ಲಿರುವ ಸಣ್ಣ ಮಕ್ಕಳು ಲಾಲನೆ, ಪಾಲನೆ ಇನ್ನೂ ಏನೇನೋ ಜವಾಬ್ದಾರಿಗಳನ್ನು ನಿಬಾಯಿಸುವುದನ್ನು ಗುಂಡ ನೋಡುತ್ತಿದ್ದ. ಆದರೆ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಇಂಜಿನಿಯರಿಂಗ್, ಮೆಡಿಕಲ್ ಯಾವ ಪರೀಕ್ಷೆಗಳ ಫಲಿತಾಂಶ ಬಂದರೆ ಹುಡುಗಿಯರೇ ಎಲ್ಲದರಲ್ಲೂ ಮುಂದೆ!

ಗುಂಡನಿಗೆ ತಲೆ ಕೆಟ್ಟಿತು. ಶಿಕ್ಷಕರದ್ದೇ ಏನಾದರೂ ಇದರಲ್ಲಿ ಕೈವಾಡ ಇದೆಯಾ ಅನ್ನೋದರಿಂದ ಹಿಡಿದು, ಹುಡುಗಿಯರ ಮಿದುಳು ಹುಡುಗರ ಮಿದುಳಿಗಿಂತ ಹೆಚ್ಚು ಶಕ್ತಿಶಾಲಿಯೇ?

ಹುಡುಗಿಯರೇ ಯಾಕೆ ಯಾವಾಗಲೂ ಮುಂದೆ?

ಅನ್ನೋವರೆಗೆ ಗುಂಡನಿಗೆ ಹಲವಾರು ಅನುಮಾನಗಳು ಕಾಡತೊಡಗಿದವು. ಒಂದು ದಿನ ವಿಜ್ಞಾನ, ಸಮಾಜ ವಿಜ್ಞಾನಗಳ ಅಧ್ಯಾಪಕರೆಲ್ಲಾ ಒಟ್ಟಿಗೆ ಇರುವಾಗ ಕಾಲೇಜಿನ ಸ್ಟಾಫ್‌ರೂಮಿಗೆ ನುಗ್ಗಿದವನೇ ತನ್ನ ಅನುಮಾನಗಳನ್ನು ಅಧ್ಯಾಪಕರ ಮುಂದಿಟ್ಟ.

ಗುಂಡ: ಓದಿನಲ್ಲಿ ಕಲಿಕೆಯಲ್ಲಿ, ಎಲ್ಲಾ ಪರೀಕ್ಷೆಗಳಲ್ಲಿ ಹುಡುಗಿಯರೇ ಯಾವಾಗಲೂ ಯಾಕೆ ಮುಂದೆ ಇರುತ್ತಾರೆ ಸಾರ್?

ಅನುಭವಿಗಳಾದ ಅಧ್ಯಾಪಕರ ತಂಡ ಗುಂಡನ ಅನುಮಾನ ಪರಿಹರಿಸಿತು.

ಅಧ್ಯಾಪಕರು ಹೇಳಿದರು: 'ಇದು ತುಂಬಾ ಸರಳ, ಯಾವಾಗಲೂ ಹುಡುಗಿಯರೇ ಯಾಕೆ ಮುಂದೆ ಬರ್‍ತಾರೆ ಅಂದ್ರೆ, ಹುಡುಗರು ಯಾವಾಗಲೂ ಹುಡುಗಿಯರ ಹಿಂದೆ ಇರ್‍ತಾರೆ ಅದಕ್ಕೆ'.

ನ್ಯಾಯ ನೀಡಿಕೆ: ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ

ನ್ಯಾಯ ನೀಡಿಕೆಯಲ್ಲಿ ವಿಳಂಬವೆಂದರೆ ನ್ಯಾಯದ ನಿರಾಕರಣೆಯೇ ಎಂದು ಹೇಳಲಾಗುತ್ತದೆ. ಆದರೆ ನ್ಯಾಯ ನೀಡಿಕೆಯಲ್ಲಿ ತಾರತಮ್ಯವೂ ಇದೆ ಎಂಬ ಭಾವನೆ ಬರುವಂತಾದರೆ........?

993ರ ಮುಂಬೈ ಸರಣಿ ಸ್ಫೋಟಗಳ ...ಾರಣೆ ನಡೆಸಿರುವ ವಿಶೇಷ ಟಾಡಾ ...ಯಾಲಯ 100 ಜನರನ್ನು ಅಪರಾಧಿಗಳು ಎಂದು ...ರ್ಪತ್ತಿದೆ. ಇದುವರೆಗೆ ಅವರಲ್ಲಿ 91 ಮಂದಿಗೆ ... ವಿಧಿಸಿದೆ. ಇವರಲ್ಲಿ 11 ಮಂದಿಗೆ ...ರಣದಂಡನೆ ಹಾಗೂ 17 ಮಂದಿಗೆ ಜೀವಾವಧಿ ... ವಿಧಿಸಲಾಗಿದೆ. ಈ ಸರಣಿ ಸ್ಫೋಟದಲ್ಲಿ 250 ...ಗ್ಧ ಜೀವಗಳ ಬಲಿಯಾಯಿತು, 700ಕ್ಕೂ ಹೆಚ್ಚು ...ಂದಿ ಗಾಯಗೊಂಡರು ಎಂಬುದನ್ನು ...ಪಿಸಿಕೊಳ್ಳಬಹುದು.

...ಅಂತೂ ಕೊನೆಗೂ ನ್ಯಾಯ ನಿಡಲಾಗಿದೆ ...ಬುದು ಸ್ವಾಗತಾರ್ಹ. ಇದಕ್ಕೆ 14 ವರ್ಷಗಳೇ ...ಡಿದವು. ಜೀವಾವಧಿ ಶಿಕ್ಷೆಯ ಅವಧಿಯೇ ...ಮಾನ್ಯವಾಗಿ 14 ವರ್ಷಗಳು. ಅಲ್ಲದೆ ...ಗೊಳಗಾದವರು ಸುಪ್ರಿಂ ಕೋರ್ಟಿಗೆ ಮನವಿ ...ಾಡಬಹುದು. ಅಲ್ಲಿ ಇನ್ನೆಷ್ಟು ಸಮಯ ...ಡಿಸಬಹುದೋ ಏನೋ.

...ಷ್ಟು ದೀರ್ಘ ವಿಚಾರಣೆ!

...ಹಾಗೆ ನೋಡಿದರೆ ಹಿಂದೆಯೂ ಇಂತಹ ...ಯ ನೀಡಿಕೆಯಲ್ಲಿ ಇದಕ್ಕಿಂತಲೂ ಹೆಚ್ಚು ಸಮಯ ...ಡಿಸಿದ್ದು ದಾಖಲೆಗಳಲ್ಲಿವೆ. ಭಾಗಲ್ಪುರದ ಭೀಕರ ...ೋಮುದಂಗೆಗಳಲ್ಲಿ ಅಪರಾಧಿಗಳನ್ನು ಗುರುತಿಸಿ, ...ಕ್ಷಿಸಲು ಎರಡು ದಶಕಗಳೇ ಹಿಡಿದವು. 1987ರ ...ಲಿಯಾನ (ಮೀರಠ್) ಕೋಮು ...ತ್ಯಾಕಾಂಡದಲ್ಲಿ ಇನ್ನೂ ಆರೋಪ ಪಟ್ಟಿಯನ್ನು ...ಾಕಿಲ್ಲ. 1984ರಲ್ಲಿ ಇಂದಿರಾಗಾಂಧಿ ಹತ್ಯೆಯ ...ಂತರದ ಸಿಖ್ಖರ ಕೊಲೆಗಳ ವಿಚಾರಣೆ ನಡೆಸಿದ ...ಯೋಗ ಯಾರನ್ನೂ ಆರೋಪಿಗಳೆಂದು ...ುರುತಿಸಿಯೂ ಇಲ್ಲ. ಗುಜರಾತಿನ ಗೋಧ್ರಾ ...ಂತರದ ಹತ್ಯಾಕಾಂಡ ನಡೆಸಿದವರಂತೂ, ತಮ್ಮ ...ರುದ್ಧ ಸಾಕ್ಷಿಗಳ ಮಹಾಪೂರವೇ ಇದ್ದರೂ ...ರಾಮವಾಗಿ ಅಡ್ಡಾಡಿಕೊಂಡಿದ್ದಾರೆ.

ಇನ್ನು ಬಾಬ್ರಿಮಸೀದಿ ಧ್ವಂಸದ ನಂತರದ 1991-...3ರ ಮುಂಬೈ ಕೋಮುಗಲಭೆಗಳದ್ದಂತೂ ಎದ್ದು ...ಾಣುವ ಸಂಗತಿ. ವಾಸ್ತವವಾಗಿ 1993ರ ಸರಣಿ ಸ್ಫೋಟಗಳು ಈ ಬಹುಸಂಖ್ಯಾತರ ಭಯೋತ್ಪಾದನೆಗೆ ಅಲ್ಪಸಂಖ್ಯಾತರ ಭಯೋತ್ಪಾದಕರ ಉತ್ತರ ಎಂದೇ ಪ್ರಚಾರವಾಗಿದೆ. 1992-93ರ ಮುಂಬೈ ಕೋಮುಗಲಭೆಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗದ ವರದಿಯ ಮೇ...ೆ ಕ್ರಮ ಕೈಗೊಳ್ಳುವುದರ ಬದಲಿ ಅದನ್ನು ಅಧಿಕೃತವಾಗಿ ತಿರಸ್ಕರಿಸಲು ಕೂಡಾ ಆಗಿನ ಶಿವಸೇನಾ, ಬಿಜೆಪಿ ಸರ್ಕಾರ ಪ್ರಯತ್ನಿಸಿತು. ಅದು ಸಾಧ್ಯವಾಗದಾಗ ಏನೂ ಕ್ರಮ ಕೈಗೊಳ್ಳದೆ ಕೈಕಟ್ಟಿ ಕುಳಿತಿತು. ನಂತರ ಬಂದ ಕಾಂಗ್ರೆಸ್, ಎನ್‌ಸಿಪಿ ಸರಕಾರ ಕೂಡಾ ನ್ಯಾಯ ನೀಡಲು ಮುಂದಾಗಲಿಲ್ಲ. ಮತ್ತೊಮ್ಮೆ ನಮ್ಮ ದೇಶದ ನ್ಯಾಯ ವ್ಯವಸ್ಥೆ ಕೋಮು ಹಿಂಸಾಚಾರ ಎಸಗಿದ ಅಪರಾಧಿಗಳನ್ನು ಶಿಕ್ಷಿಸುವಲ್ಲಿ ವಿಫಲವಾಗಿದೆ.

ಎಲ್ಲೆಡೆ ಆರೆಸ್ಸೆಸ್ ಕೈ!

ಇಷ್ಟೇ ಅಲ್ಲ, ಕೋಮುಗಲಭೆಗಳನ್ನು ಕುರಿತಂತೆ ಇನ್ನೂ ಕನಿಷ್ಟ ಐದು ಮಹತ್ವಪೂರ್ಣ ನ್ಯಾಯಾಂಗ ಆಯೋಗಗಳು ವಿಚಾರಣೆ ನಡೆಸಿ ವರದಿಗಳನ್ನು ಸಲ್ಲಿಸಿವೆ. ಆದರೂ ನ್ಯಾಯವೆಂಬುದು ಇನ್ನೂ ದೂರವೇ ಉಳಿದಿದೆ. 1969ರ ಅಹಮದಾಬಾದ್ ಗಲಭೆಗಳ ಬಗ್ಗೆ ನ್ಯಾಯಮೂರ್ತಿ ಪಿ.ಜಗಮೋಹನ್ ರೆಡ್ಡಿ ವಿಚಾರಣಾ ಆಯೋಗ, 1970ರ ಭಿವಂಡಿ ಗಲಭೆಗಳ ಬಗ್ಗೆ ನ್ಯಾಯಮುರ್ತಿ ಡಿ.ಪಿ.ಮದನ್ ಆಯೋಗ, 1971ರ ತೆಲ್ಲಿಚೇರಿ ಗಲಭೆಗಳ ಬಗ್ಗೆ ನ್ಯಾಯಮೂರ್ತಿ ವಿಥ್ಯಾಥಿಲ್ ಆಯೋಗ, 1979ರ ಜಮಶೆಡ್‌ಪುರ ಗಲಭೆಗಳ ಬಗ್ಗೆ ನ್ಯಾಯಮೂರ್ತಿ ಜಿತೇಂದ್ರ ನಾರಾಯಣ ಆಯೋಗ ಹಾಗೂ 1982ರ ಕನ್ಯಾಕುಮಾರಿ ಗಲಭೆಗಳ ಬಗ್ಗೆ ನ್ಯಾಯಮೂರ್ತಿ ಪಿ.ವೇಣುಗೋಪಾಲ ಆಯೋಗ.

ತಾರತಮ್ಯದ ಭಾವನೆ

ಇವುಗಳಲ್ಲಿ ಕನ್ಯಾಕುಮಾರಿ ಗಲಭೆಗಳು ಮಾತ್ರ ಹಿಂದೂಗಳು ಮತ್ತು ಕ್ರೈಸ್ತರ ನಡುವಿನ ತಿಕ್ಕಾಟದಿಂದ ಉಂಟಾಗಿದ್ದವು. ಉಳಿದವೆಲ್ಲಾ ಹಿಂದೂ, ಮುಸ್ಲಿಂ ಘರ್ಷಣೆಗಳು. ಈ ಎಲ್ಲದರಲ್ಲೂ ಆರ್‌ಎಸ್‌ಎಸ್ ಮೇಲೆ ದೋಷಾರೋಪಣೆಯಿದೆ.

ಕೋಮು ಹಿಂಸಾಚಾರ ನಡೆಸಿರುವವರನ್ನು ಶಿಕ್ಷಿಸುವುದು ಮಾನವೀಯತೆಯ ದೃಷ್ಟಿಯಿಂದ ಮಾತ್ರವೇ ಅಲ್ಲ, ನಮ್ಮ ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ, ಪ್ರಜಾಪ್ರಭುತ್ವ ಅಡಿಗಲ್ಲನ್ನು ಬಲಗೊಳಿಸಲು ಕೂಡಾ ಈ ನ್ಯಾಯ ನೀಡಿಕೆ ಅತ್ಯಗತ್ಯ. ನ್ಯಾಯದಲ್ಲಿ ವಿಳಂಬ ಮಾಡುವುದೆಂದರೆ ನ್ಯಾಯವನ್ನು ನಿರಾಕರಿಸಿದಂತೆಯೇ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ನ್ಯಾಯವನ್ನು ತ್ವರಿತವಾಗಿ ನೀಡಬೇಕಷ್ಟೇ ಅಲ್ಲ, ಅದು ಪಕ್ಷಪಾತದಿಂದ ಕೂಡಿದೆ ಎಂಬ ಭಾವನೆಯೂ ಬರದಂತಿರಬೇಕು. ಈ ದೃಷ್ಟಿಯಲ್ಲಿ ಮುಂಬೈ ಸರಣಿ ಸ್ಫೋಟಗಳಲ್ಲಿ ನ್ಯಾಯತೀರ್ಮಾನ ಸ್ವಾಗತಾರ್ಹ ವಾದರೂ, ಮೇಲೆ ಹೇಳಿದಂತೆ ಇನ್ನೂ ಹಲವಾರು ಸಂದರ್ಭಗಳಲ್ಲಿ ನ್ಯಾಯ ಒದಗಿಸಲು ನಿರಾಕರಿಸುತ್ತಿರುವುದು ಅಥವಾ ಮನಸ್ಸಿಲ್ಲದಿರುವುದನ್ನು ಕಂಡರೆ ನಮ್ಮ ನ್ಯಾಯ ವ್ಯವಸ್ಥೆಯೇ ವಿಳಂಬವಿದೆ ಮಾತ್ರವಲ್ಲ, ತಾರತಮ್ಯವೂ ಅದರೊಳಗೇ ಅಡಕವಾಗಿದೆ ಎಂಬ ಭಾವನೆ ಉಂಟಾಗದಿರದು.



ನ್ಯಾಯದ ನಿರೀಕ್ಷೆಯಲ್ಲಿ

ಭಯೋತ್ಪಾದನೆ ಎಂಬುದು ಇಡೀ ಮಾನವ ಕುಲದ ಮೇಲೆ ನಡೆಸುವ ಅಪರಾಧ. ಅದನ್ನು ಯಾವುದೇ ಧರ್ಮಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಭಯೊತ್ಪಾದನೆಯ ಹುಟ್ಟಡಗಿಸಬೇಕು. ಆದರೆ ಅದಕ್ಕೆ ಒಂದು ನಿರ್ದಿಷ್ಟ ಕೋಮಿನ ಮೇಲೆ ಗುರಿಯಿಟ್ಟರೆ ಅದರಿಂದ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳುತ್ತದೆ, ಅದು ಇನ್ನಷ್ಟು ಜನರನ್ನು ಭಯೋತ್ಪಾದನೆಯತ್ತ ತಳ್ಳುತ್ತದೆ.

ಭಾರತದಲ್ಲಿ ಭಯೋತ್ಪಾದನೆಯ ಸಂಕಟಗಳನ್ನು ಹಿಂದೂಗಳು, ಮುಸ್ಲಿಮರು, ಸಿಖ್ಖರು, ಕ್ರಿಶ್ಚಿಯನ್ನರು, ಬುಡಕಟ್ಟು ಜನರು ಎಲ್ಲರೂ ಅನುಭವಿಸಿದ್ದಾರೆ. ಕಳೆದ ಆರು ದಶಕಗಳಲ್ಲಿ ಇಬ್ಬರು ಪ್ರಧಾನಮಂತ್ರಿಗಳು ಭಯೋತ್ಪಾದಕರ ಗುಂಡುಗಳಿಗೆ ಬಲಿಯಾಗಿದ್ದಾರೆ, ಸ್ವತ: ಮಹಾತ್ಮಾಗಾಂಧಿಯವರೇ ಭಯೋತ್ಪಾದಕನ ಗುಂಡಿಗೆ ಬಲಿಯಾಗಿದ್ದಾರೆ.

ಸಂವಿಧಾನದ ಭರವಸೆ ಏನಿದೆ?

ಆದ್ದರಿಂದ ಪ್ರಧಾನ ಮಂತ್ರಿಗಳು ಹೇಳಿರುವಂತೆ ಭಯೋತ್ಪಾದನೆಗೆ ಪೋಷಣೆ ನೀಡುವಂತಹ ವಾತಾವರಣವನ್ನು ನಿರ್ಮೂಲ ಮಾಡಬೇಕಾಗಿದೆ. ಹೀಗಿರುವಾಗ ನ್ಯಾಯ ವ್ಯವಸ್ಥೆಯಲ್ಲೂ ತಾರತಮ್ಯವಿದೆ ಎಂಬ ಭಾವನೆ ಉಂಟಾಗುವಂತಾದರೆ ಅದು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ಆದ್ದರಿಂದ ಇಂತಹ ಭಾವನೆ ಮೂಡದಂತೆ ನ್ಯಾಯ ವ್ಯವಸ್ಥೆಯನ್ನು ಉತ್ತಮಗೊಳಿಸುವತ್ತವೂ ತುರ್ತು ಗಮನ ಅಗತ್ಯ.

ಒಂದು ಗಣತಂತ್ರ ತನ್ನ ಎಲ್ಲಾ ನಾಗರಿಕರನ್ನು ಯಾವುದೇ ತಾರತಮ್ಯವಿಲ್ಲದೆ ಎಷ್ಟರಮಟ್ಟಿಗೆ ನೋಡಿಕೊಳ್ಳಬಲ್ಲುದು ಎಂಬುದರ ಮೇಲೆ ಅದರ ಶಕ್ತಿ ನಿಂತಿದೆ. ಭಾರತೀಯ ಸಂವಿಧಾನ ಎಲ್ಲಾ ನಾಗರೀಕರನ್ನು ಸಮಾನವಾಗಿ ಕಾಣುವುದಾಗಿ ತನ್ನ ಪೀಠಿಕೆಯಲ್ಲಿಯೇ ಭರವಸೆ ನೀಡಿದೆ. ಈ ಭರವಸೆಯನ್ನು ಈಡೇರಿಸಲಾಗದಿದ್ದರೆ ಗಣತಂತ್ರದ ಅಡಿಪಾಯಕ್ಕೇ ಅಪಾಯ. ಕಾನೂನಿನ ಎದುರು ಎಲ್ಲರೂ ಸಮಾನರು ಎಂಬುದನ್ನು ಕಾರ್ಯಗತಗೊಳಿಸಿ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಪಾಯವನ್ನು ಬಲಗೊಳಿಸಬೇಕು.

○

ಈ ಅಪರಾಧಿಗಳಿಗೆ ಶಿಕ್ಷೆ ಯಾವಾಗ?

ಶ್ರೀಕೃಷ್ಣ ಆಯೋಗದ ಶಿಫಾರಸುಗಳ ಜಾರಿಗಾಗಿ ಪ್ರಧಾನಿಗಳಿಗೆ ಸಿಪಿಐ(ಎಂ) ಸಂಸದರ ಪತ್ರ

ಬಾಬ್ರಿ ಮಸೀದಿ ಧ್ವಂಸದ ಹಿನ್ನೆಲೆಯಲ್ಲಿ ಡಿಸೆಂಬರ್ 1992-ಜನವರಿ 1993 ರಲ್ಲಿ ಮುಂಬೈಯಲ್ಲಿ ಭೀಕರ ಕೋಮು ಹಿಂಸಾಚಾರಗಳು ನಡೆದವು. ಅವುಗಳ ಬೆನ್ನಹಿಂದೆಯೇ ಅಲ್ಲಿ ಮಾರ್ಚ್ 1993 ರಲ್ಲಿ ಸರಣಿ ಸ್ಫೋಟಗಳಿಗೆ ಇನ್ನಷ್ಟು ಮುಗ್ಧ ಜೀವಗಳು ಬಲಿಯಾದವು. ಈ ಸ್ಫೋಟಗಳ ವಿಚಾರಣೆಯನ್ನು ಐದು ವರ್ಷಗಳಿಂದ ನಡೆಸಿರುವ ವಿಶೇಷ ಟಾಡಾ ನ್ಯಾಯಾಲಯ ಕೊನೆಗೂ ಅಪರಾಧಿಗಳಿಗೆ ಈಗ ಮರಣ ದಂಡನೆಯಿಂದ ಹಿಡಿದು ವಿವಿಧ ಅವಧಿಗಳ ಜೈಲುವಾಸದ ವರೆಗೆ ಶಿಕ್ಷೆಗಳನ್ನು ವಿಧಿಸಿದೆ. ಆದರೆ ಇದರ ಮೂರುಪಟ್ಟು ಜೀವಗಳನ್ನು ಬಲಿ ತೆಗೆದುಕೊಂಡ, ಇದಕ್ಕೆ ಕಾರಣಕರ್ತರಾದ ಭೀಕರ ಕೋಮು ಹಿಂಸಾಚಾರದ ಅಪರಾಧಿಗಳು ಯಾವ ಶಿಕ್ಷೆಯ ಭಯವೂ ಇಲ್ಲದೆ ಆರಾಮವಾಗಿ ಅಡ್ಡಾಡಿಕೊಂಡಿದ್ದಾರೆ.

ಆರು ವರ್ಷವಾದರೂ

ಮುಂಬೈಯಲ್ಲಿ ಡಿಸೆಂಬರ್ 1992- ಜನವರಿ 1993 ರಲ್ಲಿ ನಡೆದ ಭೀಕರ ಕೋಮು ಹಿಂಸಾಚಾರಗಳ ಕೂಲಂಕುಷ ವಿಚಾರಣೆ ನಡೆಸಿದ ಶ್ರೀಕೃಷ್ಣ ಆಯೋಗ ತನ್ನ ವರದಿ ಹಾಗೂ ಶಿಫಾರಸುಗಳನ್ನು ಸಲ್ಲಿಸಿ ಇದೇ ಆಗಸ್ಟ್ 6ಕ್ಕೆ ಒಂಭತ್ತು ವರ್ಷಗಳಾದರೂ ಆ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಇವುಗಳ ಜ್ಯಾರಿಗೆ ಇನ್ನಷ್ಟು ವಿಳಂಬ ಮಾಡದೆ ಕ್ರಮಗಳನ್ನು ಕೈಗೊಳ್ಳಬೇಕು, ಇಲ್ಲವಾದರೆ ನ್ಯಾಯ ನೀಡಿಕೆಯ ವಿಷಯದಲ್ಲಿ ಪಕ್ಷಪಾತ ಮಾಡಿದಂತಾಗುತ್ತದೆ ಎಂದು ಸಿಪಿಐ(ಎಂ) ಸಂಸದ ಹನ್ನನ್ ಮೊಲ್ಲಾ ಜುಲೈ 30ರಂದು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದಾರೆ. ಹನ್ನನ್ ಮೊಲ್ಲಾ ಲೋಕಸಭೆಯಲ್ಲಿ ಮಂಡಿಸಲಾದ ದಸ್ತಾವೇಜುಗಳ ಕುರಿತಾದ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಶ್ರೀಕೃಷ್ಣ ಆಯೋಗಕ್ಕೆ ತನ್ನ ವರದಿಯಲ್ಲಿ ಅಪರಾಧಿಗಳನ್ನು ಗುರುತಿಸಲು, ಅವರ ಅಪರಾಧಗಳಿಗೆ ಶಿಕ್ಷೆಗಳ ಶಿಫಾರಸು ಮಾಡಲು ಸಾಧ್ಯವಾಗಿತ್ತು. ಆದರೆ ಆ ವರದಿ ಇನ್ನೂ ಧೂಳು ತಿನ್ನುತ್ತಿದೆ, ಮಹಾರಾಷ್ಟ್ರದ ಕಾಂಗ್ರೆಸ್ ನೇತೃತ್ವದ ಸರಕಾರದ ಅಂತಃಸ್ಸಾಕ್ಷಿಯನ್ನು ಅದು ಸ್ವಲ್ಪವೂ ತಟ್ಟಿದಂತಿಲ್ಲ ಎಂದು ಹನ್ನನ್ ಮೊಲ್ಲ ತನ್ನ ಪತ್ರದಲ್ಲಿ ಖೇದ ವ್ಯಕ್ತಪಡಿಸಿದ್ದಾರೆ.

ಬಾಬ್ರಿ ಮಸೀದಿ ಧ್ವಂಸದ ನಂತರದ ಮುಂಬೈ ಕೋಮು ಹಿಂಸಾಚಾರಗಳಿಗೂ, ನಂತರ ನಡೆದ ಸರಣಿ ಸ್ಫೋಟಗಳಿಗೂ ಸಂಬಂಧವಿದೆ ಎಂಬುದನ್ನು ಶ್ರೀಕೃಷ್ಣ ಆಯೋಗದ ವರದಿ ಸ್ಪಷ್ಟಗೊಳಿಸಿದೆ. 'ಜನವರಿ 8,1993ರಿಂದ ಮುಸ್ಲಿಮರು ಮತ್ತು ಅವರ ಆಸ್ತಿಪಾಸ್ತಿಗಳ ಮೇಲೆ ಹಲ್ಲೆಗಳನ್ನು ಸಂಘಟಿಸುವಲ್ಲಿ ಶಿವಸೇನೆ ಮುಂದಾಳುತ್ವ ವಹಿಸಿತು ಎಂಬುದರಲ್ಲಿ ಸಂದೇಹವಿಲ್ಲ. ಶಾಖಾ ಪ್ರಮುಖರಿಂದ ಹಿಡಿದು ಶಿವಸೇನಾ ಮುಖ್ಯಸ್ಥ ಬಾಳಠಾಕ್ರೆಯವರ ವರೆಗೆ ಇದಕ್ಕೆ ಮಾರ್ಗದರ್ಶನ ನೀಡಿದರು' ಮತ್ತು ಬಾಳ ಠಾಕ್ರೆಯವರು 'ಒಬ್ಬ ನುರಿತ ಸೇನಾಪತಿಯಂತೆ ತಮ್ಮ ವಿಧೇಯ ಶಿವಸೈನಿಕರಿಗೆ' ಮುಸ್ಲಿಮರ ವಿರುದ್ಧ ಹಲ್ಲೆಗಳನ್ನು ಸಂಘಟಿಸುವಂತೆ ಆದೇಶ ನೀಡಿದರು ಎಂದು ಸ್ಪಷ್ಟವಾಗಿ ಹೇಳಿರುವ ಶ್ರೀಕೃಷ್ಣ ಆಯೋಗ ನಿರ್ದಿಷ್ಟವಾಗಿ ಶಿವಸೇನೆ, ಬಿಜೆಪಿ ಮತ್ತು ಕಾಂಗ್ರೆಸ್ ಮುಖಂಡರ ಹೆಸರುಗಳನ್ನೂ ನಮೂದಿಸಿದೆ ಎಂಬುದನ್ನು ಹನ್ನನ್ ಮೊಲ್ಲ ತನ್ನ ಪತ್ರದಲ್ಲಿ ನೆನಪಿಸಿದ್ದಾರೆ.

ಆಯೋಗ ಮುಸ್ಲಿಮರ, ಅವರ ಹೆಂಗಸರು-ಮಕ್ಕಳ ಕೊಲೆ-ಸುಲಿಗೆಗಳನ್ನು ನಡೆಸಿದ ಅಥವಾ ಅದರಲ್ಲಿ ಶಿವಸೈನಿಕರಿಗೆ ನೆರವಾದ 31 ಪೋಲೀಸ್ ಅಧಿಕಾರಿಗಳ ಹೆಸರುಗಳನ್ನೂ ನಿರ್ದಿಷ್ಟವಾಗಿ ಪಟ್ಟಿ ಮಾಡಿತ್ತು. ಯಾವ ಅಪರಾಧಿಯನ್ನೂ ಶಿಕ್ಷಿಸದೆ ಬಿಡುವುದಿಲ್ಲ ಎಂದು ಕಾಂಗ್ರೆಸ್-ಎನ್‌ಸಿಪಿ ಸರಕಾರದ ಮುಖ್ಯಮಂತ್ರಿ ಸಾರಿದ್ದರು. ಆದರೂ ಅವರ ಸರಕಾರ ಈ ಪಟ್ಟಿಯಲ್ಲಿರುವ ಕನಿಷ್ಟ 10 ಅಧಿಕಾರಿಗಳಿಗೆ ಬಡ್ತಿ ನೀಡಿ ಪುರಸ್ಕರಿಸಿರುವಾಗ ಅವರು ತಮ್ಮ ಮಾತಿನಂತೆ ನಡೆದಿದ್ದಾರೆ ಎಂದು ಹೇಳಲು ಸಾಧ್ಯವೇ ಎಂದು ಹನ್ನನ್ ಮೊಲ್ಲ ಪ್ರಶ್ನಿಸಿದ್ದಾರೆ.

ಶ್ರೀಕೃಷ್ಣ ಆಯೋಗದ ಶಿಫಾರಸುಗಳನ್ನು ಅಕ್ಷರಶಃ ಪ್ರಾಮಾಣಿಕವಾಗಿ ಜ್ಯಾರಿಗೆ ತರುವ ಕ್ರಮಗಳನ್ನು ಆರಂಭಿಸದಿದ್ದರೆ ಅಲ್ಪಸಂಖ್ಯಾತ ಸಮುದಾಯದವರಿಗೆ ಮಾತ್ರವಲ್ಲ,ಈ ದೇಶದ ಇತರ ನಾಗರಿಕರಿಗೂ ತಪ್ಪು ಸಂಕೇತ ನೀಡಿದಂತಾಗುತ್ತದೆ ಎಂದು ತನ್ನ ಪತ್ರದಲ್ಲಿ ಹನ್ನನ್ ಮೊಲ್ಲ ಅಭಿಪ್ರಾಯಪಟ್ಟಿದ್ದಾರೆ.

ಪ್ರಧಾನ ಮಂತ್ರಿಗಳು ನಮ್ಮ ದೇಶದಲ್ಲಿ ನಡೆದಿರುವ ಕೋಮುವಾದಿ ಬರ್ಬರತೆಗಳ ವಿರುದ್ಧ ಸರಿಯಾದ ನಿಲುವು ತಳೆದಿದ್ದಾರೆ. 1984ರಲ್ಲಿ ಸಿಖ್-ವಿರೋಧಿ ಹಿಂಸಾಚಾರಗಳ ಸಂತ್ರಸ್ತರಿಗೆ ಪರಿಹಾರ ಒದಗಿಸಿದ್ದಾರೆ. ಅದೇ ರೀತಿ ಶ್ರೀಕೃಷ್ಣ ಆಯೋಗದ ವರದಿಯ ಜ್ಯಾರಿಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಹನ್ನನ್ ಮೊಲ್ಲ ಆಗ್ರಹಿಸಿದ್ದಾರೆ. ಇಲ್ಲವಾದರೆ ಅಲ್ಪಸಂಖ್ಯಾತ ಸಮುದಾಯದ ಮನದಲ್ಲಿ ನಿಷ್ಪಕ್ಷಪಾತತೆಯ ಮತ್ತು ಭದ್ರತೆಯ ಭಾವನೆ ಮೂಡಿಸಲು ಸಾಧ್ಯವಾಗಲಿಕ್ಕಿಲ್ಲ; ಈ ಅಪರಾಧಗಳನ್ನು ಎಸಗಿರುವವರು ಬಲಿಷ್ಟ ವ್ಯಕ್ತಿಗಳು, ಯಾವುದೇ ಕ್ರಮವನ್ನು ಬುಡಮೇಲು ಮಾಡುವ ಶಕ್ತಿ ಅವರಿಗಿದೆ. ಆದ್ದರಿಂದ ಶ್ರೀಕೃಷ್ಣ ಆಯೋಗದ ವರದಿಯನ್ನು ಪೂರ್ಣವಾಗಿ, ಸಮಗ್ರವಾಗಿ ಜ್ಯಾರಿಗೆ ತರುವ ಒಂದು ಪ್ರಜ್ಞಾಪೂರ್ವಕವಾದ ಸಮಗ್ರ ಮತ್ತು ದೃಢ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಹನ್ನನ್ ಮೊಲ್ಲ ತನ್ನ ಪತ್ರದಲ್ಲಿ ಹೇಳಿದ್ದಾರೆ.

○



ರೆಡ್ಡಿ ಸರ್ಕಾರ ಉರುಳಿಸಿದ ಹೆಣಗಳು

ಖಮ್ಮಂ ನರಮೇಧ

ತುಂಡು ಭೂಮಿ ಕೇಳಿದವರೆದೆಗೆ ಗುಂಡು

**ಬಂಡವಾಳಿಗರು,
ಬಹುರಾಷ್ಟ್ರೀಯ ಕಂಪನಿಗಳಿಗೆ
ಅವರು ಕೇಳಿದಷ್ಟು ಭೂಮಿ
ಕೊಡುವ ಸರ್ಕಾರ ಬಡಜನ
ತುಂಡುಭೂಮಿ ಕೇಳಿದರೆ
ಅವರ ಎದೆಗೆ ಗುಂಡು ಹಾಕಿದೆ**

ಜಿ.ಆರ್.ಮುರುಳಿಕೃಷ್ಣ

ಶಾಂತಿಯುತವಾಗಿ ನಡೆಸುತ್ತಿದ್ದ ಧರಣಿ ಸತ್ಯಾಗ್ರಹದ ಮೇಲೆ ಪೊಲೀಸರು ಯಮಕಿಂಕರರಂತೆ ಬಂದೆರಗಿದರು. ಯಾವುದೇ ಮುನ್ಸೂಚನೆ, ಎಚ್ಚರಿಕೆ ನೀಡಲಿಲ್ಲ. ಲಾಠಿ ಪ್ರಹಾರವೂ ಮಾಡಲಿಲ್ಲ. ಅಶ್ರುವಾಯು ಶೆಲ್ ಸಿಡಿಸಲಿಲ್ಲ. ರಬ್ಬರ್ ಬುಲೆಟ್‌ಗಳನ್ನು ಹಾರಿಸಲಿಲ್ಲ. ವಾಟರ್ ಜೆಟ್‌ಗಳ ಬಳಕೆ ಇಲ್ಲ.ಏಕಾಏಕಿ ಎ.ಕೆ.47ಗಳನ್ನು ಬಳಸಿದರು. ಗುಂಡಿನ ಮಳೆಗರೆಯುತ್ತಾ ಅಮಾಯಕರ ರಕ್ತದೋಕುಳಿಯಾಡಿದರು. ಆರು ಮಂದಿ ಅಮಾಯಕರ ಅಮೂಲ್ಯ ಜೀವಗಳನ್ನು ಅವರ ಸಂಬಂಧಿಕರು, ಸ್ನೇಹಿತರು, ಹಿತೈಷಿಗಳ ಕಣ್ಣ ಮುಂದೆಯೇ ಮಣ್ಣುಪಾಲು ಮಾಡಿದರು. ಖಾಕಿ ದೌರ್ಜನ್ಯದ ವಿಶ್ವರೂಪವನ್ನು ಪ್ರದರ್ಶಿಸಿದರು. ಜುಲೈ 28ರಂದು ಭೂಮಿಗಾಗಿ ಆಂಧ್ರದ ಖಮ್ಮಂನಲ್ಲಿ ಹೋರಾಟ ನಡೆಸುತ್ತಿದ್ದವರ ಮೇಲೆ ನಡೆದ ಈ ದುಷ್ಕೃತ್ಯ ಇತಿಹಾಸದ ಕರಾಳ ಪುಟಗಳಲ್ಲಿ ಸೇರಿತು.

ಪೂರ್ವಯೋಜಿತ ನರಮೇಧ

ಪ್ರತಿಭಟನಕಾರರು ಭಯೋತ್ಪಾದಕರಲ್ಲ, ಉಗ್ರಗಾಮಿಗಳಲ್ಲ, ಫ್ಯಾಕ್ಷನಿಸ್ಟ್‌ಗಳಲ್ಲ, ದೇಶದ್ರೋಹಿಗಳಂತೂ ಮೊದಲೇ ಅಲ್ಲ. ತೆಂಗಿನ ಗರಿಗಳಲ್ಲಿ ಗುಡಿಸಲು ನಿರ್ಮಿಸಿಕೊಂಡೋ, ಸಿಮೆಂಟ್ ಶೀಟ್‌ಗಳ ಮೂಲಕವೊ ಸೂರೊಂದನ್ನು ನಿರ್ಮಿಸಿಕೊಂಡು ಜೀವನ ಸಾಗಿಸಲು ಕೇವಲ ನಾಲ್ಕು ಗಜ ಭೂಮಿಗಾಗಿ ಪ್ರಜಾಸತ್ತಾತ್ಮಕವಾಗಿ ಪ್ರತಿಭಟನೆ ನಡೆಸುತ್ತಿದ್ದ ಬಡವರನ್ನು ರಕ್ತ ಪಿಪಾಸು ಪೊಲೀಸರು ಬೇಟೆ ಪಕ್ಷಿಗಳನ್ನು ಸುಡುವಂತೆ ಸುಟ್ಟರು. ಕನಿಷ್ಠ ನಿಯಮಗಳನ್ನು ಪಾಲಿಸದೆ ಪೂರ್ವಯೋಜಿತ ನರಮೇಧ ನಡೆಸಿದರು.

ರೆಡ್ಡಿ ಸರ್ಕಾರ ಬಕಾಸುರರಿಗೆ ವರ

ಮೂರು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದ ವೈ.ಎಸ್.ರಾಜಶೇಖರ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ಲಕ್ಷಾಂತರ ಎಕರೆ ಭೂಮಿಯನ್ನು ನೀಡಲು ಮುಂದಾಗಿದೆ. ಉದ್ಯಮಿಗಳನ್ನು ಸಂತುಷ್ಟಗೊಳಿಸಲು ಪ್ರತ್ಯೇಕ ಕೈಗಾರಿಕಾ ನೀತಿಯನ್ನು ರೂಪಿಸಿದೆ. ರಿಯಲ್ ಎಸ್ಟೇಟ್ ಬಕಾಸುರರಿಗೆ ವರದಾನವಾಗುವಂತಹ ಕ್ರಮಗಳನ್ನು ಅವ್ಯಾಹತವಾಗಿ ಕೈಗೊಂಡಿದ್ದು, ಕೇವಲ ಮೂರು ವರ್ಷಗಳಲ್ಲೇ 50 ಸಾವಿರ ಎಕರೆ ಸರ್ಕಾರಿ ಭೂಮಿಯನ್ನು ಬೆಳ್ಳಿ ತಟ್ಟೆಯಲ್ಲಿಟ್ಟು ನೀಡಿದೆ.

ಪೊಲೀಸರ ಪಾಶವೀ ಕೃತ್ಯ

ಆದರೆ ಬದುಕಲು ನಿವೇಶನ ಕೇಳಿದ ಬಡವರ ಮೇಲೆ ಮಹಿಳೆ ಮಕ್ಕಳೆನ್ನದೆ, ವೃದ್ಧರೆನ್ನದೆ ಪೊಲೀಸರ ಮೂಲಕ ವಿವೇಚನಾರಹಿತವಾಗಿ ದಾಳಿ ನಡೆಸಿತು. ಭೂಮಿ ಕೇಳಿದ ಬಡವರನ್ನು ಭೂಮಿಯೊಳಕ್ಕೆ ಹೂತುಹಾಕಿತು. ಪೊಲೀಸನೊಬ್ಬ ಬೀಸಿದ ಲಾಠಿಗೆ ಸಿಕ್ಕಿದ ಮಹಿಳೆ ಪೆದ್ದಲಕ್ಷ್ಮಿ ಸ್ಥಳದಲ್ಲೇ ಮೃತಪಟ್ಟಳು.

80 ಸುತ್ತು ಮನಸೋಇಚ್ಛೆ ಗುಂಡಿನ ಮಳೆಗರೆದಿದ್ದರು. ತಮ್ಮಲ್ಲಿದ್ದ ಗುಂಡುಗಳು ಮುಗಿದ ನಂತರವೇ ದಾಳಿಗಳನ್ನು ನಿಲ್ಲಿಸಿದ್ದು. ಮುದಿಗೊಂಡ ಸ್ಥಳವನ್ನು ಪೊಲೀಸರು ರಣರಂಗವಾಗಿ ಮಾರ್ಪಡಿಸಿದ್ದರು. ಮೊಳಕಾಲ ಕೆಳಗೆ ಗುಂಡು ಹಾರಿಸಬೇಕೆಂಬ ನಿಯಮವನ್ನು ಪೊಲೀಸರು ಗಾಳಿಗೆ ತೂರಿದ್ದರು. ಮರಗಳ ಮೇಲೆ, ಮನೆ ಗೋಡೆಗಳ ಮೇಲೆಲ್ಲಾ ಬುಲೆಟ್‌ಗಳು ಹಾರಿದ್ದವು. ಕೇವಲ 400-500 ಮಂದಿ ಮಾತ್ರ ಪ್ರತಿಭಟನ ಕಾರರು ಅಲ್ಲಿ ಜಮಾಯಿಸಿದ್ದರು. ಶಾಂತಯುತ ಧರಣಿಗೆ ಅನುವು ಮಾಡಿಕೊಟ್ಟಿದ್ದರೆ ಈ ದುರ್ಘಟನೆ ನಡೆಯುತ್ತಿರಲಿಲ್ಲ. ಗುಂಪನ್ನು ಚದುರಿಸಲೇ ಬೇಕೆಂದಾದಲ್ಲಿ ಲಾಠಿ ಪ್ರಹಾರ ಮಾಡಿದ್ದರೂ ಸಾಕಾಗಿತ್ತು. ಆದರೆ ಪೊಲೀಸರು ಅದ್ಯಾವುದಕ್ಕೂ ಮುಂದಾಗದೆ ಪಾಶವೀಯ ಕೃತ್ಯಕ್ಕೆ ಅಣಿನೆರೆದರು.

ಜುಲೈ 28ರಂದು ಸಿಪಿಎಂ ಮುಖಂಡರಾದ ಬಂಡಿರಮೇಶ್ ನೇತೃತ್ವದಲ್ಲಿ ಮುಂಜಾನೆ ಯಿಂದ ಧರಣಿ ಸತ್ಯಾಗ್ರಹ ಆರಂಭಿಸಲಾಗಿತ್ತು. ಪ್ರತಿಭಟನೆ ಶಾಂತಿಯುತ ವಾಗಿ ಮುಂದುವರೆದಿತ್ತು. 12ಗಂಟೆ ವೇಳೆಗೆ ಆಗಮಿಸಿದ ಪೊಲೀಸರು ಏಕಾಏಕಿ ರಮೇಶ್‌ರನ್ನು ಶಾಮಿಯಾನ ದಿಂದ ಹೊರಕ್ಕೆಳೆದು ಲಾಠಿಗಳಿಂದ ದಾಳಿ ನಡೆಸಿದರು. ಈ ಕೃತ್ಯವನ್ನು ಪ್ರತಿಭಟನ ಕಾರರು ವಿರೋಧಿಸಿದ್ದಕ್ಕೆ ಪೊಲೀಸರು ತಮ್ಮ ಪೈಶಾಚಿಕ ಸ್ವರೂಪವನ್ನು ಪ್ರದರ್ಶಿಸಿದರು.

ತನ್ನದೇ ಭೂಮಿಗೆ ಹೋದರೆ ಭೂಮಾಲಿಕರು ರೌಡಿಗಳ ಮೂಲಕ ದಾಳಿಗಳನ್ನು ನಡೆಸುತ್ತಾರೆ. ಸರ್ಕಾರದ ಭೂಮಿಗಾಗಿ ಶಾಂತಿಯುತ ವಾಗಿ ಪ್ರತಿಭಟನೆಗಳನ್ನು ಕೈಗೊಂಡರೆ ಪೊಲೀಸರು ಬಂದೂಕುಗಳಿಂದ ಉತ್ತರಿಸುತ್ತಾರೆ. ಇದು ಆಂಧ್ರದಲ್ಲಿನ ವಾಸ್ತವ ಸ್ಥಿತಿ.



ಕೊಡಿ ಭೂಮಿಯನ್ನು

ಕೋಮುವಾದಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ, ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕಿ ಸ್ವರ್ಣಾಂಧ್ರ ಹೆಸರಿನಲ್ಲಿ ರಾಜ್ಯವನ್ನು ಮರಣಾಂಧ್ರವಾಗಿ ರೂಪಿಸಿದ್ದ ಚಂದ್ರಬಾಬು ನಾಯ್ಡು ನೇತೃತ್ವದ ಸರ್ಕಾರವನ್ನು ಕಿತ್ತೊಗೆಯಲು 2004ರಲ್ಲಿ ಎಡಪಕ್ಷಗಳು ಕಾಂಗ್ರೆಸ್‌ಗೆ ಸಹಕಾರ ನೀಡಿದ್ದವು. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಎಡಪಕ್ಷಗಳ ಒತ್ತಾಯದ ಮೇರೆಗೆ ಬಡವರಿಗೆ ಭೂಮಿ ಹಂಚುವ ಯೋಜನೆಯನ್ನೂ ಸೇರಿಸಲಾಯಿತು. ಇದರ ಪರಿಣಾಮವಾಗಿ ಕೊನೇರು ರಂಗಾರಾವ್ ಸಮಿತಿಯನ್ನು ಸರ್ಕಾರ ರಚಿಸಿತು.

ಕೊನೇರು ರಂಗಾರಾವ್ ಸಮಿತಿ ವರದಿ ನೀಡಿ ವರ್ಷವಾದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕನಿಷ್ಠ ಪಕ್ಷ ವರದಿಯನ್ನು ಬಹಿರಂಗಪಡಿಸಲಿಲ್ಲ. ಎಡ ಪಕ್ಷಗಳ ತೀವ್ರ ಒತ್ತಾಯದಿಂದಾಗಿ ವರದಿಯನ್ನು ವಿಧಾನ ಸಭೆ ಅಧಿವೇಶನದಲ್ಲಿ ಚರ್ಚಿಸಲಾಯಿತು. ಕೊನೇರು ನೀಡಿದ್ದ 104 ಶಿಫಾರಸುಗಳಲ್ಲಿ 74ನ್ನು ಸರ್ಕಾರ ಅಂಗೀಕರಿಸಿತು. ಆದರೆ ಈ ಶಿಫಾರಸುಗಳ ಅನುಷ್ಠಾನಕ್ಕೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ವರದಿ ಅನುಷ್ಠಾನಕ್ಕೆ ಸಮಿತಿ ರಚಿಸಬೇಕೆಂದು ಸಿಪಿಎಂ ಪಕ್ಷ ಮತ್ತೆ ಒತ್ತಾಯಿಸಿತು. ಆದರೂ ಸರ್ಕಾರ ಸುಳ್ಳು ನೆಪಗಳನ್ನು ಮುಂದಿಡುತ್ತಾ ಕಾಲಹರಣ ಮಾಡುತ್ತಿತ್ತು. ಬಂಡವಾಳಿಗರ, ಭೂಮಾಲಿಕರ ಆಡಳಿತದಲ್ಲಿ ಹೋರಾಟ ಮಾಡದೆ ಅನ್ಯಮಾರ್ಗವಿಲ್ಲ ಎಂದು ಹೋರಾಟಗಳನ್ನು ರೂಪಿಸಲಾಯಿತು.

ಜಗ್ಗದ ಹೋರಾಟ

ಮೂರು ತಿಂಗಳಿಂದ ನಿರಂತರವಾಗಿ ವಿವಿಧ ರೀತಿಯ ಪ್ರತಿಭಟನೆಗಳನ್ನು ನಡೆಸಲಾಗುತ್ತಿತ್ತು. ಇಡೀ ರಾಜ್ಯಾದ್ಯಂತ ಸಾವಿರಾರು ಕೇಂದ್ರಗಳಲ್ಲಿ ಪ್ರತಿದಿನ ವಿವಿಧ ರೀತಿಯ ಪ್ರತಿಭಟನೆಗಳನ್ನು ಮುಂದುವರೆಸಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಬಡಜನ ಈ ಪ್ರತಿಭಟನೆಗಳಲ್ಲಿ ಪಾಲ್ಗೊಂಡರು. ಸಿಪಿಎಂನೊಂದಿಗೆ ಇತರ 195 ಸಂಘಸಂಸ್ಥೆಗಳು ಸೇರ್ಪಡೆಯಾದವು. ಕೊನೇರು ಶಿಫಾರಸುಗಳ ಜಾರಿಗೆ ಸ್ವತಂತ್ರ ಸಮಿತಿ ರಚಿಸಬೇಕೆಂದು ಒತ್ತಾಯಿಸಲಾಗುತ್ತಿತ್ತು. 5000 ಮಹಿಳೆಯರು ಸೇರಿದಂತೆ 24,000 ಮಂದಿ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಇದುವರೆಗೂ 3,080ಮಂದಿಯನ್ನು ಜೈಲಿಗೆ ಹಾಕಲಾಗಿದೆ. ಹಾಗಿದ್ದರೂ ಪ್ರತಿಭಟನೆಗಳು ಮುಂದುವರೆಯುತ್ತಲೇ ಇತ್ತು. ಸರ್ಕಾರ ಇದ್ಯಾವುದಕ್ಕೂ ಬಗ್ಗಲಿಲ್ಲ. ಅಂತಿಮ ಪ್ರಯತ್ನವಾಗಿ ಸಿಪಿಎಂ ರಾಜ್ಯ ಕಾರ್ಯದರ್ಶಿ ಕಾಮ್ರೆಡ್ ಬಿ.ವಿ.ರಾಘವುಲು ನೇತೃತ್ವದಲ್ಲಿ ಜುಲೈ 25ರಂದು ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಲಾಯಿತು. ಪೊಲೀಸರು ರಾತ್ರೋರಾತ್ರಿ ಉಪವಾಸ ನಿರತರನ್ನು ಬಂಧಿಸಿದರು. ಇದನ್ನು ವಿರೋಧಿಸಿ ಜುಲೈ 28ರಂದು ರಾಜ್ಯ ಬಂದ್‌ಗೆ ಕರೆ ನೀಡಲಾಯಿತು.

ಹೋರಾಟವೊಂದೇ ದಾರಿಯಾಯಿತು

ಮೂರು ವರ್ಷಗಳಿಂದ 4.5ಲಕ್ಷ ಎಕರೆ ಭೂಮಿಯನ್ನು ಹಂಚಿಕೆ ಮಾಡಲಾಗಿದೆ ಎಂದು ರಾಜ್ಯ ಸರ್ಕಾರ ಹೇಳುತ್ತಿದೆ. ಆದರೆ ಇದರಲ್ಲಿ ಶೇಕಡ 80 ಭೂಮಿ ಈಗಾಗಲೇ ತಮ್ಮ ಹಿಡಿತದಲ್ಲಿಟ್ಟುಕೊಂಡಿರುವವರಿಗೆ ನೀಡಿದ್ದು, ಉಳಿದಂತೆ ಕೇವಲ ಶೇಕಡ 20ರಷ್ಟು ಮಾತ್ರ ಸರ್ಕಾರ ಹಂಚಿದೆ. 4.5ಲಕ್ಷ ಎಕರೆಯಷ್ಟು ಭೂಮಿ ಹಂಚಿಕೆ ಮಾಡಿದ್ದೇ ಆದರೆ ಲಕ್ಷಾಂತರ ಮಂದಿ ಬಡವರು ಇಷ್ಟೊಂದು ಪ್ರಮಾಣದಲ್ಲಿ ಪ್ರತಿಭಟನೆಗಳಲ್ಲಿ ಏಕೆ ಪಾಲ್ಗೊಳ್ಳುತ್ತಿದ್ದರು ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುತ್ತದೆ. 1960ರಿಂದ ವಿವಿಧ ನೀತಿಗಳ ಆಧಾರದಲ್ಲಿ 42ಲಕ್ಷ ಎಕರೆ ಭೂಮಿಯನ್ನು ಹಂಚಿಕೆ ಮಾಡಲಾಗಿದೆ. ಆದರೆ ಇದರಲ್ಲಿ ಬಹುತೇಕ ಭೂಮಿ ಭೂಮಾಲಿಕರು, ಜಮೀನ್ದಾರರು ಆಕ್ರಮಿಸಿಕೊಂಡಿದ್ದಾರೆ. ಅದನ್ನು ಬಿಡಿಸಲು ಸರ್ಕಾರಗಳು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಅಷ್ಟೊಂದು ಬಲಿಷ್ಠವಾಗಿದೆ ಆಂಧ್ರದಲ್ಲಿ ಭೂಮಾಲಿಕರ ಲಾಬಿ. ಹೈದರಾಬಾದ್ ಸುತ್ತ ಮುತ್ತ 9000 ಎಕರೆಯಷ್ಟು ಹಂಚಿಕೆ ಮಾಡಲಾದ ಭೂಮಿ ಇದ್ದು, ಅದರಲ್ಲಿ ಸುಮಾರು ಅರ್ಧದಷ್ಟನ್ನು ಅಕ್ರಮವಾಗಿ ಸ್ವಾಧೀನ ಮಾಡಿಕೊಳ್ಳ ಲಾಗಿದೆ. ಹೈದರಾಬಾದ್ ಸುತ್ತ ಮುತ್ತಲ ಪ್ರದೇಶದಲ್ಲಿ ಒಂದು ಎಕರೆ ಭೂಮಿಯ ಬೆಲೆ ಈಗ ಸರಾಸರಿ 10 ಕೋಟಿ ರೂ.ಗಳಾಗಿದೆ. ಅಲ್ಲಿ ನಡೆಯುತ್ತಿರುವ ರಿಯಲ್ ಎಸ್ಟೇಟ್ ದಂದೆಯ ಅಗಾಧತೆಯನ್ನು ಇದರಿಂದಲೇ ಅರಿಬಹುದಾಗಿದೆ. ಮುಖ್ಯ ಮಂತ್ರಿ ವೈ.ಎಸ್.ರಾಜಶೇಕರ ರೆಡ್ಡಿ ಕುಟುಂಬ ಅತಿಕ್ರಮಿಸಿಕೊಂಡಿದ್ದ ಭೂಮಿಯನ್ನು ಇತ್ತೀಚೆಗಷ್ಟೆ ಬಿಟ್ಟುಕೊಟ್ಟಿದ್ದಾರೆ. ಸರ್ಕಾರಿ ವಶದಲ್ಲಿರುವ ಭೂಮಿಯನ್ನು ಹಂಚಿದರೆ ಇಡೀ ಆಂಧ್ರಪ್ರದೇಶದಲ್ಲಿರುವ ಎಲ್ಲ ಬಡ ಕುಟುಂಬಗಳಿಗೆ ಒಂದು ಅಥವಾ ಎರಡು ಎಕರೆ ಭೂಮಿ ವಿತರಿಸಬಹುದೆಂದು ಕೋನೇರು ಸಮಿತಿ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಆದರೆ ಸರ್ಕಾರ ಅಂತಹ ಯಾವುದೇ ಪ್ರಯತ್ನ ಮಾಡಿಲ್ಲ. ಇದೊಂದು ಬಂಡವಾಳಶಾಹಿ ಸರ್ಕಾರವಾಗಿರು ವುದರಿಂದ ಭೂಹಂಚಿಕೆ ಮಾಡಲಿದೆ ಎಂಬ ನಂಬಿಕೆಯೂ ಇಲ್ಲ. ತೀವ್ರತರವಾದ ವರ್ಗಹೋರಾಟಗಳಿಂದಲ್ಲದೆ ಭೂಮಿ ಪಡೆಯಲು ಸಾಧ್ಯವಿಲ್ಲ.

28ರಂದು ಯೋಜಿಸಿದ್ದ ರಾಜ್ಯ ಬಂದ್ ವಿಫಲಗೊಳಿಸಲು ಸರ್ಕಾರ ಸರ್ವರೀತಿಯ ಯೋಜನೆಗಳನ್ನು ರೂಪಿಸಿತು. ಈ ಕುರಿತು ರಾಜ್ಯದ ಎಲ್ಲ ಅಧಿಕಾರಿಗಳೊಂದಿಗೆ ಹಿಂದಿನ ದಿನವೇ ಮಾತುಕತೆಗಳನ್ನು ನಡೆಸಿ ಎಂತದೇ ಕ್ರಮ ಕೈಗೊಂಡು ಸಿಪಿಎಂ ಪಕ್ಷದ ಹೋರಾಟ ಬಗ್ಗುಬಡಿಯಲು ಸೂಚಿಸಿತ್ತು. ಪೊಲೀಸ್ ಭದ್ರತೆಯೊಂದಿಗೆ ಬಸ್ ಸಂಚಾರ ಆರಂಭಿಸಿತು.

ಭೂ ಹೋರಾಟಗಳನ್ನು ಹತ್ತಿಕ್ಕಲು ವೈ.ಎಸ್. ಮೂರು ತಿಂಗಳಿನಿಂದ ಪೊಲೀಸರ ಮೇಲೆ ಸತತವಾಗಿ ಒತ್ತಡ ಹೇರುತ್ತಿದ್ದರು. ಪೊಲೀಸರು ಹೇಡಿಗಳು, ಕೈಲಾಗದವರು ಎಂದೆಲ್ಲ ನಿಂದಿಸಿದ್ದರು. ಪರೋಕ್ಷವಾಗಿ ಅವರನ್ನು ಉದ್ರೇಕಿಸುತ್ತಿದ್ದರು. ಇದರ ಪ್ರತಿಫಲವೇ ರೊಚ್ಚಿಗೆದ್ದ ಪೊಲೀಸರು ಮುದಿಗೊಂಡದಲ್ಲಿ ಬಡವರ ರಕ್ತ ಬಸಿದಿದ್ದು. ಇದೊಂದು ಪೂರ್ವ ಯೋಜಿತ ಕೃತ್ಯವಾಗಿದೆ. ಈ ಹತ್ಯಾಕಾಂಡದ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಸರ್ಕಾರವೇ ಹೊರಬೇಕಾಗಿದೆ. ಇದನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲದ ರಾಜಶೇಖರ ರೆಡ್ಡಿ ನಿರಾಯುಧರಾಗಿ ಪ್ರಜಾಪ್ರಭುತ್ವ ರೀತಿಯಲ್ಲಿ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಬಂಡಿ ರಮೇಶ್ ಮತ್ತು ಅವರ ಪತ್ನಿ ಮಂಡಳ ಪಂಚಾಯಿತಿ ಅಧ್ಯಕ್ಷರಾದ ಬಂಡಿ ಪದ್ಮರನ್ನು ನಕ್ಸಲರೆಂದು ಹೇಳುವಂತಹ ಕೀಳು ಮಟ್ಟಕ್ಕೆ ಇಳಿದಿರುವುದು ಪ್ರಜಾಪ್ರಭುತ್ವದ ಅಣಕವಾಗಿದೆ.

ಮುಖ್ಯಮಂತ್ರಿ ಪ್ರಚೋದನೆ

ಈ ಹತ್ಯೆಗಳನ್ನು, ಸರ್ಕಾರದ ದಮನಕಾಂಡವನ್ನು ವಿರೋಧಿಸಿ ದೇಶದಾದ್ಯಂತ ಪ್ರತಿಭಟನೆಗಳು ನಡೆದಿವೆ. ಪಿಬಿ ಸದಸ್ಯರೂ, ಎಂ.ಪಿ.ಗಳೂ ಆದ ಸೀತಾರಾಂ ಯೆಚೂರಿ ಸ್ಥಳಕ್ಕೆ ಭೇಟಿ ನೀಡಿ ರಾಜಶೇಖರ ರೆಡ್ಡಿ ಸರ್ಕಾರದ ರಾಜಿನಾಮೆ ಕೇಳಿದ್ದಾರೆ. ಎಡಪಕ್ಷಗಳ ನಾಯಕರು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ. ಅಮಾಯಕ ಜನರ ಮೇಲೆ ಎಕೆ 47 ಯಾಕೆ ಬಳಸಲಾಯಿತು, ನಕ್ಸಲ್ ನಿಗ್ರಹ ದಳದ ಪೋಲೀಸರನ್ನು ಯಾಕೆ ಬಳಸಲಾಯಿತೆಂದು ಪ್ರಶ್ನಿಸಿದ್ದಾರೆ. ಈ ಕೂಡಲೇ ಬೇಡಿಕೆ ಈಡೇರಿಸಲು, ಕ್ರಮಕೈಗೊಳ್ಳಲು ಆಗ್ರಹಿಸಿದ್ದು, ಧರಣಿ ಮುಂತಾದ ಚಳುವಳಿ ಮುಂದುವರೆದಿದೆ.



(ಇನ್ನಷ್ಟು ಪುಟ 13 ರಲ್ಲಿ)

ದೊಡ್ಡ ಬ್ಯಾಂಕುಗಳು, ನೈಸರ್ಗಿಕ ಸಂಪತ್ತು, ಮಾನವ ಸಂಪನ್ಮೂಲ, ಮೇಲಾಗಿ ದೊಡ್ಡ ರಾಜಕಾರಣಿಗಳು ಇದ್ದು ಅಭಿವೃದ್ಧಿಗಾಗಿ ಹಂಬಲಿಸುತ್ತಿರುವ ಉಡುಪಿ ಜಿಲ್ಲೆಯದು ಸಮುದ್ರದೊಂದಿಗೆ ನೆಂಟಸ್ತಿಕೆ, ಉಪ್ಪಿಗೆ ಬರ ಎಂಬಂತಿದೆ.

ಅಭಿವೃದ್ಧಿ ಕಾಣದೆ ಸೊರಗಿರುವ ಉಡುಪಿ

ಅದಮಾರು ಶ್ರೀಪತಿ ಆಚಾರ್ಯ

ದಕ್ಷಿಣಕನ್ನಡ ಜಿಲ್ಲೆಯಿಂದ ವಿಭಜನೆ ಹೊಂದಿ, ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲ್ಲೂಕುಗಳನ್ನೊಳಗೊಂಡಿರುವ ಉಡುಪಿ ಜಿಲ್ಲೆಯ ರಚನೆಯಾಗಿ ಇದೇ ಆಗಸ್ಟ್ 15ಕ್ಕೆ ಒಂಭತ್ತು ವರ್ಷಗಳಾಗುತ್ತವೆ. ಈ ದೀರ್ಘಾವಧಿಯಲ್ಲಿ ಜಿಲ್ಲೆಯ ಜನರ ಆಶೋತ್ತರಗಳನ್ನು ಪೂರೈಸುವ ನಿಟ್ಟಿನಲ್ಲಿ ಯಾವುದೇ ಯೋಜನೆ ಅಥವಾ ಅಭಿವೃದ್ಧಿ ಕಾರ್ಯಗಳು ನಡೆಯದೆ 'ಹೊಸ ಜಿಲ್ಲೆಯ ರಚನೆಯಿಂದಾಗಿ ನಮಗೆ ಬಂದ ಸೌಭಾಗ್ಯವೇನು? ಎಂದು ಜನ ಕೇಳಿಕೊಳ್ಳುವಂತಾಗಿದೆ. ಜಿಲ್ಲೆಯೊಳಗಿನ ಸಣ್ಣಪುಟ್ಟ ಪೇಟೆಗಳಲ್ಲೂ ಬಹುಮಹಡಿ ಫ್ಲ್ಯಾಟ್‌ಗಳು ಮತ್ತು ವಾಣಿಜ್ಯ ಸಂಕೀರ್ಣಗಳು ಮೇಲೇಳುತ್ತಿರುವುದನ್ನು ಬಿಟ್ಟರೆ ಅಭಿವೃದ್ಧಿ ಕಾರ್ಯ ಎನಿಸಿಕೊಳ್ಳುವ ಇತರ ಯಾವುದೇ ಕೆಲಸ ಇಲ್ಲಿ ನಡೆಯುತ್ತಿಲ್ಲ. ವಾಣಿಜ್ಯ ಸಂಕೀರ್ಣಗಳ ಮಾಲೀಕರೂ ವ್ಯಾಪಾರವಿಲ್ಲದೆ ನೊಣ ಹೊಡೆಯುತ್ತಿದ್ದಾರೆ. ಒಟ್ಟಿನಲ್ಲಿ ಉಡುಪಿ ಜಿಲ್ಲೆಯಾದ ಮೇಲೆ 'ರಿಯಲ್ ಎಸ್ಟೇಟ್' ಮತ್ತು ಬಿಲ್ಡರುಗಳ 'ಲಾಬಿ' ಮಾತ್ರ ಸಕ್ರಿಯವಾಗಿರುವಂತಿದೆ. ವಾಣಿಜ್ಯ ಸಂಕೀರ್ಣ ಮತ್ತು ಫ್ಲ್ಯಾಟ್‌ಗಳ ನಿರ್ಮಾಣ ಕಾರ್ಯದಲ್ಲಿ ದುಡಿಯುತ್ತಿರುವ ಸಾವಿರಾರು ಮಂದಿಯಲ್ಲಿ ಹೆಚ್ಚಿನವರು ಉತ್ತರ ಕರ್ನಾಟಕದಿಂದ ವಲಸೆ ಬಂದಿರುವ ಅಸಂಘಟಿತ ಕಾರ್ಮಿಕರು ಹೊರತು ಸ್ಥಳೀಯರಲ್ಲ. ವಿದ್ಯಾವಂತ ಹಾಗೂ ಅರೆವಿದ್ಯಾವಂತ ಸ್ಥಳೀಯ ಯುವಜನರಿಗೆ ಉದ್ಯೋಗ ನೀಡಬಲ್ಲ ಯಾವುದೇ ಕೈಗಾರಿಕೆ ಅಥವಾ ಯೋಜನೆ ಇಲ್ಲಿಗೆ ಬರುತ್ತಿಲ್ಲ.

ವಿಶಿಷ್ಟ ಚರಿತ್ರೆ

ಈ ಜಿಲ್ಲೆಯ ಚರಿತ್ರೆಯೇ ವಿಶಿಷ್ಟವಾದದ್ದು, ಸ್ವಾತಂತ್ರ್ಯಪೂರ್ವದ ದಿನಗಳಿಂದಲೂ ಈ ಪ್ರದೇಶದ ಲಕ್ಷಾಂತರ ಮಂದಿ ಯುವಜನರು ಚೂರುಪಾರು ಉದ್ಯೋಗವನ್ನರಸಿ ಮುಂಬಯಿಗೆ ಅಥವಾ ಕೊಲ್ಲಿ ರಾಷ್ಟ್ರಗಳಿಗೆ ವಲಸೆ ಹೋದವರು. ಹೊಟೇಲ್ ಉದ್ಯಮ, ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರದಲ್ಲಿ ಉದ್ಯೋಗ ಪಡೆದು ಇತರ ರಾಜ್ಯಗಳಿಗೆ ಹೋದವರ ಸಂಖ್ಯೆ ಸಾಕಷ್ಟಿದೆ. ಕರ್ನಾಟಕದ ಮೂಲೆ ಮೂಲೆಯಲ್ಲೂ ಉಡುಪಿ ಹೋಟೆಲುಗಳಿವೆ. ಇತ್ತೀಚೆಗೆ ಮಾಹಿತಿ ತಂತ್ರಜ್ಞಾನ ಬೆಳೆದ ಮೇಲಂತೂ ಉಡುಪಿಯ ಯುವಜನರು ಉದ್ಯೋಗಕ್ಕಾಗಿ ಬೆಂಗಳೂರಿಗೆ ಅಥವಾ ವಿದೇಶಕ್ಕೂ ಹೋಗುವುದು ಸಾಮಾನ್ಯವಾಗಿದೆ. ಉಡುಪಿ ಜಿಲ್ಲೆಯಲ್ಲಿರುವ ಒಟ್ಟು ಜನಗಳಿಗಿಂತಲೂ ಹೆಚ್ಚುಮಂದಿ 'ಉಡುಪಿಯವರು' ವಿದೇಶಗಳಲ್ಲಿ ಅಥವಾ ಬೆಂಗಳೂರಿನಂತರ ನಗರಗಳಲ್ಲಿ ನೆಲೆಸಿದ್ದಾರೆಂದರೆ ಅದು ಅತಿಶಯೋಕ್ತಿಯಲ್ಲ. ಈ ನಿಟ್ಟಿನಲ್ಲಿ ಇದು ನೆರೆಯ ಕೇರಳ ರಾಜ್ಯವನ್ನು ಬಹುತೇಕ ಹೋಲುತ್ತಿದೆ. ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣ ಅಧಿಕವಾಗಿರುವ ಈ ಜಿಲ್ಲೆಯ ವಿದ್ಯಾವಂತ ಯುವಜನರನ್ನು ಇಲ್ಲಿಯೇ ಉಳಿಸಿಕೊಳ್ಳಬಲ್ಲ ಉದ್ಯೋಗಾವಕಾಶಗಳು ಇಲ್ಲಿ ಕ್ಷೀಣವಾಗುತ್ತಿವೆ. ಸರಕಾರಿ ಕಚೇರಿಗಳಲ್ಲಿ ನೇಮಕಾತಿಗಳ ಮೇಲೆ ನಿಷೇಧ ಹೇರಲಾಗಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಖಾಯಂ ನೇಮಕಾತಿಗಳೇ ಇಲ್ಲ. ಬ್ಯಾಂಕ್ ಮತ್ತು ವಿಮಾ ಸಂಸ್ಥೆಗಳಲ್ಲಂತೂ 1993ರ ಬಳಿಕ ನೇಮಕಾತಿ ಪ್ರಕ್ರಿಯೆ ನಡೆದೇ ಇಲ್ಲ. ಇವೆಲ್ಲದರ ಪರಿಣಾಮವಾಗಿ ಸಣ್ಣ ಪಟ್ಟಣಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಉಲ್ಬಣಗೊಳ್ಳುತ್ತಿರುವ ನಿರುದ್ಯೋಗದ ಸಮಸ್ಯೆ ಇಲ್ಲಿ ಕೋಮುವಾದದ ಬೆಳವಣಿಗೆಗೆ ಫಲವತ್ತಾದ ನೆಲ ಒದಗಿಸಿದೆ. ಆಳವಾಗಿ ಬೇರುಬಿಟ್ಟಿರುವ 'ಹಿಂದೂ ಕೋಮುವಾದ' ಮತ್ತು ಇದಕ್ಕೆ ಪ್ರತಿಕ್ರಿಯೆಯಾಗಿ ಇದೀಗ ತಲೆಯೆತ್ತುತ್ತಿರುವ ಮುಸ್ಲಿಂ ಮೂಲಭೂತವಾದಕ್ಕೆ ಹೆಚ್ಚಾಗಿ ಬಲಿಯಾಗುತ್ತಿರುವವರು ಇಲ್ಲಿನ ಅರೆ ವಿದ್ಯಾವಂತ ಯುವಕರೇ! ಈ ಹಿನ್ನೆಲೆಯಲ್ಲಿ ವಿದ್ಯಾವಂತ ಮತ್ತು ಅರೆವಿದ್ಯಾವಂತ ಯುವಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಳ್ಳಬಲ್ಲ ಕೈಗಾರಿಕೆಗಳನ್ನು, ಯೋಜನೆಗಳನ್ನೂ ರೂಪಿಸಬೇಕಾದದ್ದು ಇಲ್ಲಿನ ತುರ್ತು ಅವಶ್ಯಕತೆ.


ವಿದೇಶಕ್ಕೆ ರಫ್ತು ಮಾಡುವ ಮೀನುಗಾರಿಕೆಯ ಮಲ್ಪೆ ಬಂದರು

ದಂಡಪಿಂಡಗಳು

ಆದರೆ ಯುವಜನತೆಯನ್ನು ತಮ್ಮ ರಾಜಕೀಯ ದುರುದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿರುವ ಕೋಮುವಾದಿ ಮತ್ತು ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ ಇದು ಬೇಡವಾಗಿದೆ. ಸ್ವಾತಂತ್ರ್ಯಾ ನಂತರ ಕರಾವಳಿಯ ಈ ಪ್ರದೇಶದಿಂದ ಸಂಸತ್ ಸದಸ್ಯರಾಗಿ ಹೋದವರಲ್ಲಿ ಕತೃತ್ವ ಶಕ್ತಿ ಹೊಂದಿದ್ದ ಶ್ರೀ ಉಲ್ಲಾಳ ಶ್ರೀನಿವಾಸಮಲ್ಯರು ಮತ್ತು ತುಸು ಮಟ್ಟಿಗೆ ಶ್ರೀ ಟಿ.ಎ.ಪೈ ಹಾಗೂ ಶ್ರೀ ಪಿ.ರಂಗನಾಥ ಶೆಣೈ ಅದರನ್ನು ಹೊರತುಪಡಿಸಿದರೆ ಉಳಿದೆಲ್ಲ ನಮ್ಮ ಸಾಂಸದಿಕರು ದಂಡ ಪಿಂಡಗಳೇ ಸರಿ. ಒಂದು ಶತಮಾನದ ಹಿಂದೆ 1908ರಲ್ಲಿ ಬ್ರಿಟಿಷರು ಮಂಗಳೂರಿನವರೆಗೆ ತಂದಿದ್ದ ರೈಲುಮಾರ್ಗವನ್ನು ಮುಂಬಯಿವರೆಗೆ ವಿಸ್ತರಿಸಿ ಕರಾವಳಿಯ ಜನತೆಗೆ ಮಹದುಪಕಾರವನ್ನು ಮಾಡಿದವರು 1989ರಲ್ಲಿ ವಿ.ಪಿ.ಸಿಂಗ್ ಅವರ ರಾಷ್ಟ್ರೀಯರಂಗ ಸರಕಾರದಲ್ಲಿ ಸಚಿವರಾಗಿದ್ದ ಜಾರ್ಜ್ ಫರ್ನಾಂಡೀಸರು. ಜಾರ್ಜ್ ಅವರ ಇಂದಿನ ಸಂದರ್ಭಸಾಧಕ ರಾಜಕಾರಣದ ಬಗ್ಗೆ ನಮಗೆಷ್ಟೇ ಅಸಮಾಧಾನವಿದ್ದರೂ ಕೊಂಕಣ ರೈಲ್ವೇ ಕಾರ್ಪೊರೇಶನ್ನನ್ನು ಸ್ಥಾಪಿಸಿ ಅದನ್ನು ಅಚ್ಚುಕಟ್ಟಾಗಿ ನಡೆಯುವಂತೆ ಮಾಡಿದ ಜಾರ್ಜ್ ಫರ್ನಾಂಡಿಸರನ್ನು ಕರಾವಳಿಯ ಜನ ಅವರನ್ನು ನೆನೆಯುತ್ತಾರೆ.


ಸಾಲದು ಈ ಕಿರಿದಾದ ರಸ್ತೆ

ಅಭಿವೃದ್ಧಿಯಿಲ್ಲದೆ ಸೊರಗಿರುವ ಉಡುಪಿ ಜಿಲ್ಲೆಯ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಯೋಜನೆಗಳನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿದೆ.

ಇದಾಗಬೇಕಿದೆ

1. ತೀವ್ರ ವಿದ್ಯುತ್ ಕೊರತೆ/ ಕಡಿತದಿಂದ ಕಂಗೆಟ್ಟಿರುವ ಉಡುಪಿ ಜಿಲ್ಲೆಯ ಸಣ್ಣ ಕೈಗಾರಿಕೋದ್ಯಮಿಗಳು, ಭತ್ತ, ತೆಂಗು ಅಡಿಕೆ ಬೆಳೆಗಾರರು ಮತ್ತು ಗೃಹ ಬಳಕೆದಾರರ ಬವಣೆಯನ್ನು ನೀಗಿಸಲು ಸರಕಾರವು ಈ ಪ್ರದೇಶದ ವ್ಯಾಪಕ ಅಧ್ಯಯನ ನಡೆಸಿ ಪರಿಸರಕ್ಕೆ ಹಾನಿಯಾಗದಂತೆ ಕಿರು ವಿದ್ಯುತ್ ಯೋಜನೆ, ಜಲವಿದ್ಯುತ್ ಅಥವಾ ಉಷ್ಣ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ಮೂಲಕ ವಿದ್ಯುತ್ ಉತ್ಪಾದನೆಯನ್ನು ಅಧಿಕಗೊಳಿಸಲು ಕ್ರಮ ಕೈಗೊಳ್ಳಬೇಕು.

2. ಉಡುಪಿ ಜಿಲ್ಲೆಯ ಉತ್ತರ ತುದಿಯ ಶಿರೂರಿನಿಂದ ದ.ಕ ಜಿಲ್ಲೆಯ ಸುರತ್ಕಲ್‌ವರೆಗಿನ ರಾಷ್ಟ್ರೀಯ ಹೆದ್ದಾರಿ 17 ಸಂಪೂರ್ಣ ಹದಗೆಟ್ಟಿದ್ದು ಪ್ರತಿವರ್ಷವೂ ಅಲ್ಲಿ ನೂರಾರು ಅಫಘಾತಗಳಲ್ಲಿ ಅನೇಕ ಜನ ಸಾವನ್ನಪ್ಪುತ್ತಿದ್ದರೂ ಹೆದ್ದಾರಿಯ ಈ ಭಾಗವನ್ನು ಚತುಸ್ಪಥಗೊಳಿಸುವ ಬಗ್ಗೆ ಸರ್ವೆ ಕಾರ್ಯ ಮಾತ್ರ ನಡೆದಿದೆ. ಕಾಮಗಾರಿ ಇನ್ನೂ ಪ್ರಾರಂಭವಾಗುತ್ತಿಲ್ಲ. ಇಲ್ಲಿನ ಸಂಸದೆ ಶ್ರೀಮತಿ ಮನೋರಮಾ ಮಧ್ವರಾಜ್‌ಗೆ ಈ ಬಗ್ಗೆ ಯಾವ ಕಾಳಜಿಯೂ ಇದ್ದಂತಿಲ್ಲ. ಶಿರೂರಿನಿಂದ ಸುರತ್ಕಲ್‌ವರೆಗಿನ ರಾಷ್ಟ್ರೀಯ ಹೆದ್ದಾರಿ 17ನ್ನು ದುರಸ್ತಿಪಡಿಸಿ ಚತುಷ್ಪಥಗೊಳಿಸುವ ಕಾರ್ಯವನ್ನು ತಕ್ಷಣವೇ ಕೈಗೊಳ್ಳಬೇಕು.

3. ರಾಷ್ಟ್ರೀಯ ಹೆದ್ದಾರಿ 17ರಲ್ಲಿ ನಾಲ್ಕು ಚಕ್ರಗಳಿರುವ (6 ಟಯರ್ ವಾಹನಗಳಿಗಿಂತ ಹೆಚ್ಚಿಗೆ ಚಿತ್ರಗಳನ್ನು ಹೊಂದಿರುವ ಅಧಿಕ ಭಾರದ ಅದಿರು ಲಾರಿ, ಬುಲೆಟ್ ಟ್ಯಾಂಕರ್ ಮುಂತಾದ ವಾಹನಗಳ ಓಡಾಟವನ್ನು ಹೆದ್ದಾರಿ ಸಂಪೂರ್ಣ ಚತುಷ್ಪಥಗೊಳ್ಳುವವರೆಗೆ ನಿಷೇಧಿಸಬೇಕು.

4. ಉಡುಪಿ, ಮಂಗಳೂರು ಜಿಲ್ಲೆಗಳನ್ನು ಬೆಂಗಳೂರಿನೊಂದಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 48ರಲ್ಲಿನ ಶಿರಾಡಿಘಾಟ್ ಸಂಪೂರ್ಣ ಕೆಟ್ಟುಹೋಗಿದೆ. ಇದನ್ನು ಸರಿಪಡಿಸದಿದ್ದರೆ ಮುಂದೊಂದು ದಿನ ಈ ಎರಡು ಜಿಲ್ಲೆಗಳು ಹಳೆ ಮೈಸೂರು ಪ್ರದೇಶದಿಂದ ಭೌಗೋಳಿಕವಾಗಿ ಸಂಪರ್ಕ ಕಳೆದುಕೊಳ್ಳುವ ಅಪಾಯವಿದೆ. ಕಳೆದ ಎರಡು ವರ್ಷಗಳಿಂದಲೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈ ಕುರಿತು



ನಡೆಸಿರುವ ಜಿದ್ದಾಜಿದ್ದಿಗೆ ಮುಕ್ತಾಯ ಹಾಡಿ ಶಿರಾಡಿ ಘಾಟಿಯನ್ನು ಮುಂಬಯಿ, ಪುಣೆ ರಸ್ತೆಯ ಮಾದರಿಯಲ್ಲಿ ದುರಸ್ತಿಗೊಳಿಸಬೇಕು.

5. ದಿವಂಗತ ಉಲ್ಲಾಳ ಶ್ರೀನಿವಾಸ ಮಲ್ಯರ ಭಗೀರಥ ಪ್ರಯತ್ನ ಮತ್ತು 17 ವರ್ಷಗಳ ಕಠಿಣ ಪರಿಶ್ರಮದಿಂದ ನಿರ್ಮಾಣವಾಗಿದ್ದ ಹಾಸನ, ಮಂಗಳೂರು ರೈಲ್ವೆಯನ್ನು ಹಳಿ ಪರಿವರ್ತನೆಯ ನೆಪದಲ್ಲಿ ಬಂದ್ ಮಾಡಿ ಹೆಚ್ಚು ಕಡಿಮೆ ಒಂದು ದಶಕವೇ ಕಳೆದಿದೆ. ಇದೀಗ ಹಳಿ ಪರಿವರ್ತನೆಯ ಕಾರ್ಯ ಮುಕ್ತಾಯವಾಗಿ ದಿನವೊಂದಕ್ಕೆ ಆರೆಂಟು ಗೂಡ್ಸ್ ಗಾಡಿಗಳು ಈ ಮಾರ್ಗದಲ್ಲಿ ಸಂಚರಿಸುತ್ತಿದ್ದರೂ ಪ್ರಯಾಣಿಕರ ರೈಲು ಸಂಚಾರಕ್ಕೆ ಇನ್ನೂ ಅವಕಾಶ ನೀಡಲಾಗಿಲ್ಲ. ಕರ್ನಾಟಕದ ಪಾಲಿಗೆ ಭಾಗ್ಯದ ಬಾಗಿಲೆಂದು ಭಾವಿಸಲಾಗಿದ್ದ ಈ ಮಾರ್ಗದಲ್ಲಿ ಪ್ರಯಾಣಿಕರ ರೈಲು ಸಂಚಾರವನ್ನು ಕೂಡಲೇ ಪ್ರಾರಂಭಿಸಬೇಕು. ಕರ್ನಾಟಕದ ಹಳೆ ಮೈಸೂರು ಭಾಗದಿಂದ ಪ್ರತಿವರ್ಷ ಲಕ್ಷಾಂತರ ಪ್ರವಾಸಿಗರು/ ಯಾತ್ರಿಕರು ಉಡುಪಿಗೆ ಬರುತ್ತಾರೆ. ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ನಡುವೆ ಆಯಕಟ್ಟಿನ ಸ್ಥಾನದಲ್ಲಿರುವ ಉಡುಪಿಯಲ್ಲೇ ವಾಸ್ತವ್ಯ ಹೂಡಿ ಅಕ್ಕಪಕ್ಕದ ಮುರ್ಡೇಶ್ವರ, ಮರವಂತೆ, ಕೊಲ್ಲೂರು, ಹಟ್ಟಿಯಂಗಡಿ, ಆಗುಂಬೆ, ಶೃಂಗೇರಿ, ಹೊರನಾಡು ಮುಂತಾದ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಸಾಕಷ್ಟಿದೆ. ಇಂತಹ ಹಿನ್ನೆಲೆಯಲ್ಲಿ ಬೆಂಗಳೂರು ಮತ್ತು ಮೈಸೂರುಗಳಿಂದ ಉಡುಪಿಗೆ ಒಂದಾದರೂ ಪ್ರಯಾಣಿಕ ರೈಲಿನ ಓಡಾಟವನ್ನು ಪ್ರಾರಂಭಿಸಲೇಬೇಕು.

6. 27 ವರ್ಷಗಳ ಹಿಂದೆ ಆರಂಭಗೊಂಡಿರುವ ವಾರಾಹಿ ನೀರಾವರಿ ಯೋಜನೆಯನ್ನು ಕೂಡಲೇ ಪೂರ್ಣಗೊಳಿಸದಿದ್ದಲ್ಲಿ ಈಗಾಗಲೇ ರಚಿಸಲಾಗಿರುವ ಕಾಲುವೆಗಳು ಕುಸಿದು ಅಪಾರ ನಷ್ಟವುಂಟಾಗುವ ಸಂಭವವಿದೆ. ಹಾಗಾಗಿ ಈ ಯೋಜನೆಯನ್ನು ತುರ್ತಾಗಿ ಪೂರ್ಣಗೊಳಿಸಬೇಕು.

7. ಜಿಲ್ಲೆಯಲ್ಲಿರುವ ಏಕೈಕ ಸಕ್ಕರೆ ಕಾರ್ಖಾನೆಯಾಗಿರುವ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಬೇಕು. ಅದನ್ನು ಸಹಕಾರಿ ರಂಗದಲ್ಲೇ ಉಳಿಸಿಕೊಳ್ಳಬೇಕಲ್ಲದೇ ಖಾಸಗಿಯವರಿಗೆ ಹಸ್ತಾಂತರಿಸಕೂಡದು.

8. ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ಸಣ್ಣ ಕೈಗಾರಿಕೆ ಹಾಗೂ ಗುಡಿ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು. ಹಂಚು, ಬೀಡಿ ಹಾಗೂ ಇತರ ಕೈಗಾರಿಕೆಗಳನ್ನು ರಕ್ಷಿಸಬೇಕು.

ಮೀನುಗಾರಿಕೆ ಮತ್ತು ಕಡಲ ಉತ್ಪನ್ನಗಳನ್ನು ಅವಲಂಬಿಸಿದ ಮೀನುಗಾರರು ಮತ್ತಿತರ ಬದುಕನ್ನು ರಕ್ಷಿಸಬೇಕು. ಉದ್ದಿಮೆಯ ರಕ್ಷಣೆಗೆ, ಬೆಳವಣಿಗೆಗೆ ಸೂಕ್ತ ಕ್ರಮ ವಹಿಸಬೇಕು.

9. ಉಡುಪಿ ಜಿಲ್ಲಾಧಿಕಾರಿ ಕಛೇರಿಯನ್ನು ಮಣಿಪಾಲದ 'ಎಂಡ್ ಪಾಯಿಂಟ್'ಗೆ ಕೊಂಡೊಯ್ಯುವ ಪ್ರಸ್ತಾಪವನ್ನು ಕೈಬಿಟ್ಟು ಅದನ್ನು ಉಡುಪಿ ನಗರದ ಮಧ್ಯದಲ್ಲೇ ಸೂಕ್ತ ಜಾಗದಲ್ಲಿ ರಚಿಸಬೇಕು. ○

ವಚನ ಕ್ರಾಂತಿಯ ಕೆಂಪು ನೆಲದಲ್ಲಿ ಮಹಿಳಾ ಸಮ್ಮೇಳನದ ಸಂಭ್ರಮ

ಮನಶುದ್ಧವಿಲ್ಲದವಂಗೆ ಧ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು.

ಸರಿಸುಮಾರು ಒಂಬತ್ತುನೂರು ವರ್ಷಗಳ ಹಿಂದೆ ದುಡಿಯುವ ವರ್ಗದ ಆಯ್ದಕ್ಕಿ ಲಕ್ಕಮ್ಮ ಎಂಬ ಮಹಿಳೆ ಹೇಳಿದ ಈ ವಚನವನ್ನು ಮತ್ತೆ ಸಾಕಾರಗೊಳಿಸಲು ಬೀದರ್ ಜಿಲ್ಲೆಯ ಮಹಿಳೆಯರು ಹೊರಟಿದ್ದಾರೆ. ಥೇಟ್ ಗುಲಾಲು ಬುಕೀಟಿನಂಥ ಅಂಗಳದಲ್ಲಿ ಗುಲಬರ್ಗಾದ ಜನವಾದಿ ಸಂಘಟನೆಯ ಗೆಳತಿಯರು ಹೋಗಿ ನಿಂತಾಗ ಅಲ್ಲಿ ದುಡಿಯುವ ವರ್ಗದ ಮಹಿಳೆಯರ ಜಾತ್ರೆಯ ನೆರೆದಿತ್ತು. ಒಂದೊಂದು ಊರಿನ ಸ್ತ್ರೀಶಕ್ತಿ ಸಂಘದ, ಸ್ವಸಹಾಯ ಗುಂಪಿನ, ಜನವಾದಿ ಮಹಿಳೆಯರು ಒಂದೊಂದು ಬಣ್ಣದ ಸೀರೆಯಲ್ಲಿ ಚಳುವಳಿಯೊಂದರ ವೀರವನಿತೆಯರಂತೆ ನಡೆದುಬರುತ್ತಿದ್ದರು. ದುಡಿಯುವ ಒರಟು ತೋಳುಗಳನ್ನು ಸುತ್ತುವರೆದಿದ್ದ ತರಹೆವಾರಿ ಕುಪ್ಪಸಗಳು, ವಿಧವಿಧ ಆಕಾರದ ಕಾಲುಂಗುರ ಬಳೆಗಳು ಹೆಣ್ತನದ ಕೀಳರಿಮೆಯ ಮುಜುಗರವನ್ನು ಕಿತ್ತೆಸೆದು ರಿಂಗುಣಿಸುತ್ತಿದ್ದವು. ಬೀದರ್ ಜಿಲ್ಲೆಯ ಹುಮನಾಬಾದಿನ ನೌಕರರ ಭವನದಲ್ಲಿ ನೆರೆದಿದ್ದ ನೂರಾರು ಮಹಿಳೆಯರು ಸಮ್ಮೇಳನ ನಡೆಸುವ ಉಮೇದಿನಿಂದ ಚರ್ಚೆಗೆ ಇಳಿದಿದ್ದರು.

ಜಿಲ್ಲೆಯ ಐದು ತಾಲ್ಲೂಕಿನಿಂದ ಆಯ್ಕೆಯಾಗಿ ಬಂದ ಪ್ರತಿನಿಧಿ ಮಹಿಳೆಯರನ್ನು ಉದ್ದೇಶಿಸಿ ಜನವಾದಿಯ ರಾಜ್ಯಾಧ್ಯಕ್ಷರಾದ ಕೆ.ನೀಲಾ ಅವರು ಮಾತನಾಡುತ್ತಿರಬೇಕಾದರೆ ಸೂಜಿಬಿದ್ದರೂ ಸಪ್ಪಳ ಕೇಳುವಂತೆ ಶಾಂತತೆ ಮತ್ತು ಶಿಸ್ತು ನೆಲೆಸಿತ್ತು. ಏಕೆಂದರೆ ಅವರೆಲ್ಲರ ಮೈಮನಗಳಲ್ಲಿ ಜನವಾದಿ ಮಹಿಳಾ ಸಂಘಟನೆಯ ಬಗೆಗಿನ ಗೌರವ, ಸ್ವಾಭಿಮಾನಗಳು ಹರಳುಟ್ಟುತ್ತಲೇ ನಡೆದಿದ್ದವು. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯಾದ್ಯಂತ ಜನವಾದಿಯ ಕಾರ್ಯಕರ್ತರು ಉದ್ಯೋಗ ಖಾತ್ರಿ ಕಾಯ್ದೆ ಜಾರಿಗಾಗಿ, ರೇಷನ್ ಕಾರ್ಡ್ ಪಡೆಯುವುದಕ್ಕಾಗಿ ಮಾಡಿದ ಹೋರಾಟಗಳು ಮಹಿಳೆಯರ ಕಣ್ಣುಗಳಲ್ಲಿ ವಿಶ್ವಾಸದ ಕಿರಣಗಳಾಗಿ ಹೊಳೆಯುತ್ತಿದ್ದವು. ಒಂದಷ್ಟು ಕಾಳಜಿ ಮತ್ತು ಸೈದ್ಧಾಂತಿಕ ಬದ್ಧತೆಯೊಂದಿಗೆ ತುಸುವೇ ಕೆಲಸ ಮಾಡಿದರೂ ಸಾಕು. ಸಾಮಾನ್ಯ ಜನತೆ ಅದೆಷ್ಟು ಗೌರವಿಸಬಲ್ಲದು ಎಂಬುದಕ್ಕೆ ಜುಲೈ 15, 2007 ರಂದು ನಡೆಸಿದ ಬೀದರ್ ಜಿಲ್ಲಾ ಸಮ್ಮೇಳನವು ಸಾಕ್ಷಿಯಾಗಿತ್ತು.

ಕೆ.ನೀಲಾ ಅವರು ಮಾತನಾಡುತ್ತ ಜನವಾದಿಯ ಆರನೇ ರಾಜ್ಯ ಸಮ್ಮೇಳನವನ್ನು ಬೀದರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ. ಇದೊಂದು ತುಂಬಾ ದೊಡ್ಡ ಜವಾಬ್ದಾರಿ. ಅಪಾರ ಖರ್ಚಿನ ಬಾಬತ್ತು. ರಾಜ್ಯದ ಮೂಲೆಮೂಲೆಗಳಿಂದ ಬಂದ ಮಹಿಳೆಯರಿಗೆ ಹೊತ್ತಿಗೆ ಸರಿಯಾಗಿ ಊಟ, ತಿಂಡಿ, ವಸತಿ ವ್ಯವಸ್ಥೆಯಾಗಬೇಕಲ್ಲವೇ? ಎಂದು ಅನುಮಾನಿಸಿದ್ದೇ ತಡ. ಓ ಮೇಡಂ ಯಾಕ್ ಅಂಜ್‌ತೀರಿ, ತಲಾಗೊಂದೊಂದು ಚಿಜ್ ತರತೀವಿ. ಈಕಾ ನಾವ್ ಚಿಟಗುಪಾದವ್ರು ಶೇಂಗಾದ ಹೋಳ್ಗಿ ಮಾಡತ್ಯಾವ್ರೀ, ಎಂದರೆ ಹುಣಸಗೇರಾದ ಮಹಿಳೆಯರು ಆಕೋರಿ ನಾವ್‌ಭೀ ಸೆಜ್ಜಿರೊಟ್ಟಿ ಹತ್ತದಟ್ಟು ಕೊಡತೀವ್‌ರಿ. ಕಾಡವಾದ ಮಹಿಳೆಯರು ಠೀಕ ಆದಾರಿ ನಮ್ ಕಡಿಂದು ಶೇಂಗಾದ ಹಿಂಡಿ, ಅಗಸಿ ಹಿಂಡಿ ಬರಕೋರಿ ಎಂದರು. ಮತ್ತೂ ಅವರೇ ಮುಂದೆ ಬಂದು ಮೇಡಂ ಮೂರು ದಿವಸ ನಾವು ಹಾಲು ಮಾರಂಗಿಲ್ಲ. ಅದೇ ಹಾಲು ಸಮ್ಮೇಳನಕ್ಕೆ ತರತ್ಯಾವ್ರಿ ಅಂದ್ರು. ಅವರುಗಳ ನಡುವೆ ಇದೇ ಮೊದಲ ಬಾರಿಗೆ ಮಾಣಿಕನಗರದಿಂದ ಬಂದಿದ್ದ ಶ್ರೀದೇವಿ ತಿವಾರಿ ಎಂಬುವ ಮಹಿಳೆಯು ಸ್ವಯಂ ಸ್ಫೂರ್ತಿಯಿಂದ ಎದ್ದುನಿಂತು ನಾ ಅರ್ಧಾ ಕ್ವಿಂಟಾಲ್ ಅಕ್ಕಿ ಅದ್‌ಭಿ ಭಾರಿದೇ ಕೊಡತ್ಯಾನ್ರಿ. ನನ್ಗ್ ಭಾಳ ಖುಷಿ ಯಾಗ್ಯಾದಾ. ಇಂಥಾ ಸಂಘಕ್ಯಾಗೇ ಹುಡಕಿತಿದ್ನಾ, ನೀವ್ ಮಾಡೋ ಕೆಲಸಾ ಭಾಳ ಛಲೋ ಅವಾರಿ ಎಂದು ಭಾವುಕಳಾಗಿ ನುಡಿಯುತ್ತಿದ್ದಳು. ಹೀಗೆ ಪ್ರತಿಯೊಬ್ಬರು ಸಮಯ ಸ್ಫೂರ್ತಿಯಿಂದ ಮುಂದೆ ಬಂದು ತಮ್ಮ ಶಕ್ತಿಮೀರಿ ಸಮ್ಮೇಳನಕ್ಕೆ ಸಹಾಯ ಮಾಡಲು ತವಕಿಸುತ್ತಿದ್ದರು. ಜನವಾದಿಯ ಮುಖಂಡರಿಗಂತೂ ಸಾಮಾನ್ಯ ದುಡಿಯುವ ಮಹಿಳೆಯರ ಆ ಛಲ, ಬಲ ಕಂಡು ಸಸಿಯ ಮೇಲೆ ಸಾಗರ ಹರಿದುಬಂದಂತೆ ಖುಷಿಯೋ ಖುಷಿಯಾಗಿತ್ತು. ಆರ್ಥಿಕವಾಗಿ ಅಷ್ಟೇನು ಸಬಲರಲ್ಲದ ಅವರ ಉಮೇದು ಇತ್ತಲ್ಲ. ಅದು ಚಿತ್ತಶುದ್ಧ ಮಾಡುವ ಕಾಯಕಜೀವಿಗಳ ಮನೋವೈಶಾಲ್ಯಕ್ಕೆ ಬಡತನವಿಲ್ಲ ಎಂಬುದನ್ನೇ ಮತ್ತೆ ಮತ್ತೆ ಸಾಬೀತು ಮಾಡಿತ್ತು.

ಡಾ. ಮೀನಾಕ್ಷಿ ಬಾಳಿ

ಸಮ್ಮೇಳನವು ಯಶಸ್ವಿಯಾಗಿ ಮುಗಿಯುವ ಹಂತದಲ್ಲಿ ಕೊನೆಯದಾಗಿ ಹೊಸ ಜಿಲ್ಲಾ ಸಮಿತಿಯ ಆಯ್ಕೆಯಂತೂ ಖರೇ ಪ್ರಜಾಪ್ರಭುತ್ವ ಕನಸುಗಳಿಗೆ ಬಣ್ಣ ತುಂಬಿಸುವ ರೀತಿಯಲ್ಲಿ ಕೇಡರ್‌ಗಳು ಎದ್ದು ಬರತೊಡಗಿದರು. ನಾಲ್ಕೈದು ವರ್ಷಗಳ ಹಿಂದೆಯೇ ಮೊಘಲಾಯಿ ಏರಿಯಾದ ಇಲ್ಲಿನ ಮಹಿಳೆಯರು ಹೊರಬಂದು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಕ್ಕೆ ಅಂಜುತ್ತಿದ್ದರು. ಮಹಿಳಾ ಹಕ್ಕು, ಸಮಾನತೆ, ದುಡಿಯುವ ಮಹಿಳೆಯರ ನ್ಯಾಯಯುತ ಬೇಡಿಕೆಗಳನ್ನು ಕುರಿತು ಮಾತಾಡುವುದನ್ನು ತಪ್ಪೆಂದೇ ಭಾವಿಸುತ್ತಿದ್ದರು. ನವಾಬ್‌ಶಾಹಿ ಹಿನ್ನೆಲೆಯ ಪಾಳೇಗಾರಿ ನಂಬಿಕೆಗಳೇ ಬಲವಾಗಿ ಬೇರೂರಿರುವ ಇಲ್ಲಿ ಹೊರಬಂದು ದುಡಿಯುವ ಮಹಿಳೆಯರನ್ನು ಕೀಳೆಂದು ಪರಿಗಣಿಸಲಾಗುತ್ತಿತ್ತು. ಮರ್ಯಾದೆಯ ಮಹಲುಗಳಲ್ಲಿ ಬಂಧಿಗಳಾಗಿದ್ದ ಮಹಿಳೆಯರು ಅಂಥ ನಿಕೃಷ್ಟ ಸ್ಥಿತಿಯನ್ನೇ ಸಮರ್ಥಿಸಿಕೊಳ್ಳುವ ಹವ್ಯಾಸಕ್ಕೆ ಇಳಿಯುತ್ತಿದ್ದರು. ಧಾರ್ಮಿಕ ಸಭೆ, ಸಮಾರಂಭಗಳು ಅಥವಾ ಮದುವೆ, ಕುಬಸಾ, ಮುತ್ತೈದಿತನದ ಇತ್ಯಾದಿ ಸಾಮಾಜಿಕ ಕಾರ್ಯಕ್ರಮಗಳಿಗಾಗಿ ಮಾತ್ರ ಹೊರಬರುತ್ತಿದ್ದ ಮಹಿಳೆಯರು ಕೌಟುಂಬಿಕ ಬಂಧನಗಳೇ ಭದ್ರವಾದ ರಕ್ಷಣೆಗಳೆಂದು ಭಾವಿಸುತ್ತಿದ್ದರು. ಏಕೆಂದರೆ ಮಹಿಳಾಪರ ಪರ್ಯಾಯ ಬದುಕೊಂದನ್ನು ಕಟ್ಟಿಕೊಳ್ಳಲು ಸಾಧ್ಯವಾಗಿರಲೇ ಇಲ್ಲ. ಆದರೆ ಕಳೆದ ಹತ್ತಾರು ವರ್ಷಗಳಿಂದಲೂ ಜನವಾದಿ ಇಲ್ಲಿ ಹತ್ತಾರು ಸಂಕಷ್ಟಗಳ ಮಧ್ಯೆಯೂ ಕೆಲಸ ಮಾಡಿಕೊಂಡು ಬರುತ್ತಿರುವ ಕಾರಣವಾಗಿ ಈ ನೆಲದಲ್ಲಿ ಇತ್ತೀಚಿಗೆ ನಿಧಾನವಾಗಿ ಯಾದರೂ ಬದಲಾವಣೆ ಕಾಣಿಸಿಕೊಳ್ಳುತ್ತಿವೆ. ಬೀದರ್ ಭಾಗದುದ್ದಕ್ಕೂ ಸ್ತ್ರೀಶಕ್ತಿ ಸಂಘಗಳ ಮೂಲಕ ಸಂಘಟಿತರಾದ ಮಹಿಳೆಯರ ಬದುಕಿನಲ್ಲಿ ಹೊಸ ಚಲನೆ ಸುರುವಾಗಿದೆ. ಇಂದು ಹೊರಬಂದು ಸಂಘಟಿತರಾಗುವುದು ಅನಿವಾರ್ಯ ಎಂಬುದನ್ನು ಮಹಿಳೆಯರು ಮನಗಂಡಿದ್ದಾರೆ. ಅಷ್ಟೇ ಅಲ್ಲ ಸಂಘಟಿತ ರಾಗುವ ಮಹಿಳೆಯರ ಬಗೆಗೆ ಗೌರವ ಮತ್ತು ಮೆಚ್ಚುಗೆಯು ವ್ಯಕ್ತವಾಗುತ್ತಿವೆ. ಇದಕ್ಕೆ ಸಾಕ್ಷಿಯೆಂಬಂತೆ ಜನವಾದಿಯ ಸಮಿತಿಗಳಲ್ಲಿ ಆಯ್ಕೆಯಾಗಲು ಎಲ್ಲಾ ವರ್ಗದ ಮಹಿಳೆಯರು ನಾಮುಂದು, ತಾಮುಂದು ಎಂದು ಪೈಪೋಟಿ ನಡೆಸುತ್ತಿದ್ದರು. ಪ್ರತಿಯೊಬ್ಬರಿಗೂ ಜನವಾದಿಯ ಬಾವುಟ ಹಿಡಿಯುವ ಬಯಕೆಯು ಅವರ ಕಣ್ಣುಗಳಲ್ಲಿ ಮಿಂಚಾಗಿ ಹೊಳೆಯುತ್ತಿತ್ತು. ಹೀಗಾಗಿ ಒಟ್ಟು 20 ಜನ ಮಹಿಳೆಯರ ಬೃಹತ್ ಸಮಿತಿಯನ್ನು ರಚಿಸಲಾಯಿತು. ಪ್ರತಿಯೊಬ್ಬರೂ ಕನಿಷ್ಠವೆಂದರೂ ಸಾವಿರದಷ್ಟು ಸದಸ್ಯರನ್ನು ಮಾಡುವುದಾಗಿ ಕಂಕಣಬದ್ಧರಾದರು. ಇಲ್ಲಿ ಶಿಕ್ಷಕಿಯರು, ಲೆಕ್ಚರರ್, ಡಾಕ್ಟರ್, ಪ್ರಿನ್ಸಿಪಾಲ್, ಮುನ್ಸಿಪಾಲಿಟಿ ಆಫೀಸರ್, ಇಂಜಿನಿಯರ್, ಕೃಷಿ ಕೂಲಿಕಾರ್ತಿಯರು, ಅಪ್ಪಟ ಗೃಹಿಣಿಯರು, ಕಿರುಕುಳ ವ್ಯಾಪಾರ ಮಾಡುವವರು ಮುಂತಾಗಿ ಎಲ್ಲಾ ವರ್ಗದ ಮಹಿಳೆಯರು ಸೇರಿಕೊಂಡಿದ್ದರು. ಜಾತಿ, ಅಂತಸ್ತುಗಳಿಗೆ ಬಲವಾಗಿ ಕಚ್ಚಿಕೊಂಡಿರುವ ಇಲ್ಲಿನ ಮಹಿಳೆಯರ ನಡುವಿನ ಅಂತರಗಳನ್ನು ಅಳಿಸಿ ಎಲ್ಲರನ್ನೂ ಒಂದೇ ವೇದಿಕೆ ತಂದ ಸಾಧನೆಯು ಜನವಾದಿಯ ಹೆಗಲಿಗೇರಿತ್ತು. ತಳವರ್ಗದಿಂದ ಬಂದ ಚಿಟಗುಪ್ಪಾದ ಅಂಬುಬಾಯಿ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದಾಗ ಎಲ್ಲರ ಕಣ್ಣುಗಳಲ್ಲಿ ಆನಂದಭಾಷ್ಪಗಳು ಅರಿವಿಲ್ಲದಂತೆ ಜಾರಿದವು. ಅಲ್ಪಸ್ವಲ್ಪ ಬರಹ ಬಲ್ಲ ಆದರೆ ಅದ್ಭುತ ಸಂಘಟನಾ ಚತುರೆಯಾದ ಭಾರತಿ ಕಾಡವಾದ ಎಂಬ ಮಹಿಳೆಯನ್ನು ಕಾರ್ಯದರ್ಶಿಯಾಗಿ ಆರಿಸಿ ಉನ್ನತ ಪದವಿ ಪಡೆದವರೆಲ್ಲ ಸಂಭ್ರಮಿಸಿದರು. ಅಂದಿನ ಒಟ್ಟು ವೇದಿಕೆಯು ಸರ್ವಸಮಾನತೆಯ ಸಾಕಾರ ರೂಪವಾಗಿ ನಿಂತು 'ಜನಚಳುವಳಿಗೆ ಬೇಕಾದ ಸೈದ್ಧಾಂತಿಕ ಸ್ಪಷ್ಟತೆಯಿಂದ ಶೋಭಿಸುತ್ತಿತ್ತು.

ಆಗಸ್ಟ್ 20ರಿಂದ 22ರವರೆಗೆ ಮೂರು ದಿನಗಳವರೆಗೆ ನಡೆಯಲಿರುವ ಆರನೇ ರಾಜ್ಯ ಸಮ್ಮೇಳನದ ಕೆಲಸ ಕಾರ್ಯಗಳನ್ನು ಪ್ರತಿಯೊಬ್ಬ ಸದಸ್ಯರು ಹಂಚಿಕೊಂಡು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಆ ಕ್ಷಣದಿಂದಲೇ ಕಾರ್ಯಪ್ರವೃತ್ತರಾದರು. ○

ನಂದಗುಡಿ....

ಪುಟ 5 ರಿಂದ

ನೂರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ಆಸ್ತಿಯನ್ನು ಬಿಟ್ಟುಕೊಡಲು ನಾವು ತಯಾರಿಲ್ಲ ಎಂಬ ಬದ್ಧತೆ ತುಂಬಿದ ಮಾತುಗಳನ್ನು ರೈತರು ನಿಯೋಗದ ಮುಂದೆ ವ್ಯಕ್ತಪಡಿಸಿದರು.

ಇವತ್ತು ನಮ್ಮ ಜಮೀನು ಮಾರಾಟ ಮಾಡಿದರೆ ಬರುವ ಹಣ ಖರ್ಚಾಗಿ ಹೋಗುತ್ತದೆ. ನಮ್ಮ ಮಕ್ಕಳಿಗೆ ಏನು ನೀಡುವುದು ಎಂದು ಪ್ರಶ್ನಿಸುತ್ತಾರೆ. ರೈತರ ರಕ್ಷಣೆಗಾಗಿ ಕಾಯುವ ನಿಜವಾದ ನಾಯಕತ್ವ ನಮಗೆ ಬೇಕಾಗಿದೆ ಎಂಬ ಆಶಯವನ್ನು ಜನತೆ ವ್ಯಕ್ತಪಡಿಸಿದರು. ನಮ್ಮ ಹೆಸರು ಹೇಳಿ ಅಧಿಕಾರಕ್ಕೆ ಬಂದಿರುವ ಸರ್ಕಾರಗಳು ಇಂದು ನಮ್ಮನ್ನೇ ದಿವಾಳಿ ಎಬ್ಬಿಸಲು ಮುಂದಾಗಿವೆ. ಇವರನ್ನು ನಾವು ಸುಮ್ಮನೆ ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದರ ವಿರುದ್ಧ ಎಂತಹದೇ ಹೋರಾಟಕ್ಕೆ ಸಿದ್ಧವಾಗಿರುವುದಾಗಿ ಹೇಳಿದರು.

ಪ್ರತಿಹಳ್ಳಿಯಲ್ಲಿಯೂ ನಿಯೋಗ ರೈತರು ಮತ್ತು ಮಹಿಳೆಯರೊಂದಿಗೆ ಮಾತುಕತೆಗಳನ್ನು ನಡೆಸಿತು. ಅವರ ನೋವಿನ ಪದರಗಳ ಒಳಗಿನಿಂದ ಬರುತ್ತಿದ್ದ ಮಾತುಗಳನ್ನು ಆಲಿಸಿ ಸಾಂತ್ವನ ಹೇಳಿತು. ನಾವೆಂದೂ ನಿಮ್ಮೊಂದಿಗಿರುವುದಾಗಿ ಭರವಸೆ ನೀಡಿತು.

ಇಡೀ ಪ್ರದೇಶದಾದ್ಯಂತ ಭಯ, ನೋವು, ಆಕ್ರೋಶ ತುಂಬಿದೆ. ಅಲ್ಲಿನ ಪ್ರತಿ ಕಲ್ಲೂ ಮರ, ಗಿಡಗಳು ಇಂದು ಎಸ್‌ಇಜಡ್ ಕುರಿತು ಮಾತನಾಡುತ್ತಿವೆ. ಎಸ್‌ಇಜಡ್ ಕುರಿತು ಚರ್ಚೆಯಿಲ್ಲದೆ ದಿನ ಹುಟ್ಟುವುದಿಲ್ಲ ಮುಳುಗುವುದಿಲ್ಲ ಎನ್ನುವಂತಿದೆ ಅಲ್ಲಿನ ಪರಿಸ್ಥಿತಿ.

ಅಂದು ಸಂಜೆ ಹಿಂಡಿಗನಾಳದ ಬಸ್ ನಿಲ್ದಾಣದಲ್ಲಿ ಅಲ್ಲಿ ನೆರೆದಿದ್ದವರ ಸಭೆಯನ್ನು ಏರ್ಪಡಿಸಲಾಯಿತು. ಪ್ರಾಂತ ರೈತಸಂಘದ ಮುಖಂಡರಾದ ವೆಂಕಟಾಚಲಯ್ಯ ಮಾತನಾಡಲು ಆರಂಭಿಸುತ್ತಿದ್ದಂತೆ ಸುತ್ತ ಮುತ್ತಲಿದ್ದ ಐವತ್ತು ಅರವತ್ತು ಮಂದಿ ಅಲ್ಲಿ ನೆರೆದರು. ನಂತರ ಪ್ರಕಾಶ್ ಮಾತನಾಡಲು ಆರಂಭಿಸುತ್ತಿದ್ದಂತೆ ಅಲ್ಲಿ ನೆರೆದಿದ್ದವರು ತದೇಕ ಚಿತ್ತದಿಂದ ಆಲಿಸಿದರು. ನಂದಗುಡಿಯಲ್ಲಿ ಎಸ್‌ಇಜಡ್ ಸ್ಥಾಪಿಸುತ್ತಿರುವ ಉದ್ದೇಶದ ಹಿಂದಿನ ಪಿತೂರಿಯನ್ನು ವಿವರಿಸಿದರು. ಅಲ್ಲಿ ನೆರೆದಿದ್ದ ಹಿರಿಯ ಕಿರಿಯರು ಸೇರಿದಂತೆ ಹಲವಾರು ಮಂದಿ ವಿವಿಧ ರೀತಿಯ ಪ್ರಶ್ನೆಗಳನ್ನು ಕೇಳಿದರು. ಆಕ್ರೋಶ ವ್ಯಕ್ತಪಡಿಸಿದರು. ರಾಜಕೀಯ ಮುಖಂಡರ ಬಗ್ಗೆ ಈಗಾಗಲೇ ಬೇಸರಗೊಂಡಿರುವವರು ಸಹಜವಾಗಿಯೇ ಸಿನಿಕತನ, ಬೇಸರ, ಕೋಪ ವ್ಯಕ್ತಪಡಿಸಿದ್ರು.

ಅವರಲ್ಲಿರುವ ಎಲ್ಲ ಅಪನಂಬಿಕೆ, ಪ್ರಶ್ನೆಗಳಿಗೆ, ಸಂಶಯಗಳಿಗೆ ಪ್ರಕಾಶ್ ಸಾವಧಾನವಾಗಿ ಉತ್ತರಿಸಿದರು. ಹೊಸಕೋಟೆ ತಾಲೂಕು ಮುಖಂಡರಾದ ಕೆಂಚೇಗೌಡ, ಮನೋಹರ್, ಕಾರ್ಮಿಕ ಮುಖಂಡರಾದ ಕೆ.ಎನ್.ಉಮೇಶ್ ಮತ್ತಿತರರು ಅಲ್ಲಿ ನೆರೆದಿದ್ದವರೊಂದಿಗೆ ಸಂಭಾಷಣೆ, ಚರ್ಚೆಗಳಲ್ಲಿ ತೊಡಗಿ ಅವರಲ್ಲಿದ್ದ ಎಲ್ಲ ಅನುಮಾನಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸಿದರು. ○

ಅಂಕಿ-ಸಂಖ್ಯೆ

ಬೆಳೆದಿದೆ ನೋಡಾ ಬ್ಯಾಂಕಿಂಗ್ ಕ್ಷೇತ್ರ- ಆದರೆ ಬಾಗಿದೆ ಎತ್ತ?

ಕಳೆದ ಐದು ವರ್ಷಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರ ಸಾಧಿಸಿದ ಬೆಳವಣಿಗೆ

	ಶಾಖೆಗಳ ಸಂಖ್ಯೆ		ಠೇವಣಿ ರೂ.ಕೋಟಿಗಳಲ್ಲಿ		ಸಾಲ ನೀಡಿರುವುದು ರೂ. ಕೋಟಿಗಳಲ್ಲಿ		ಠೇವಣಿ ಮತ್ತು ಸಾಲದ ಪ್ರಮಾಣ, ಸಿಡಿಆರ್ ಶೇ.	
	ಡಿಸೆಂಬರ್ 2001	ಡಿಸೆಂಬರ್ 2006	ಡಿಸೆಂಬರ್ 2001	ಡಿಸೆಂಬರ್ 2006	ಡಿಸೆಂಬರ್ 2001	ಡಿಸೆಂಬರ್ 2006	ಡಿಸೆಂಬರ್ 2001	ಡಿಸೆಂಬರ್ 2006
ಅಖಿಲ ಭಾರತ	66,261	70,018	1,021,129	2,367,968	584,149	1,779,208	57	75
ಅತಿ ದೊಡ್ಡ ನಗರಗಳು	5888	6737	356701	1072216	309730	1009905	86	94
ಇತರೆ ದೊಡ್ಡ ನಗರಗಳು	8627	11438	433347	1313471	355413	1176296	82	89
ಪಟ್ಟಣ ಕೇಂದ್ರಗಳು	14362	15646	201241	331280	67012	173246	33	52
ಗ್ರಾಮೀಣ ಪ್ರದೇಶ	32496	30586	149522	245231	61139	145305	41	59

ಇದರಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ,

1. ದೇಶದ ಅತ್ಯಂತ ದೊಡ್ಡ 6 ನಗರಗಳಾದ ಮುಂಬೈ, ಡೆಲ್ಲಿ, ಚೆನ್ನೈ,ಕೊಲ್ಕತಾ, ಹೈದರಾಬಾದ್ ಮತ್ತು ಬೆಂಗಳೂರು ಇಡೀ ಬ್ಯಾಂಕಿಂಗ್ ವಲಯದ ಶೇ 45 ರಷ್ಟು ಠೇವಣಿ ಹೊಂದಿದ್ದು, ಶೇ 56ರಷ್ಟು ಸಾಲವನ್ನು ನೀಡಲಾಗಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಠೇವಣಿ ಶೇ 14.6ರಿಂದ ಶೇ 10.5ಕ್ಕೆ ಕುಸಿದಿದ್ದರೆ, ಸಾಲದ ಪ್ರಮಾಣ ಶೇ 10.4ರಿಂದ 8.30ಕ್ಕೆ ಇಳಿದಿದೆ.
2 6 ದೊಡ್ಡ ನಗರಗಳು ಸೇರಿದಂತೆ ನಗರ ಪ್ರದೇಶಗಳಲ್ಲಿ 2811 ಬ್ಯಾಂಕ್ ಶಾಖೆಗಳು ಜಾಸ್ತಿಯಾಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ 1910 ಶಾಖೆ ಕಡಿಮೆಯಾಗಿದೆ. ಬ್ಯಾಂಕುಗಳೇನೋ ಬೆಳೆದಿದೆ - ಆದರೆ ಸವಲತ್ತುಗಳು ಉಳ್ಳವರಿಗೆ ಮಾತ್ರ.

ಜನಶಕ್ತಿ ಕನ್ನಡ ವಾರಪತ್ರಿಕೆ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಕ್ಕೀಗ 30ರ ಸಂಭ್ರಮ! 1977ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ ಎಡರಂಗವನ್ನು ಆಯ್ಕೆ ಮಾಡಿದ ಪಶ್ಚಿಮ ಬಂಗಾಳದ ಜನ ಮತ್ತೆ ಹಿಂತಿರುಗಿ ನೋಡಲಿಲ್ಲ. ಚುನಾವಣೆಯಿಂದ ಚುನಾವಣೆಗೆ ಹೆಚ್ಚೆಚ್ಚು ಬಹುಮತವನ್ನು ನೀಡುತ್ತಾ 30 ವರ್ಷಗಳ ನಿರಂತರ ಆಡಳಿತದ ವಿಶ್ವದಾಖಲೆಯೊಂದನ್ನು ಅವರು ಸೃಷ್ಟಿ ಮಾಡಿದ್ದಾರೆ. ದೇಶದ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಶಕ್ತಿಗಳಿಗೆ ಇದೊಂದು ಸ್ಫೂರ್ತಿಯ ಸೆಲೆಯಾಗಿದೆ. ಬಲಪಂಥೀಯ ಪ್ರತಿಗಾಮಿ ಶಕ್ತಿಗಳಿಗೆ ಇದು ನುಂಗಲಾರದ ತುತ್ತಾಗಿದೆ. ವಿಶ್ವದ ಗಮನವನ್ನೇ ಸೆಳೆದಿರುವ ಈ ಪುಟ್ಟ ರಾಜ್ಯದ ಈ ಸಾಧನೆಯ ಗುಟ್ಟೇನು?

ವಿಶ್ವದ ವಿಸ್ಮಯ ಪಶ್ಚಿಮ ಬಂಗಾಳ

ನಿತ್ಯಾನಂದಸ್ವಾಮಿ


ಪಶ್ಚಿಮ ಬಂಗಾಳದ ಎಡರಂಗ ಒಂದು ಪವಾಡವಲ್ಲ. ಅದು ದಿಢೀರನೇ ಉದ್ಭವವಾದುದಲ್ಲ. ಅದು ಒಂದು ಚಾರಿತ್ರಿಕ ಅವಶ್ಯಕತೆಯ ಕೂಸು. ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ದಶಕಗಳ ಕಾಲ ನಡೆಸಲಾದ ಹೋರಾಟಗಳ ಅಗ್ನಿಕುಂಡದಿಂದ ಹೊರ ಹೊಮ್ಮಿದ್ದ ಶಕ್ತಿಯಾಗಿದೆ.

ಭಾರತದ ಜನತೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಅವರ ವಸಾಹತುಶಾಹಿ ಸುಲಿಗೆಯ ವಿರುದ್ಧ ನಡೆಸಿದ ಮಹಾನ್ ರಾಷ್ಟ್ರೀಯ ವಿಮೋಚನಾ ಹೋರಾಟದ ಭಾಗವಾಗಿ ಬೆಳೆದು ಬಂದ ಭಾರತದ ಕಮ್ಯುನಿಸ್ಟ್ ಆಂದೋಲನವು ಸ್ವಾತಂತ್ರ್ಯಾನಂತರವೂ ಭಾರತದ ದುಡಿಯುವ ಜನತೆಯ ನೈಜ ವಿಮೋಚನೆಗಾಗಿ ತನ್ನ ಹೋರಾಟವನ್ನು ಮುಂದುವರೆಸಿತು. ಪಶ್ಚಿಮ ಬಂಗಾಳದಲ್ಲಿ ವಿಶೇಷವಾಗಿ, ಕಮ್ಯುನಿಸ್ಟರ ನೇತೃತ್ವದಲ್ಲಿ ಅನೇಕ ಜನಾಂದೋಲನಗಳು ಬೆಳೆದು ಬಂದವು. ಬ್ರಿಟಿಷ್ ಒಡೆತನದ ರಸ್ತೆ ರೈಲು ಬಂಡಿ ಕಂಪನಿಯ ಸಾರಿಗೆ ದರ ಏರಿಕೆಯ ವಿರುದ್ಧ 1952 ರ ಚಳುವಳಿ, 1954ರ ಶಿಕ್ಷಕರ ಚಾರಿತ್ರಿಕ ಚಳುವಳಿ, 1955- 56ರ ಗೋವಾ ವಿಮೋಚನಾ ಚಳುವಳಿ, 1957- 58 ರ ವಿದ್ಯಾರ್ಥಿಗಳ ಚಳುವಳಿ, 1959ರಲ್ಲಿ ಆಹಾರದ ತೀವ್ರ ಕೊರತೆಯ ವಿರುದ್ಧ ಬಂಗಾಳದ 16 ಜಿಲ್ಲೆಗಳಲ್ಲಿ ನಡೆದ ಚಳುವಳಿ ಮೊದಲಾದವುಗಳು ಮುಖ್ಯವಾಗಿವೆ. 1962 ರ ಭಾರತ ಚೀನಾ ಗಡಿ ಘರ್ಷಣೆಯ ಸಂದರ್ಭದಲ್ಲಿ ಗಡಿ ಸಮಸ್ಯೆಯನ್ನು ಪರಸ್ಪರ ಮಾತುಕತೆಯಿಂದಲೇ ಬಗೆಹರಿಸಿ ಕೊಳ್ಳಬೇಕೆಂದು ಒತ್ತಾಯಿಸಿದ ಕಮ್ಯುನಿಸ್ಟ್ ನಾಯಕರನ್ನು ಭಾರತ ಸರ್ಕಾರ ಬಂಧಿಸಿ ಜೈಲಿಗೆ ತಳ್ಳಿತು. ಬಂಧಿತ ರಾಜಕೀಯ ಧುರೀಣರ ಬಿಡುಗಡೆಗೆ ಒತ್ತಾಯಿಸಿ ರಾಜ್ಯಾದ್ಯಂತ ಬಲಿಷ್ಠವಾದ ಚಳುವಳಿ ಬೆಳೆದು ಬಂತು. 1964ರಲ್ಲಿ ವಿದ್ಯಾರ್ಥಿ ಚಳುವಳಿಯ ಇನ್ನೊಂದು ಅಲೆ ರಾಜ್ಯವನ್ನು ಆವರಿಸಿತು. ಅದೇ ವರ್ಷ, 'ಭಾರತದ ಪ್ರಭುತ್ವದ ಸ್ವರೂಪ ಮತ್ತು ಅನುಸರಿಸಬೇಕಾದ ಹೋರಾಟದ ದಾರಿ' ಯ ಪ್ರಶ್ನೆಯ ಮೇಲೆ ಭಾರತದ ಕಮ್ಯುನಿಸ್ಟ್ ಚಳುವಳಿಯ ವಿಭಜನೆಯಾಯಿತು.

ಸವಾಲು ಸ್ವೀಕರಿಸಿದ ಸಿಪಿಐ(ಎಂ)

1964 ರಲ್ಲಿ ಸ್ಥಾಪನೆಯಾದ ಸಿಪಿಐ(ಎಂ) ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಜನತೆಯ ಹೋರಾಟಕ್ಕೆ ಹೆಗಲುಕೊಟ್ಟಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ದಾಳಿಗಳನ್ನು ಅದು ಏಕಕಾಲಕ್ಕೆ ಎದುರಿಸಬೇಕಾಯಿತು. 1965 ರ ಭಾರತ-ಪಾಕ್ ಯುದ್ಧದ ಸಂದರ್ಭದಲ್ಲಿ 'ಯುದ್ಧದಿಂದ ಯಾವುದೇ ಸಮಸ್ಯೆ ಬಗೆಹರಿಯಲಾರದು' ಎಂದು ಬಂಗಾಳದ ಜನತೆಗೆ ಮನವರಿಕೆ ಮಾಡಲು ಪಕ್ಷ ಶ್ರಮಿಸಿತು. ಬೆಲೆ ಏರಿಕೆ ವಿರುದ್ಧ, ಕೈಗಾರಿಕಾ ಸ್ಥಗಿತತೆಯ ವಿರುದ್ಧ, ಉದ್ಯೋಗದ ಅವಕಾಶಗಳ ಕುಸಿತದ ವಿರುದ್ಧ, ಆಹಾರದ ಕೊರತೆಯ ವಿರುದ್ಧ ಈ ಅವಧಿಯಲ್ಲಿ ಕುಸಿತದ ವಿರುದ್ಧ, ಆಹಾರದ ಕೊರತೆಯ ವಿರುದ್ಧ ಈ ಅವಧಿಯಲ್ಲಿ ಸಿಪಿಐ(ಎಂ) ವ್ಯಾಪಕ ಸ್ವರೂಪದ ಚಳುವಳಿಗಳನ್ನು ಸಂಘಟಿಸಿತು. 1966ರಲ್ಲಿ ಆಹಾರ, ಸೀಮೆಎಣ್ಣೆ ಮತ್ತಿತರ ಅಗತ್ಯ ವಸ್ತುಗಳ ಕೊರತೆಯ ವಿರುದ್ ನಡೆಸಲಾದ ಚಳುವಳಿಯಲ್ಲಿ ಜನತೆಯ ಆಕ್ರೋಶ ಹಿಂದೆಂದೂ ಕಂಡರಿಯದ ಪ್ರಮಾಣದಲ್ಲಿ ವ್ಯಕ್ತವಾಯಿತು. 72 ಗಂಟೆಗಳ ಬಂಗಾಳ ಬಂದ್ ಸಂಪೂರ್ಣ ಯಶಸ್ವಿಯಾಗಿತ್ತು. ಈ ಹೋರಾಟದಲ್ಲಿ 80 ಜನ ಪಕ್ಷದ ಕಾರ್ಯಕರ್ತರು ಪೋಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಹೋರಾಟದ ತೀವ್ರತೆ ಕಾಂಗ್ರೆಸ್ ಪಕ್ಷದಲ್ಲಿ ಒಡಕನ್ನುಂಟು ಮಾಡುವಲ್ಲಿ ಪರ್ಯವಸಾನ ಗೊಂಡಿತು. ಕಾಂಗ್ರೆಸ್‌ನಿಂದ ಹೊರ ಬಂದ ಅಜಯ್ ಮುಖರ್ಜಿ 'ಬಾಂಗ್ಲಾ ಕಾಂಗ್ರೆಸ್' ಪಕ್ಷವನ್ನು ಸ್ಥಾಪನೆ ಮಾಡಿದರು.

1967ರ 4ನೇ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಪಶ್ಚಿಮ ಬಂಗಾಳವೂ ಸೇರಿದಂತೆ 9 ರಾಜ್ಯಗಳಲ್ಲಿ ಅಧಿಕಾರವನ್ನು ಕಳೆದುಕೊಂಡಿತು. ಪರಿಣಾಮವಾಗಿ ಪಶ್ಚಿಮ ಬಂಗಾಳದಲ್ಲಿ ಮೊಟ್ಟ ಮೊದಲ ಕಾಂಗ್ರೇಸೇತರ ಸಂಯುಕ್ತ ರಂಗದ ಸರ್ಕಾರ ಅಸ್ತಿತ್ವಕ್ಕೆ ಬರುವಂತಾಯಿತು. ಬಾಂಗ್ಲಾ ಕಾಂಗ್ರೆಸ್ಸಿನ ಅಜಯ್ ಮುಖರ್ಜಿ ಮುಖ್ಯಮಂತ್ರಿ ಯಾದರೆ, ಸಿಪಿಐ(ಎಂ) ನಾಯಕರಾದ ಜ್ಯೋತಿ ಬಸು ಉಪ ಮುಖ್ಯಮಂತ್ರಿಯಾದರು. ಆದರೆ ಈ ಮಂತ್ರಿ ಮಂಡಲ ಕೇವಲ 9 ತಿಂಗಳ ಕಾಲ ಬಾಳಿತು. 1969ರಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಮತ್ತೆ ಅದೇ ಸಂಯುಕ್ತ ರಂಗದ ಸರ್ಕಾರ ಅಧಿಕಾರಕ್ಕೆ ಬಂತು. ಮುಖಭಂಗಕ್ಕೆ ಒಳಗಾದ



ಕಾಂಗ್ರೆಸ್, ಪಿತೂರಿ ಮಾಡಿ ಚುನಾಯಿತ ಸರ್ಕಾರವನ್ನು ಕಿತ್ತುಹಾಕಿ ಪಶ್ಚಿಮ ಬಂಗಾಳವನ್ನು ರಾಷ್ಟ್ರಪತಿ ಆಳ್ವಿಕೆಗೆ ಒಳಪಡಿಸಲಾಯಿತು.

ಅನಂತರ (1972) ನಡೆಸಲಾದ ಚುನಾವಣೆಯಲ್ಲಿ, ವ್ಯಾಪಕವಾದ ಚುನಾವಣಾ ಅಕ್ರಮಗಳನ್ನು ನಡೆಸಿ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಈ ಅವಕಾಶವನ್ನು ಬಳಸಿಕೊಂಡು ಕಾಂಗ್ರೆಸ್ ಗೂಂಡಾಗಳು ಹಾಗೂ ನಕ್ಸಲೀಯರು ಒಟ್ಟಾಗಿ ಸಿಪಿಐ(ಎಂ) ಪಕ್ಷದ ಮೇಲೆ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಹರಿಯಬಿಟ್ಟರು. ಪಕ್ಷದ ಹಾಗೂ ಕಾರ್ಮಿಕ ಸಂಘಗಳ ಕಾರ್ಯಾಲಯಗಳನ್ನು ಧ್ವಂಸ ಮಾಡಲಾಯಿತು. ಪಕ್ಷದ ಸಾವಿರಾರು ಕಾರ್ಯಕರ್ತರನ್ನು ಹೊಡೆದು ಬಡಿದು ಅವರ ಮನೆಗಳಿಂದ ಓಡಿಸಲಾಯಿತು. ಅವರ ಮನೆಗಳನ್ನು ಲೂಟಿ ಮಾಡಲಾಯಿತು. 1,100 ಕ್ಕೂ ಹೆಚ್ಚು ಪಕ್ಷದ ಕಾರ್ಯಕರ್ತರು ಮತ್ತು ಪಕ್ಷದ ಬೆಂಬಲಿಗರು ಈ ದಾಳಿಯಲ್ಲಿ ಅಸುನೀಗಿದರು.

ಜನಶಕ್ತಿಯ ವಿಜಯ

ಪಶ್ಚಿಮ ಬಂಗಾಳದ ಜನತೆಯ ತ್ಯಾಗ ಬಲಿದಾನ ವ್ಯರ್ಥವಾಗಲಿಲ್ಲ. 1977ರಲ್ಲಿ ವಿಧಾನಸಭೆಗೆ ಮತ್ತೆ ಚುನಾವಣೆ ನಡೆದಾಗ ಜನತೆ ಕಾಂಗ್ರೆಸ್ ಪಕ್ಷದ ಸೊಕ್ಕು ಮುರಿಯುವಂತೆ ಅದನ್ನು ಅಧಿಕಾರದಿಂದ ಕಿತ್ತು ಹಾಕಿತು. ಅಂದು ಪಶ್ಚಿಮ ಬಂಗಾಳದಲ್ಲಿ ಕಾಲು ಮುರಿದು ಬಿದ್ದ ಕಾಂಗ್ರೆಸ್ಸಿಗೆ ಮತ್ತೆ ಇದುವರೆಗೂ ಎದ್ದು ನಿಲ್ಲಲು ಸಾಧ್ಯವಾಗಿಲ್ಲ. ಇದಕ್ಕೂ ಸ್ವಲ್ಪ ಮೊದಲು ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ನಾಯಕಿ ಶ್ರೀಮತಿ ಇಂದಿರಾ ಗಾಂಧಿ ನೇತೃತ್ವದ ಸರ್ಕಾರವನ್ನು, ಅದು ಜನತೆಯ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿ ಪ್ರಜಾಪ್ರಭುತ್ವವನ್ನು ನಾಶ ಮಾಡಲು ಯತ್ನಿಸಿದ ತಪ್ಪಿಗಾಗಿ, ಅಧಿಕಾರದಿಂದ ಕಿತ್ತು ಹಾಕಿದ್ದರು. ಕಾಂಗ್ರೆಸ್ ಪಕ್ಷವು ಅದರ ಸರ್ವಾಧಿಕಾರಿ ಧೋರಣೆಗಾಗಿ ಕೇಂದ್ರದಲ್ಲಿಯೂ, ಪಶ್ಚಿಮ ಬಂಗಾಳದಲ್ಲಿಯೂ ತಕ್ಕ ಶಿಕ್ಷೆ ಅನುಭವಿಸುವಂತಾಯಿತು. ಜನ ಶಕ್ತಿ ವಿಜಯಶಾಲಿಯಾಯಿತು. ನಾಲ್ಕರಲ್ಲಿ ಮೂರರಷ್ಟು ಬಹುಮತದ ಬೃಹತ್ ಜನಾದೇಶದೊಂದಿಗೆ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ 1977ರ ಜೂನ್ 21 ರಂದು ಪಶ್ಚಿಮ ಬಂಗಾಳದಲ್ಲಿ ಅಧಿಕಾರವಹಿಸಿಕೊಂಡಿತು. ಕಾಮ್ರೆಡ್ ಜ್ಯೋತಿ ಬಸು ಅದರ ಮೊದಲ ಮುಖ್ಯಮಂತ್ರಿ ಯಾದರು. ಮುಂದೆ 24 ವರ್ಷಗಳ ಕಾಲ ಅವರೇ ಮುಖ್ಯಮಂತ್ರಿಯಾಗಿ ಪುನರಾಯ್ಕೆಯಾಗುತ್ತಾ ವಿಶ್ವ ದಾಖಲೆ ನಿರ್ಮಾಣಗೊಂಡಿತು.

ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬರುವುದರೊಂದಿಗೆ ಭಾರತದ ರಾಜಕೀಯದಲ್ಲಿ ಹಾಗೂ ಜನತೆಯ ಜೀವನದಲ್ಲಿ ಹೊಸ ಯುಗವೊಂದು ಆರಂಭವಾಯಿತು. ಅಧಿಕಾರವಹಿಸಿಕೊಂಡ ಎಡರಂಗ ಸರ್ಕಾರವೂ ರಾಜ್ಯದ ವಿವಿಧ ಜೈಲುಗಳಲ್ಲಿದ್ದ 1700 ಕ್ಕೂ ಹೆಚ್ಚು ರಾಜಕೀಯ ಕೈದಿಗಳನ್ನು ಪಕ್ಷಭೇದವಿಲ್ಲದೆ ಬಿಡುಗಡೆ ಮಾಡಿತು. ಅವರಲ್ಲಿ ನಕ್ಸಲೀಯರು ಗಣನೀಯ ಸಂಖ್ಯೆಯಲ್ಲಿದ್ದರು. ಹಿಂದಿನ ಕಾಂಗ್ರೆಸ್ ಸರ್ಕಾರದಿಂದ ಅಕ್ರಮವಾಗಿ ಸೇವೆಯಿಂದ ವಜಾಗೊಳಿಸಲ್ಪಟ್ಟ ಸರ್ಕಾರಿ ನೌಕರರನ್ನು ಮತ್ತು ಶಿಕ್ಷಕರನ್ನು ಪುನರ್ ನೇಮಕ ಮಾಡಿಕೊಳ್ಳಲಾಯಿತು. ಖಾಸಗಿ ಕ್ಷೇತ್ರದ ಕೈಗಾರಿಕೆಗಳಲ್ಲಿ ಹಿಂದಿನ 6 ವರ್ಷಗಳಿಂದ ವಜಾಗೊಳಿಸಲಾಗಿದ್ದ ಕಾರ್ಮಿಕರನ್ನು ಸಹ ಪುನರ್ ನೇಮಕ ಮಾಡಿಕೊಳ್ಳಲಾಯಿತು. ಆರಂಭದ ಈ ಕ್ರಮಗಳ ಮೂಲಕ ಎಡರಂಗ ಸರ್ಕಾರವು ದುಡಿಯುವ ಜನವಿಭಾಗಗಳ ಹಕ್ಕುಗಳ ರಕ್ಷಣೆಗೆ ಬದ್ಧವಾಗಿದೆ ಎಂಬ ಸ್ಪಷ್ಟ ಸಂದೇಶವನ್ನು ನೀಡಿತು ಮಾತ್ರವಲ್ಲ ಹಿಂದಿನ ಕಾಂಗ್ರೆಸ್ ದುರಾಡಳಿತದಿಂದ ನೊಂದ ಜನತೆಗೆ ಅಗತ್ಯ ಪರಿಹಾರ ಒದಗಿಸುವ ಅವರಿಂದ ಕಿತ್ತುಕೊಳ್ಳಲಾದ ಹಕ್ಕುಗಳನ್ನು ಮರಳಿಕೊಡುವ ಭರವಸೆಯನ್ನೂ ನೀಡಿತು. ಅದೇ ಸಮಯದಲ್ಲಿ, 1970 ರಿಂದ 1977 ರ ನಡುವೆ ರಾಜ್ಯದಲ್ಲಿ ಭಯೋತ್ಪಾದನೆ, ದೌರ್ಜನ್ಯವೆಸಗಿದ ಕಾಂಗ್ರೆಸ್‌ನವರ ವಿರುದ್ಧವಾಗಲಿ ಪೋಲೀಸರ ವಿರುದ್ಧವಾಗಲಿ ಯಾವುದೇ ಸೇಡಿನ ಕ್ರಮವನ್ನು ಕೈಗೊಳ್ಳಲಾಗದು ಎಂಬ ಭರವಸೆಯನ್ನೂ ನೀಡಲಾಯಿತು. ಹೀಗೆ ಪಶ್ಚಿಮ ಬಂಗಾಳದ ಜನತೆಗೆ ಮೊಟ್ಟ ಮೊದಲು ಬಾರಿಗೆ ಕೇವಲ ಭರವಸೆ ಕೊಡುವ ಸರ್ಕಾರದ ಬದಲಾಗಿ ಕೊಟ್ಟ ಭರವಸೆಯನ್ನು ಈಡೇರಿಸುವ ಸರ್ಕಾರ ಲಭಿಸಿದಂತಾಯಿತು.

ಜನ ಜೀವನದಲ್ಲಿ ಗುಣಾತ್ಮಕ ಬದಲಾವಣೆ

ಹೀಗೆ ಜನ ಚಳುವಳಿಯ ನಡುವೆಯಿಂದ ಹುಟ್ಟಿ ಬಂದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಅನಂತರ ನಡೆದ ಪ್ರತಿಯೊಂದು ಚುನಾವಣೆಯಲ್ಲಿ ಹೆಚ್ಚೆಚ್ಚು ಬಹುಮತವನ್ನು ಪಡೆಯುತ್ತಾ ಇಂದಿನವರೆಗೂ ಅಚಲವಾಗಿ ನಿಂತಿದೆ. ಅದರ ಜನಪ್ರಿಯತೆಗೆ ಅದರ ವೈರಿಗಳೂ ತಲೆದೂಗುವಂತಾಯಿತು.


ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಒಂದು ಕಮ್ಯೂನಿಸ್ಟ್ ಸರ್ಕಾರವಲ್ಲ. ಎಡರಂಗದಲ್ಲಿರುವ ಎಲ್ಲ ಪಕ್ಷಗಳು ಮಾರ್ಕ್ಸ್‌ವಾದಿಗಳಲ್ಲ. ಅದು ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳ ಒಂದು ಸಮ್ಮಿಶ್ರ ಸರ್ಕಾರವಷ್ಟೇ. ಅದರ ನೇತೃತ್ವ ವಹಿಸಿರುವ ಸಿಪಿಐ(ಎಂ) ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಜಾರಿ ಮಾಡಲು ಬದ್ಧವಾಗಿ ಕಾರ್ಯ ನಿರ್ವಹಿಸುತ್ತದೆ. ಅಷ್ಟು ಮಾತ್ರವಲ್ಲ, ಎಡರಂಗ ಸರ್ಕಾರ ಭಾರತದ ಸಂವಿಧಾನದ ಇತಿಮಿತಿಗಳಲ್ಲೇ ಕಾರ್ಯನಿರ್ವಹಿಸಬೇಕಾಗಿದೆ. ಈ ಇತಿಮಿತಿಗಳಿಂದಾಗಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಕ್ಕೆ ತನ್ನ ಕ್ರಾಂತಿಕಾರಿ ಸಾಮಾಜಿಕ-ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಆದರೂ, ಕಳೆದ 30 ವರ್ಷಗಳ ಅವಧಿಯಲ್ಲಿ, ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಮತ್ತು ಜನ ಜೀವನದಲ್ಲಿ ಗುಣಾತ್ಮಕ ಬದಲಾವಣೆ ತರುವುದರಲ್ಲಿ ಎಡರಂಗ ಸರ್ಕಾರದ ಸಾಧನೆ ಗಣನೀಯವಾಗಿದೆ.

ಎಡರಂಗ ಸರ್ಕಾರ ಜಾರಿಗೆ ತಂದ ವ್ಯಾಪಕ ಭೂ ಸುಧಾರಣೆಗಳಿಂದ ಮತ್ತು ಪರಿಣಾಮಕಾರಿ ಪಂಚಾಯತ್ ರಾಜ್ ವ್ಯವಸ್ಥೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಗಾಮಿ ಪಾಳೇಗಾರಿ ಪದ್ಧತಿಯ ಹಿಡಿತ ಸಡಿಲಾಯಿತು ಮಾತ್ರವಲ್ಲ ಬಡ ರೈತರು ಮತ್ತು ಕೃಷಿ ಕೂಲಿಕಾರರು ಗಣನೀಯವಾಗಿ ಸಶಕ್ತರಾದರು. ತಮ್ಮ ಬಾಳ ಕತ್ತಲೆಯಲ್ಲಿ ಮೊಟ್ಟ ಮೊದಲ ಬಾರಿಗೆ ಬೆಳಕಿನ ಕಿರಣವನ್ನು ಕಂಡ ಗ್ರಾಮೀಣ ಬಡವರು, ಮುಖ್ಯವಾಗಿ ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರು ಎಡರಂಗ ಮತ್ತು ಸಿಪಿಐ(ಎಂ) ನ ಸ್ಥಿರ ಬೆಂಬಲಿಗರಾದರು. ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗಾಗಿ, ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವವರಿಗಾಗಿ, ಸರ್ಕಾರಿ ನೌಕರರಿಗಾಗಿ, ಶಾಲಾ-ಕಾಲೇಜು ಶಿಕ್ಷಕರಿಗಾಗಿ, ವಿದ್ಯಾರ್ಥಿ ಯುವ ಜನರಿಗಾಗಿ, ಮಹಿಳೆಯರಿಗಾಗಿ, ನಿರಾಶ್ರಿತರಿಗಾಗಿ ಸರ್ಕಾರ ವಹಿಸಿದ ಮುತುವರ್ಜಿಯಿಂದಾಗಿ ಅವರ ಜನ ಬೆಂಬಲ ವಿಸ್ತಾರವಾಗುತ್ತಾ, ದೃಢಗೊಳ್ಳುತ್ತಾ ಸಾಗಿತು. ಹೀಗೆ ಪಶ್ಚಿಮ ಬಂಗಾಳದ ಬಹುಸಂಖ್ಯಾತ ಜನತೆ, ಅವರ ಸ್ವಂತ ಅನುಭವದಿಂದ ಎಡರಂಗ ಸರ್ಕಾರ ತಮ್ಮ ಪರವಾದ ಸರ್ಕಾರವೆಂದು, ಅವರ ಹಕ್ಕುಗಳನ್ನು ಅದು ಕಾಪಾಡುತ್ತದೆ ಎಂದು, ತಮ್ಮ ಹಿತರಕ್ಷಣೆಗಾಗಿ ಅದು ಹೋರಾಡುತ್ತದೆ ಎಂದು ಸ್ಪಷ್ಟವಾಗಿ ಕಂಡುಕೊಳ್ಳುವಂತಾಯಿತು. ಈಗ ಇದೇ ಜನ ಎಡರಂಗ ಸರ್ಕಾರದ ಉಳಿವಿಗಾಗಿ, ಅದರ ರಕ್ಷಣೆಗಾಗಿ, ತಮ್ಮ ಜೀವದ ಹಂಗು ತೊರೆದು ನಿಂತಿರುವುದನ್ನು ಕಾಣಬಹುದು. ಇದುವೇ ಪಶ್ಚಿಮ ಬಂಗಾಳ ಎಂಬ ವಿಶ್ವ ವಿಸ್ಮಯದ ಗುಟ್ಟು. ನಮಗೆಲ್ಲರಿಗೂ ಮಾದರಿಯಾಗಿರುವ ಪಶ್ಚಿಮ ಬಂಗಾಳದ ಸಮರಶೀಲ ಜನತೆಯನ್ನು ನಾವಿಂದೂ ಅಭಿನಂದಿಸೋಣ. ■

ಜನಶಕ್ತಿ ಕನ್ನಡ ವಾರಪತ್ರಿಕೆ

ಆಗಸ್ಟ್ 12, 2007

ಕೊಡುಗು



ಸಂಕಟಗಳ ಅನಾವರಣಕ್ಕೆ ವೇದಿಕೆಯಾದ ಬುಡಕಟ್ಟು ಜನರ ಸಮಾವೇಶ

ಅಂದು ಜುಲೈ-15ರ ಭಾನುವಾರ, ಕೊಡಗಿನ ಸಿದ್ದಾಪುರ ಪೇಟೆಯಲ್ಲಿ ಬೆಳಗಿನ ಜಾವ ಶತಶತಮಾನಗಳಿಂದ ಶೋಷಣೆಗೊಳಗಾದ ಶೋಷಿತರ ವಿಭಾಗವೊಂದು ಶಿಸ್ತು ಬದ್ಧ ಮೆರವಣಿಗೆಯನ್ನು ನಡೆಸಿತು. 'ಭೂಮಿ, ಆಹಾರ, ಉದ್ಯೋಗಕ್ಕಾಗಿ-ದೇಶದೆಲ್ಲೆಡೆ ಮೊಳಗಿದೆ ಕಹಳೆ', 'ಆದಿವಾಸಿ ಯುವಜನರ ಐಕ್ಯತೆ ಚಿರಾಯುವಾಗಲಿ' ಮುಂತಾದ ಘೋಷಣೆಗಳು ಅಲ್ಲಿ ಕೇಳಿ ಬಂದವು. ಅವರು ಅರಣ್ಯವನ್ನೇ ನೆಚ್ಚಿಕೊಂಡು ಅರಣ್ಯದ ಮೂಲ ರಕ್ಷಕರಾದ ಬುಡಕಟ್ಟು ಯುವಜನರು. ತಮ್ಮ ಬದುಕಿನ ಹಕ್ಕಿಗಾಗಿ, ಉತ್ತಮ ನಾಳೆಗಳಿಗಾಗಿ ಹಮ್ಮಿಕೊಂಡ ಆಕರ್ಷಕ ಮೆರವಣಿಗೆ ಅದು. ನೆಲ್ಯ ಹುದಿಕೇರಿಯಿಂದ ಹೊರಟ ಮೆರವಣಿಗೆಯಲ್ಲಿ ನಿರೀಕ್ಷೆಗೂ ಮೀರಿ 300 ಕ್ಕೂ ಅಧಿಕ ಬುಡಕಟ್ಟು ಯುವಜನರು ಭಾಗವಹಿಸಿದ್ದರು. ಮೆರವಣಿಗೆಯಲ್ಲಿ ಬುಡಕಟ್ಟು ಜನಾಂಗದವರಿಂದಲೇ ಜನಪದ ಸೊಬಗನ್ನು ಪ್ರತಿಬಿಂಬಿಸುವ ಬ್ಯಾಂಡ್, ವಾದ್ಯಗಳು ಮೊಳಗಿದ್ದು, ನೋಡುಗರ ಕಣ್ಮನ ಸೆಳೆಯುವಂತಿತ್ತು.

ವಿದೇಶಿ ನಿಧಿಯ ಆಮಿಷವೂ ಬಂದೂಕು ಬಾಂಬ್‌ನ ಭ್ರಮೆಯೂ

ಬಳಿಕ ಸಿದ್ಧಾಪುರ ಪಂಚಾಯತ್ ಆವರಣದಲ್ಲಿ ಸೇರಿದ್ದ ಸಮಾವೇಶವನ್ನು ಡಿವೈಎಫ್ಐ ಮಾಜಿ ರಾಜ್ಯ ಉಪಾಧ್ಯಕ್ಷರಾದ ಕೃಷ್ಣಪ್ಪ ಕೊಂಬಾಡಿಯವರು ಉದ್ಘಾಟಿಸುತ್ತಾ, "ಅರಣ್ಯವನ್ನೇ ನೆಚ್ಚಿಕೊಂಡು ಕಳೆದ ಹಲವು ಶತಮಾನಗಳಿಂದ ಉತ್ತಮ ಬದುಕಿಗಾಗಿ ದೀರ್ಘ ಹೋರಾಟ ನಡೆಸಿಕೊಂಡು ಬಂದಿರುವ ಬುಡಕಟ್ಟು ಜನ ಸಮುದಾಯವನ್ನು ಒಂದು ಕಡೆ ವಿದೇಶಿ ನಿಧಿ ಜಾಲದ ಸ್ವಯಂ ಸೇವಾ ಸಂಘಟನೆಗಳು ಪರಿಸರ, ಅಭಿವೃದ್ಧಿಯ ಹೆಸರಲ್ಲಿ ದಾರಿ ತಪ್ಪಿಸುವ ಕೆಲಸವನ್ನು ನಿರಂತರವಾಗಿ ನಡೆಸುತ್ತಿದ್ದರೆ, ಇನ್ನೊಂದು ಕಡೆ ನಕ್ಸಲ್‌ವಾದಿಗಳು ತಮ್ಮ ದುಸ್ಸಾಹಸವಾದಿ ಉದ್ದೇಶಗಳಿಗೆ ಮುಗ್ಧ ಜನರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಬೆರಳೆಣಿಕೆಯಷ್ಟು ಜನ ಬಂದೂಕು ಹಿಡಿದು ಕಾಡಿನಲ್ಲಿ ಅವಿತುಕೊಂಡು ರಾಜ್ಯದ ಸುಮಾರು 6 ಕೋಟಿಯಷ್ಟು ಜನರ ಬದುಕನ್ನು ಉತ್ತಮ ಪಡಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ವಿದೇಶಿ ನಿಧಿಯನ್ನು ಪಡೆದು ಆದಿವಾಸಿ ಜನತೆಗೆ ಆಮಿಷಗೊಳಪಡಿಸಿ ಈ ವ್ಯವಸ್ಥೆಯನ್ನು ಸ್ಥಿರವಾಗಿರಬೇಕೆಂಬ ಸ್ವಯಂ ಸೇವಾ ಸಂಘಟನೆಗಳಿಂದಲೂ ಅದು ಸಾಧ್ಯವಿಲ್ಲ. ಆದಿವಾಸಿ ಜನತೆಯು ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ಪ್ರಜಾಪ್ರಭುತ್ವ ದಾರಿಯಿಂದ ಮಾತ್ರ ಸಾಧ್ಯವೇ ಹೊರತು ನಕ್ಸಲ್ ದಾರಿಯಿಂದ ಅಲ್ಲ' ಎಂದು ಹೇಳಿದರು.

ಅವರು ಮುಂದುವರೆಸುತ್ತಾ, 'ಬುಡಕಟ್ಟು ಜನತೆಯ ಐಕ್ಯತೆಗೆ ಕೊಳ್ಳಿ ಇಡಲು ಆರ್‌ಎಸ್‌ಎಸ್ ಪ್ರೇರಿತ ವನವಾಸಿ ಎಂಬ ಕೋಮುವಾದಿ ಸಂಘಟನೆಯು ಶತಪ್ರಯತ್ನ ನಡೆಸುತ್ತಿದ್ದು, ನಿಜವಾದ ಸಮಸ್ಯೆಯನ್ನು ಮರೆ ಮಾಚುತ್ತಿದ್ದಾರೆ. ಅರಣ್ಯ ನಾಶ ಬುಡಕಟ್ಟೆ ಜನಾಂಗದಿಂದ ನಡೆಯುತ್ತಿದೆ ಎಂಬ ಹುಯಿಲೆಬ್ಬಿಸಿ ಕೆಲವು ಪರಿಸರವಾದಿಗಳು, ಸ್ಥಾಪಿತ ಹಿತಾಸಕ್ತಿಗಳು ನಿರಪರಾಧಿ ಜನರ ಮೇಲೆ ಕೇಸು ದಾಖಲಿಸುತ್ತಿದ್ದಾರೆ. ವಿದೇಶಿ ನೇರ ಕೈವಾಡದ ಮೂಲಕ ಟಿಂಬರ್ ಮಾಫಿಯಾದಿಂದ ಅರಣ್ಯ ನಾಶವಾಗುತ್ತಿದೆಯೇ ಹೊರತು ನಿರಪರಾಧಿ ಬುಡಕಟ್ಟು ಜನತೆಯಿಂದಲ್ಲ' ಎಂದು ಹೇಳಿದರು.

ಧೀಮಂತ ಪರಂಪರೆ

ಮುಖ್ಯ ಅತಿಥಿಯಾಗಿ ಆಗಮಿಸಿದ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಸುನೀಲ್‌ಕುಮಾರ್ ಬಜಾಲ್‌ರವರು ದೇಶಾದ್ಯಂತ ಸುಮಾರು 8 ಕೋಟಿಯಷ್ಟು ಆದಿವಾಸಿ ಜನತೆಯಿದ್ದು, ಅವರ ಮೂಲಭೂತ ಸಮಸ್ಯೆಗಳ ವಿರುದ್ಧದ ಹೋರಾಟವು ಸಾರ್ವತ್ರೀಕರಣಗೊಳ್ಳಬೇಕಾಗಿದೆ. ಈಗಾಗಲೇ ಆದಿವಾಸಿಗಳು ಭೂಮಿಗಾಗಿ ಹೋರಾಟ ನಡೆಸುತ್ತಿದ್ದು, ಅದಕ್ಕೆ ವ್ಯತಿರಿಕ್ತವಾಗಿ ಆಳುವ ವರ್ಗಗಳು ಪೋಲಿಸ್ ಯಂತ್ರವನ್ನು ಬಳಸಿ ಗೋಲಿಬಾರ್ ನಡೆಸಿ ನೂರಾರು ಆದಿವಾಸಿಗಳನ್ನು ಕೊಲೆಗೈದು ಐಕ್ಯತೆ ಮುರಿಯಲು ಪ್ರಯತ್ನಿಸುತ್ತಿದೆ. ಕೇರಳ, ಪ.ಬಂಗಾಳ, ತ್ರಿಪುರ ರಾಜ್ಯಗಳಲ್ಲಿ ಎಡರಂಗ ನೇತೃತ್ವದ ಸರ್ಕಾರಗಳು ಆದಿವಾಸಿಗಳ ಉನ್ನತಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಕಾರ್ಯಗತಗೊಳ್ಳುತ್ತಿದೆ. ಹಂಚಿಕೆಯಾದ ಭೂಮಿಯಲ್ಲಿ ಶೇ.55 ದಷ್ಟು ದಲಿತರು ಹಾಗೂ ಆದಿವಾಸಿಗಳಿಗೆ ಸೇರಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲೂ ಅತೀ ಹೆಚ್ಚಿನ ಸ್ಥಾನಗಳನ್ನು ಆದಿವಾಸಿಗಳು ಪಡೆಯುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರುತ್ತಿದ್ದಾರೆ. ಶಿಕ್ಷಣ ಪಡೆಯುವಲ್ಲಿಯೂ ಸರ್ಕಾರವೇ ಮುತುವರ್ಜಿ ವಹಿಸಿ ಹಾಸ್ಟೆಲ್ ವ್ಯವಸ್ಥೆ, ವಿದ್ಯಾರ್ಥಿ ವೇತನವನ್ನು ವ್ಯವಸ್ಥಿತವಾಗಿ ನೀಡಲಾಗುತ್ತಿದೆ. ಕರ್ನಾಟಕದಲ್ಲಿ ಬುಡಕಟ್ಟು ಜನತೆಗಾಗಿ ಸಾಕಷ್ಟು ಸೌಲಭ್ಯಗಳಿಲ್ಲ, ಇದ್ದರೂ ಸರಿಯಾಗಿ ದೊರಕುತ್ತಿಲ್ಲ. ಬುಡಕಟ್ಟು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಉದ್ಯೋಗವೆಂಬುದೇ ಗಗನ ಕುಸುಮವಾಗಿದೆ. ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ಬಿಜೆಪಿ-ಜೆಡಿ(ಎಸ್) ನೇತೃತ್ವದ ಕೆಡಿಎಫ್ ಸರ್ಕಾರವು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ರಾಜ್ಯದೆಲ್ಲೆಡೆ ಇರುವ ಆದಿವಾಸಿಗಳ ಐಕ್ಯತೆ ಬಲಪಡಿಸಲು ಈ ಸಮಾವೇಶ ನಾಂದಿಯಾಗಲಿ' ಎಂದರು.



…ಮಾತನಾಡುತ್ತಿರುವ ಕೃಷ್ಣಪ್ಪ ಕೊಂಬಾಡಿ

ಸೂರ್ಯ ಉದಯಿಸುವ ಮುನ್ನವೇ ತೋಟಕ್ಕೆ

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿಯಾದ ಪಿ.ಆರ್.ಭರತ್‌ರವರು "ಇತರರ ಸುಖಕ್ಕಾಗಿ ತನ್ನ ಸುಖವನ್ನು ಬಲಿಕೊಟ್ಟು, ತನ್ನ ಜೀವನವನ್ನೇ ಸವೆಸುತ್ತಿರುವ ಬುಡಕಟ್ಟು ಜನತೆಯನ್ನು ಸಂಘಟಿಸಿ ಹೋರಾಟದ ಪಥದತ್ತ ಮುನ್ನಡೆಸುವುದು ಆದ್ಯ ಕರ್ತವ್ಯವಾಗಿದೆ. ಕೊಡಗಿನ ಒಟ್ಟಾರೆ ಕೃಷಿ ಉತ್ಪಾದನೆಯಲ್ಲಿ ಬುಡಕಟ್ಟು ಜನಾಂಗದ ಪಾತ್ರವೇ ಮಹತ್ವದ್ದಾಗಿದೆ. ಆದರೆ ಅವರಿಗೆ ಮಾತ್ರ ಒಂದಿಂಚೂ ಭೂಮಿಯಿಲ್ಲ, ಸರ್ಕಾರದಿಂದ ಯಾವ ಸವಲತ್ತುಗಳು ಸಿಗುತ್ತಿಲ್ಲ. ಸೂರ್ಯ ಉದಯವಾಗುವ ಮೊದಲೇ ತೋಟಕ್ಕೆ ನುಸುಳಿದರೆ, ಸೂರ್ಯಾಸ್ತವಾದ ನಂತರವೇ ಬಿಡುಗಡೆ. ಅಲ್ಲಿಯುವರೆಗೆ ಮಾಲೀಕರ ಕೈ ಕೆಳಗಡೆ ಜೀತದಾಳುಗಳಂತೆ ಬದುಕು ಸಾಗಿಸಬೇಕಾಗಿದೆ. ಸಿಗುವಂತಹ ಕೂಲಿ ಕೇಲವ 30 ರೂ. ಜಾಸ್ತಿ ಕೇಳಿದರೆ ಕೆಲಸದಿಂದ ಕಿತ್ತು ಬಿಸಾಡುತ್ತಾರೆ' ಎಂದು ಹೇಳುವ ಮೂಲಕ ಕೊಡಗಿನಲ್ಲಿರುವ ಬುಡಕಟ್ಟು ಜನತೆಯ ನೈಜ ಚಿತ್ರಣವನ್ನು ಬಯಲಿಗೆಳೆದರು.

ಜಿಲ್ಲೆಯಾದ್ಯಂತ ವಿವಿಧ ಪ್ರದೇಶಗಳಿಂದ ಆಗಮಿಸಿದ ಬುಡಕಟ್ಟು ಯುವಜನರು ಮನಃಪೂರ್ವಕವಾಗಿ ತಮ್ಮ ಅಳಲನ್ನು ತೋಡಿಕೊಂಡರು. ಹಲವಾರು ಶತಮಾನಗಳಿಂದ ಅನುಭವಿಸಿಕೊಂಡು ಬಂದ ದುಃಖ ದುಮ್ಮಾನಗಳಿಗೆ ಸಮಾವೇಶವು ವೇದಿಕೆಯಾಯಿತು. ಸುಮಿತ್ರ, ಗಿರಿಜಾ, ಪಾತೆ, ಅಪ್ಪು, ಬೆಳ್ಳಿ, ಅಯ್ಯಪ್ಪ, ಭಾಗ್ಯ, ಮುತ್ತ ಮುಂತಾದವರ ಮಾತಿಗೆ ಇಡೀ ಸಭೆಯೇ ಆಶ್ಚರ್ಯಪಟ್ಟಿತು.

ಭೂಮಿ, ಆಹಾರ, ಉದ್ಯೋಗ, ರೇಷನ್ ಕಾರ್ಡ್, ಶಿಕ್ಷಣ, ಅಧ್ಯಾಪಕರು, ಹಾಸ್ಟೆಲ್, ವಿದ್ಯಾರ್ಥಿ ವೇತನ, ಪೆನ್‌ಷನ್, ಸರ್ಕಾರದ ಸೌಲಭ್ಯಗಳು ಮುಂತಾದ ವಿಚಾರಗಳ ಬಗ್ಗೆ ಸಮಾವೇಶವು ನಿರ್ಣಯ ಗಳನ್ನು ಅಂಗೀಕರಿಸಿ, ಮುಂದಿನ ದಿನಗಳಲ್ಲಿ ಹೋರಾಟಗಳನ್ನು ರೂಪಿಸಲು ತೀರ್ಮಾನಿಸಿತು. ಬುಡಕಟ್ಟು ಯುವಜನರನ್ನು ಸೈದ್ಧಾಂತಿಕ ವಾಗಿ ಗಟ್ಟಿಗೊಳಿಸಲು ಸೆಪ್ಟೆಂಬರ್ 2,3 ರಂದು ಜಿಲ್ಲಾಮಟ್ಟದ ಅಧ್ಯಯನ ಶಿಬಿರವನ್ನು ವಿರಾಜಪೇಟೆ ಯಲ್ಲಿ ನಡೆಸಲು ತೀರ್ಮಾನಿಸಲಾಯಿತು.

ಉಪಸಮಿತಿ ಅಸ್ತಿತ್ವಕ್ಕೆ

ಸಮಾವೇಶದಲ್ಲಿ ನೂತನ ಕೊಡಗು ಜಿಲ್ಲಾ ಬುಡಕಟ್ಟು ಯುವಜನರ ಉಪಸಮಿತಿಯು ಅಸ್ತಿತ್ವಕ್ಕೆ ಬಂತು. ಸಂಚಾಲಕಿಯಾಗಿ ಶ್ರೀಮತಿ ಭಾಗ್ಯರವರು ಸರ್ವಾನುಮತದಿಂದ ಆಯ್ಕೆಗೊಂಡರೆ, ಸಹ ಸಂಚಾಲಕರಾಗಿ ಚಂಗಪ್ಪ, ಗಣೇಶ್, ಭೋಜ, ಗಿರಿಜಾರವರನ್ನು ಆರಿಸಲಾಯಿತು ಹಾಗೂ 14 ಮಂದಿಯನ್ನು ಸಮಿತಿ ಸದಸ್ಯರನ್ನಾಗಿ ಆಯ್ಕೆಗೊಳಿಸಲಾಯಿತು.

ವರದಿ: **ಸಿಂಚನ**

ಅರ್ಥ ಕಳೆದುಕೊಳ್ಳುತ್ತಿರುವ ರೈತರ ಹುತಾತ್ಮ ದಿನಾಚರಣೆ

ಜುಲೈ 21, 1980 ನರಗುಂದ- ನವಲಗುಂದ ರೈತ ಬಂಡಾಯ ಎಂದು ಕರೆಯಲಾಗುವ ಚರಿತ್ರಾರ್ಹ ಘಟನೆಗೆ ಕಾರಣವಾದ ದಿನ. ಆ ದಿನದಂದು ಪೊಲೀಸ್ ಗುಂಡಿಗೆ ಬಲಿಯಾದ ಚಿಕ್ಕನರಗುಂದದ ಈರಪ್ಪ ಕಡ್ಲಿಕೊಪ್ಪ ಹಾಗೂ ಅಳಗವಾಡಿಯ ಬಸಪ್ಪ ಲಕ್ಕುಂಡಿ ಯುವ ರೈತರ ಸ್ಮರಣಾರ್ಥವಾಗಿ ರೈತ ಹುತಾತ್ಮ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ಮಲಪ್ರಭಾ ಅಚ್ಚುಕಟ್ಟು ಪ್ರದೇಶ ರೈತ ಸಮನ್ವಯ ಸಮಿತಿ ಹಾಗೂ ರಾಜ್ಯ ರೈತ ಸಂಘಗಳು ಪ್ರತ್ಯೇಕವಾಗಿ ಈ ಆಚರಣೆಯನ್ನು ಮಾಡುತ್ತಾ ಬಂದಿವೆ. ಪ್ರಾರಂಭಿಕ ವರ್ಷಗಳ ಆಚರಣೆಯಲ್ಲಿ ಕಂಡು ಬಂದ ಪ್ರಖರತೆ, ಅದ್ದೂರಿ ನಂತರ ವರ್ಷಗಳಲ್ಲಿ ಶಿಥಿಲವಾಗಿ ತೋರಿದರೂ, ಆಚರಣೆಯಂತೂ ಕೈ ಬಿಟ್ಟಿರಲಿಲ್ಲ. ಆದರೆ ಕಳೆದ ನಾಲ್ಕಾರು ವರ್ಷಗಳಿಂದ ರೈತ ಹುತಾತ್ಮ ದಿನಾಚರಣೆಯಲ್ಲಿ ಗುರುತಿಸಿಕೊಳ್ಳುತ್ತಿರುವ ರಾಜಕೀಯ ಪಕ್ಷಗಳ ಹಾಗೂ ಸಂಘಟನೆಗಳ ಸಂಖ್ಯೆ ಹೆಚ್ಚಿದೆ. ಆ ದಿನ ನವಲಗುಂದ-ನರಗುಂದ ನಗರಗಳಲ್ಲಿ ಈ ಸಂಘಟನೆಗಳಲ್ಲಿ ಒಂದು ರೀತಿ ಸ್ಪರ್ಧೆಯ ಏರ್ಪಟ್ಟಂತೆ ತೋರುತ್ತದೆ. ರೈತರ ಮಧ್ಯ ಗುರುತಿಸಿಕೊಳ್ಳಲು ರಾಜಕೀಯ ಪಕ್ಷಗಳಿಗಿರುವ ಆಸಕ್ತಿ ಮುಚ್ಚಿತಕ್ಕದ್ದ. ಹಾಗೆ ನೋಡಿದರೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರಿಗೆ ರಾಜಕೀಯೇತರ ಸಂಘಟನೆಗಳ ಕಾರ್ಯಕರ್ತರಿಗೆ ರೈತ ಹುತಾತ್ಮ ದಿನಾಚರಣೆ ಆಚರಿಸುವ ಹಕ್ಕು ಖಂಡಿತಾ ಇದೆ. ಆದರೆ ಪ್ರಶ್ನೆ ಇರುವುದು ಆತ್ಮಸಾಕ್ಷಿಯದು.

ಇಂದು ನಮ್ಮ ಕೃಷಿ ಬಿಕ್ಕಟ್ಟು ರೈತರನ್ನು ಕಂಗಾಲಾಗಿಸಿದೆ. ರೈತರ ಆತ್ಮಹತ್ಯೆಗಳು ಅವ್ಯಾಹತವಾಗಿ ನಡೆದಿವೆ. ರೈತರು ಹತ್ತು ಹಲವಾರು ಸಮಸ್ಯೆಗಳ ಸುಳಿಗೆ ಸಿಲುಕಿದ್ದಾರೆ. ಇವು ಸ್ವಾಭಾವಿಕವಾಗಿ ಹುಟ್ಟುಕೊಂಡ ಸಮಸ್ಯೆಗಳಲ್ಲ. ಸರ್ಕಾರ ಅನುಸರಿಸುತ್ತಾ ಬಂದ ನೀತಿಗಳಿಂದ ಸೃಷ್ಟಿಯಾದ ಸಮಸ್ಯೆಗಳು. ಸರ್ಕಾರ ಅನುಸರಿಸುತ್ತಿರುವ ಉದಾರೀಕರಣ ನೀತಿಗಳಿಂದ ಜಾಗತಿಕ ವ್ಯಾಪಾರ ಸಂಘಟನೆ(WTO) ಹಾಗೂ ಜಾಗತಿಕ ಬ್ಯಾಂಕುಗಳ ನಿರ್ದೇಶನಗಳನ್ನು ಪಾಲಿಸುವುದರಿಂದ ಉಂಟಾದ ಸಮಸ್ಯೆಗಳಿವು. ಕಾಂಗ್ರೆಸ್ಸಾಗಲಿ, ಬಿಜೆಪಿಯಾಗಲಿ ಈ ನೀತಿಗಳನ್ನು ಪಾಲಿಸಿಕೊಂಡು ಬಂದ ಪಕ್ಷಗಳೇ. ಅಂದಮೇಲೆ ಜುಲೈ 21 ರಂದು ರೈತರನ್ನು ಕಂಡು ಸಾಂತ್ವನ ಹೇಳಲು ಬರುವ ಈ ಪಕ್ಷಗಳ ನಾಯಕರು ಹಾಗೂ ಕಾರ್ಯಕರ್ತರು ಈ ನೀತಿಗಳ ಬಗ್ಗೆ ಅವರ ಆತ್ಮಸಾಕ್ಷಿ ಏನು ಹೇಳುತ್ತದೆ?

ಪಕ್ಷದ ಅಥವಾ ಸಂಸದರ ನಿಧಿಯಿಂದ ಹುತಾತ್ಮರೈತರ ಸ್ಮಾರಕಗಳನ್ನು ನಿರ್ಮಿಸುವುದರ ಮೂಲಕ ಕೆಲವು ಪಕ್ಷಗಳು ಈ ದಿನಾಚರಣೆಯಲ್ಲಿ ಪ್ರವೇಶ ಪಡೆದಿದ್ದು ಗಮನಾರ್ಹ. 1980ರ ಮಲಪ್ರಭಾ ರೈತ ಚಳುವಳಿಗೆ ಎಡಪಕ್ಷಗಳ ನೇತೃತ್ವ ಇತ್ತು. ಆದರೆ ಇಂಥ ಆಚರಣೆಯಲ್ಲಿ ಆ ಪಕ್ಷಗಳನ್ನು ನೇಪಥ್ಯಕ್ಕೆ ಸರಿಸಿದ್ದು ಒಂದು ವಿಪರ್ಯಾಸ.

ಒಟ್ಟಾರೆಯಾಗಿ ರೈತ ಹುತಾತ್ಮ ದಿನಾಚರಣೆಯ ಆಚರಣೆಯಿಂದ ರೈತರ ಜಾಗೃತಿ ಆಗಬೇಕೇ ವಿನಃ ರೈತರು ಇನ್ನಷ್ಟು ಗೊಂದಲಕ್ಕೆ ನೂಕಲ್ಪಡಬಾರದು ಅಷ್ಟೇ.

ಬಿ.ಎಸ್.ಸೊಪ್ಪಿನ

ಆಂಧ್ರಪ್ರದೇಶದಲ್ಲಿ ಗೋಲಿಬಾರ್ : ರಾಜ್ಯಾದ್ಯಂತ ಪ್ರತಿಭಟನೆ


ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ಸರ್ಕಾರ ತಾವಿತ್ತ ಚುನಾವಣಾ ಭರವಸೆಯಂತೆ ಬಡ, ಭೂ ರಹಿತರಿಗೆ ಕೃಷಿ ಭೂಮಿಯನ್ನು ನೀಡಬೇಕು ಎಂದು ಒತ್ತಾಯಿಸುವ ಹೋರಾಟ ತೀವ್ರಗೊಂಡಿರುವಾಗ ಅದನ್ನು ದಮನ ಮಾಡಲು ಖಮ್ಮಂ ಜಿಲ್ಲೆಯ ಮುಡಿಗೊಂಡದಲ್ಲಿ ಪೋಲೀಸರು ಗೋಲಿಬಾರ್ ನಡೆಸಿದ್ದನ್ನು ಖಂಡಿಸಿ ರಾಜ್ಯದ ಹಲವೆಡೆ ಪ್ರತಿಭಟನೆಗಳು ನಡೆದಿದೆ. ಅದರ ಸಂಕ್ಷಿಪ್ತ ವರದಿ ಇಲ್ಲಿದೆ.

ಬೆಂಗಳೂರು: ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯಲ್ಲಿನ ಸಿಪಿಐ(ಎಂ), ಸಿಪಿಐ, ರೈತ ಸಂಘಟನೆಗಳ ಹೋರಾಟದಲ್ಲಿ ಪೋಲೀಸ್ ಗೋಲಿಬಾರ್‌ನಲ್ಲಿ 8 ಜನರ ಹತ್ಯೆಯು ಸುದ್ದಿ ತಿಳಿಯುತ್ತಿದ್ದಂತೆ, ಆನಂದರಾವ್ ವೃತ್ತದಲ್ಲಿ ಮಹಾತ್ಮಗಾಂಧಿ ಪ್ರತಿಮೆ ಬಳಿ ಸಿಪಿಐ(ಎಂ), ಎಸ್.ಎಫ್.ಐ., ಜೆ.ಎಂ.ಎಸ್. ಕಾರ್ಮಿಕ ಸಂಘಟನೆಗಳ ನೂರಾರು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಆಂಧ್ರ ಸರ್ಕಾರದ ಮುಖ್ಯಮಂತ್ರಿ ರಾಜೀನಾಮೆ ನೀಡುವಂತೆ ಸಿಪಿಐ(ಎಂ)


ತುಮಕೂರು

ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಒತ್ತಾಯಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ. ಬಯ್ಯಾರೆಡ್ಡಿ, ಕೆ.ನೀಲಾ, ಕೆ.ಶಂಕರ್ ಮತ್ತು ರಾಜ್ಯ ಸಮಿತಿ ಸದಸ್ಯರಾದ ಸಯ್ಯದ್ ಮುಜೀಬ್, ಅಮಾನುಲ್ಲಾಖಾನ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮೊದಲಾದ ಮುಖಂಡರು ಇದರಲ್ಲಿ ಭಾಗವಹಿಸಿ ಗೋಲಿಬಾರ್‌ನ್ನು ಬಲವಾಗಿ ಖಂಡಿಸಿದರು.

ಆಗಸ್ಟ್ 1 ರಂದು ಬೆಂಗಳೂರಿನ ಕೆ.ಆರ್. ಪುರದಲ್ಲಿ ಕೂಡ ಪ್ರತಿಭಟನೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿ ಅವರ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ಕೃಷ್ಣರಾಜಪುರದ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ತಡೆ ನಡೆಸಿ ಆಂಧ್ರಪ್ರದೇಶ ಮುಖ್ಯಮಂತ್ರಿ ಪ್ರತಿಕೃತಿಯನ್ನು ದಹನ ಮಾಡಿದರು. ಚುನಾವಣೆಯ ಮೊದಲು ರೈತರಿಗೆ ನೀಡಿದ ಭರವಸೆಯನ್ನು ಸರ್ಕಾರ ಧಿಕ್ಕರಿಸಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ರಾಜ್ಯದಲ್ಲೂ ಕೂಡ ಬಡವರಿಗೆ, ಕಾರ್ಮಿಕರಿಗೆ, ಸ್ಲಂ ನಿವಾಸಿಗಳಿಗೆ, ನಿವೇಶನರಹಿತರಿಗೆ ನಿವೇಶನ ನೀಡಬೇಕು. ಇಲ್ಲದಿದ್ದಲ್ಲಿ ಆಂಧ್ರದ ಮಾದರಿಯಲ್ಲಿ ಪ್ರತಿಭಟನೆ ನಡೆಯಲಿದೆ ಎಂದು ಎಚ್ಚರಿಸಿದರು. ಹೋರಾಟದಲ್ಲಿ ಸಿಪಿಎಂ


ಮಂಗಳೂರು

ಮುಖಂಡರಾದ ಗೋಪಾಲಗೌಡ, ಗೌರಮ್ಮ ರಮೇಶ, ಮುಂತಾದವರು ಭಾಗವಹಿಸಿದ್ದರು.

ರಾಯಚೂರು: ರಾಯಚೂರು ನಗರದ ಚಂದ್ರಮಾಳೇಶ್ವರ ಚೌಕದಲ್ಲಿ ಆಂಧ್ರ ಸರ್ಕಾರದ ದೌರ್ಜನ್ಯ ಖಂಡಿಸಿ, ಮುಖ್ಯಮಂತ್ರಿಯ ಪ್ರತಿಕೃತಿ ದಹನ ಮಾಡುವುದರ ಮೂಲಕ ಪ್ರತಿಭಟನೆ ನಡೆಸಲಾಯಿತು. ರಾಜ್ಯ ಸಮಿತಿ ಸದಸ್ಯರು ಮತ್ತು ಜಿಲ್ಲಾ ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿ, ಡಿ.ಎಸ್. ಶರಣಬಸವ, ಕೆ.ಜಿ.ವೀರೇಶ್, ಆನಂದ, ವರಲಕ್ಷ್ಮಿ, ಪದ್ಮ ಅವರು ಸೇರಿದಂತೆ ಸುಮಾರು 70ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದಾರೆ. ಇದೇ ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಕೂಡ ಸುಮಾರು 80ಕ್ಕೂ ಹೆಚ್ಚು ಸಿಪಿಎಂ ಕಾರ್ಯಕರ್ತರು ನಗರದ ಪ್ರಮುಖ ರಸ್ತೆಗಳ ಮೂಲಕ ಮೆರವಣಿಗೆ ನಡೆಸಿ ಗಾಂಧಿ ಚೌಕದಲ್ಲಿ ಪ್ರತಿಕೃತಿ ದಹನ ನಡೆಸಲಾಯಿತು. ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ರಾಜೀನಾಮೆಗೆ ಒತ್ತಾಯಿಸಲಾಯಿತು. ಪ್ರತಿಭಟನೆಯಲ್ಲಿ ಶೇಕ್ಷಾಖಾದ್ರಿ, ನರಸಿಂಹಪ್ಪ, ದೇವೇಂದ್ರಗೌಡ, ನಾರಾಯಣ ಕಲ್ಲದ್‌ರವರ ನೇತೃತ್ವದಲ್ಲಿ ನಡೆಯಿತು. ಹಟ್ಟಿ ತಾಲ್ಲೂಕಿನಲ್ಲಿ ಮತ್ತು ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಸುಮಾರು 60ಕ್ಕೂ ಹೆಚ್ಚು ಸಿಪಿಎಂ ಕಾರ್ಯಕರ್ತರು ಆಂಧ್ರಪ್ರದೇಶದ ಪೋಲೀಸರ ದೌರ್ಜನ್ಯವನ್ನು ಖಂಡಿಸಿದರು. ಪಿ.ಎಸ್.ನಾಡಗೌಡ, ವೆಂಕೋಬರಾವ್, ಶೈಲೇಜ್‌ಕುಮಾರ್ ಘನತೆ, ಸಿ.ಯಲ್ಲಪ್ಪ, ಹಟ್ಟಿಯ ಕೆ.ಶಿವನಂದ, ಬಿ.ಹಮೀದ್, ಡಿವೈಎಫ್‌ಐ, ಎಂ.ಪಿ.ನಿಂಗಪ್ಪ, ಎಸ್.ಎಫ್.ಐ.ನ ರಂಗನಾಥರವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಮಂಡ್ಯ : ನಗರದ ಪ್ರವಾಸಿ ಮಂದಿರದಿಂದ ಸಂಜಯ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಪೋಲೀಸರ ದೌರ್ಜನ್ಯವನ್ನು ಖಂಡಿಸಲಾಯಿತು. ಸಂಜಯ ವೃತ್ತದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಜಿ.ರಾಮಕೃಷ್ಣ, ನಿವೇಶನಕ್ಕಾಗಿ ಹಾಗೂ ಭೂಮಿಗಾಗಿ ಹೋರಾಟವನ್ನು ಶಾಂತಿಯುತವಾಗಿ ನಡೆಸುತ್ತಿದ್ದರ ವಿರುದ್ಧ ಪೋಲೀಸರು ಅಮಾನವೀಯವಾಗಿ ನಡೆದುಕೊಂಡಿದ್ದಾರೆ ಎಂದರು. ಕಾರಣವಿಲ್ಲದೆ ಅಮಾಯಕರ ಮೇಲೆ ಗುಂಡಿನ ಮಳೆಗೆಳೆದಿದ್ದಾರೆ ಎಂದು ಅವರು ಕಿಡಿಕಾರಿದರು. ಜನರು ತಮ್ಮ ಹಕ್ಕಿಗಾಗಿ ಹೋರಾಡುವುದನ್ನು ಹತ್ತಿಕ್ಕುವ ಕೃತ್ಯವಿದಾಗಿದೆ. ರಾಜ್ಯ ಸರ್ಕಾರ ಪ್ರಜಾಪ್ರಭುತ್ವ ವಿರೋಧಿ ಸ್ವಭಾವವನ್ನು ತೋರಿದೆ ಎಂದು ಖಂಡಿಸಿದರು. ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಆರಾಧ್ಯ, ಸೋಮಶೇಖರ್, ಸಿದ್ದೇಗೌಡ, ಕೆ.ಆರ್.ಪೇಟೆ ನಾಗರಾಜು, ನರಸಿಂಹ ಮುಂತಾದ ಮುಖಂಡರು ಪಾಲ್ಗೊಂಡಿದ್ದರು.

ತುಮಕೂರು : ಸಿಪಿಐ(ಎಂ), ಸಿಪಿಐ, ರಾಜ್ಯ ರೈತ ಸಂಘಗಳ (ಎರಡೂ ಬಣ) ನೇತೃತ್ವದಲ್ಲಿ ಆಂಧ್ರಪ್ರದೇಶ ಸರ್ಕಾರವನ್ನು ವಜಾ ಮಾಡುವಂತೆ, ಹಾಗೂ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿಯವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿ, ಸುಮಾರು 350 ಕಾರ್ಯಕರ್ತರು ಟೌನ್‌ಹಾಲ್ ವೃತ್ತದಲ್ಲಿ ಮಾನವ ಸರಪಳಿ ನಡೆಸಿದರು. ಆಂಧ್ರ ಮುಖ್ಯಮಂತ್ರಿಯವರ ಪ್ರತಿಕೃತಿ ದಹಿಸಲಾಯಿತು. ಸಿಪಿಎಂನ ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಸಿಪಿಐನ ಶಿವಣ್ಣ, ಪ್ರಾ.ರೈತ ಸಂಘದ ಬಿ.ಉಮೇಶ್, ಡಿವೈಎಫ್‌ಐನ ಸುಬ್ರಹ್ಮಣ್ಯ, ಎಸ್.ಎಫ್.ಐ.ನ ರಾಜ್ಯಾಧ್ಯಕ್ಷರಾದ ಬಿ.ರಾಜಶೇಖರ್ ಮೂರ್ತಿ, ಕೆ.ಟಿ.ಗಂಗಾಧರ, ಗೋವಿಂದರಾಜ, ಸಿಐಟಿಯುನ ಗಂಗಾಧರ ಜಿ.ಕೆ. ಮುಂತಾದ ಮುಖಂಡರು ಮತ್ತು ಕೊಳಗೇರಿ ಹಿತರಕ್ಷಣಾ ಸಮಿತಿ ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಳ್ಳಾರಿ : ಬಳ್ಳಾರಿ ನಗರದಲ್ಲಿ ಮತ್ತು ಹಗರಿಬೊಮ್ಮನಹಳ್ಳಿಯಲ್ಲಿ ಆಂಧ್ರ ಸರ್ಕಾರದ ಕ್ರಮ ಖಂಡಿಸಿ ನೂರಕ್ಕೂ ಹೆಚ್ಚು ಸಿಪಿಎಂ ಕಾರ್ಯಕರ್ತರು ಭಾಗವಹಿಸಿ ಕೂಡಲೇ ಮುಖ್ಯಮಂತ್ರಿ ರಾಜೀನಾಮೆ ನೀಡುವಂತೆ ಒತ್ತಾಯಿಸಿದರು. ಶಿರಗುಪ್ಪದಲ್ಲಿ 130ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಗಾಂಧಿ ಸರ್ಕಲ್ ಬಳಿ ರಸ್ತೆ ತಡೆ ನಡೆಸಿದರು. ಖಮ್ಮಂ ಜಿಲ್ಲೆಯ ಗೋಲಿಬಾರ್ ಘಟನೆ ಖಂಡಿಸಿ, ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸಿದರು.

ಕಾರ್ಮಿಕ ಸಂಘದ ಮುಖಂಡರು, ಹೆಚ್. ತಿಪ್ಪಯ್ಯ, ಬಿ.ಸುರೇಶ್, ಬಿ.ಈರಣ್ಣ, ಹೆಚ್. ಒಬಳೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಹೊಸಪೇಟೆಯಲ್ಲಿ ಬಸವಣ್ಣ ಕಾಲುವೆಯಿಂದ ಮೆರವಣಿಗೆ ಹೊರಟು ಬಸ್ ಸ್ಟ್ಯಾಂಡ್‌ನಲ್ಲಿ ಪ್ರತಿಕೃತಿ ದಹನ ನಡೆಸಲಾಯಿತು. ಇದರಲ್ಲಿ 200ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಭಾಸ್ಕರಶೆಟ್ಟಿ, ಕರುಣಾನಿಧಿ, ರಾಮಚಂದ್ರ ಬಾಬು, ಸೋಮಶೇಖರ್, ರಮೇಶ್.ಕೆ. ಜಿ.ವಿ. ರಮೇಶ್, ಕುಲ್ಲಾಯಪ್ಪ ಸಂಗಾತಿಗಳು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕುರುಗೋಡುನಲ್ಲಿ ನಡೆಸಿದ ರಸ್ತೆ ತಡೆಯಲ್ಲಿ 200ಕ್ಕೂ ಹೆಚ್ಚು ಜನ ಭಾಗವಹಿಸಿ ಪ್ರತಿಕೃತಿ ದಹಿಸಲಾಯಿತು. ಕೆ.ಗಾಧಿಲಿಂಗಪ್ಪ, ವಿ.ಎಸ್.ಶಿವಶಂಕರ್, ಎಸ್.ಪಿ. ಮಹಮದ್‌ಖಾನ್, ಜಿ.ಬಸವರಾಜ, ಅನಿಲ್


ಹಾನಗಲ್

ಸಾಬ್, ಪಿ.ಸೋಮಯ್ಯ ಮುಂತಾದವರು ಪ್ರತಿಭಟನೆಯನ್ನು ಪಾಲ್ಗೊಂಡಿದ್ದರು.

ಹಾಸನ: ನಗರದ ಬಸ್ ನಿಲ್ದಾಣದ ಬಳಿ ಹೇಮಾವತಿ ಪ್ರತಿಮೆ ಬಳಿ, ಆಂಧ್ರ ಸರ್ಕಾರದ ಕ್ರಮವನ್ನು ಖಂಡಿಸಿ ಸಿಪಿಎಂ ನ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು: ಧರ್ಮೇಶ್, ಜಿ.ಪಿ.ಸತ್ಯನಾರಾಯಣ, ವೀರಣ್ಣ ಹಳ್ಳಿ, ಎಸ್.ಎಫ್.ಐ, ಡಿವೈಎಫ್‌ಐ ನೇತೃತ್ವವನ್ನು ವಹಿಸಿದ್ದರು.

ಕುಂದಾಪುರ : ಸಿಪಿಐ(ಎಂ)ನ 50ಕ್ಕೂ ಹೆಚ್ಚು ಕಾರ್ಯಕರ್ತರು ನಗರದ ಶಾಸ್ತ್ರಿ ಸರ್ಕಲ್ ಬಳಿ ಆಂಧ್ರ ಮುಖ್ಯಮಂತ್ರಿ ವಿರುದ್ಧ ಘೋಷಣೆ ಕೂಗಿದರಲ್ಲದೇ, ಗೋಲಿಬಾರ್‌ಗೆ ಬಲಿಯಾದ ಕುಟುಂಬಗಳಿಗೆ 5 ಲಕ್ಷ. ರೂಪಾಯಿ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಯಿತು. ಮಹಾಬಲ ವಡೇರ ಹೋಬಳಿ, ದಾಸ ಭಂಡಾರಿ, ಡಿವೈಎಫ್‌ಐನ ಚಂದ್ರಶೇಖರ.ವಿ, ಅಶ್ವಥ, ಸುಧಾಕರ್, ರಾಮನಾಥ, ಹಿರಿಯ ಮುಖಂಡರಾದ ಸಿ. ನಾರಾಯಣರವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೋಲಾರ: ಕೋಲಾರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಆಂಧ್ರ ಸರ್ಕಾರದ ಕ್ರಮವನ್ನು ಖಂಡಿಸಿ ಪ್ರತಿಭಟನೆಗಳು ನಡೆದವು. ಚಿಂತಾಮಣಿ, ಗೌರಿಬಿದನೂರು, ಬಾಗೆಪಲ್ಲಿ, ಕೆ.ಜಿ.ಎಫ್. ಬಂಗಾರಪೇಟೆ, ಗುಡಿಬಂಡೆ, ಚಿಕ್ಕಬಳ್ಳಾಪುರ, ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದ ವರದಿ ಇದೆ. ಕೋಲಾರ ನಗರದ ಮೆಕ್ರಿ ಸರ್ಕಲ್‌ನಲ್ಲಿ ಭೂತದಹನ ನಡೆಸಲಾಯಿತು. ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಗಾಂಧಿನಗರ ನಾರಾಯಣ ಸ್ವಾಮಿ ಜೆ.ಎಂ.ಎಸ್.ನ ಗೀತಾ, ಜನಶಕ್ತಿ ಮುರುಳಿ, ಹೊಳೂರು ಶಂಕರ್, ಎ.ವಿ.ವೆಂಕಟರಾಮ್‌ರವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಮಂಗಳೂರು : ನಗರದ ಜಿಲ್ಲಾಧಿಕಾರಿ ಕಛೇರಿ ಎದುರು ಸುಮಾರು 400ಕ್ಕೂ ಹೆಚ್ಚು ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಬಹಿರಂಗ ಸಭೆಯನ್ನು ನಡೆಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.


ರಾಯಚೂರು

ಶ್ರೀಯಾನ್, ಎಸ್.ವೈ.ಗುರುಶಾಂತ್, ಬಿ.ಮಾಧವ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯ ಬಡವರ, ಮೇಲೆ ಪೋಲೀಸರ ಗುಂಡಿನ ದಾಳಿಯನ್ನು ಖಂಡಿಸಿದರು. ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಸುಮಾರು 100ಕ್ಕೂ ಹೆಚ್ಚು ಜನ ಭಾಗವಹಿಸಿ ಹೋರಾಟ ನಡೆಸಿದರು. ಉತ್ತರ ಕನ್ನಡ, ಬೆಳಗಾಂ, ದಾವಣಗೆರೆ, ರಾಮದುರ್ಗದಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

ಮೈಸೂರು : ಜುಲೈ 29 ರಂದು ಮೈಸೂರಿನ ಕೃಷ್ಣರಾಜೇಂದ್ರ ವೃತ್ತದಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಜಂಟಿಯಾಗಿ ಪ್ರತಿಭಟಿಸಲಾಯಿತು. ಪ್ರಭಾಕರ್ ಮತ್ತು ವಿಜಯಕುಮಾರ್ ಮಾತನಾಡಿದರು. ಸಿಪಿಐ ನಿಂದ ರಾಜು ನೇತೃತ್ವದಲ್ಲಿ ಭಾಗವಹಿಸಿದ್ದರು. ಒಟ್ಟು ಸುಮಾರು 100 ಜನ ಭಾಗವಹಿಸಿದ್ದರು ಮತ್ತು ಒಂದು ಘಂಟೆಯ ಕಾಲ ಪ್ರತಿಭಟನೆ ನಡೆಯಿತು.

ಗಜೇಂದ್ರಗಢ : ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯ ಮುದಿಗೊಂಡ ಗ್ರಾಮದ ಗೋಲಿಬಾರ್‌ನ್ನು ಖಂಡಿಸಿ ಸಿಪಿಐ(ಎಂ) 50 ಕ್ಕೂ ಹೆಚ್ಚು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೆರವಣಿಗೆ ಮೂಲಕ, ಆಂಧ್ರದ ಮುಖ್ಯಮಂತ್ರಿಯವರ ಪ್ರತಿಕೃತಿ ದಹಿಸಲಾಯಿತು. ರವೀಂದ್ರ ಹೊನವಾಡ, ಎಂ.ಎಸ್.ಹಡಪದ, ಎಸ್.ಕೆ.ಮಠದ, ಗವಿಸಿದ್ದಹೊಸಮನಿ, ಟಿ.ಎಸ್. ಗೊರವರ, ಮುಂತಾದವರು ಪಾಲ್ಗೊಂಡಿದ್ದರು.

ಹಾನಗಲ್: ಸುಮಾರು 200 ಜನರು, ಸಿಪಿಐ(ಎಂ),



ಕೃಷಿ ಕೂಲಿಕಾರರ ಸಂಘ, ಪ್ರಾಂತ ರೈತ ಸಂಘ, ಎಸ್.ಎಫ್.ಐ, ಡಿವೈಎಫ್‌ಐ ಕಾರ್ಯಕರ್ತರು ಗಾಂಧಿ ವೃತ್ತದಲ್ಲಿ ಮೆರವಣಿಗೆ ನಡೆಸಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರರೆಡ್ಡಿ ಪ್ರತಿಕೃತಿ ದಹನ ನಡೆಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ, ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ, ಪ್ರಾ.ರೈ.ಸಂಘದ ಫಕೀರಪ್ಪ ಹೋತನಹಳ್ಳಿ ಕೃಷಿ ಕೂಲಿಕಾರರ ಸಂಘದ ಹುಕ್ಕಲಗೌಡ ಪಾಟೀಲ್‌ರು ಮಾತನಾಡಿದರು.

ವರದಿ: **ಕರಿಬಸಪ್ಪ.ಪಿ.**


ಜಗದಗಲ

ಶರತ್‌ಚಂದ್ರ

ಕ್ಯೂಬಾದಿಂದ ಅಮೆರಿಕಕ್ಕೆ ಎಂಟು ಡಾಕ್ಟರುಗಳ ಉಡುಗೊರೆ

ಕ್ಯೂಬಾದ ಸರ್ಕಾರವನ್ನು ಉರುಳಿಸುವುದು ಹೇಗೆ? ಕ್ಯಾಸ್ಟ್ರೋ ಮತ್ತು ಇತರ ನಾಯಕರನ್ನು ಕೊಲ್ಲಿಸುವುದು ಹೇಗೆ? ಕ್ಯೂಬಾದ ಮೇಲೆ ಆರ್ಥಿಕ ದಿಗ್ಬಂಧನ ಹೇರಿ ಅದರ ಬೆಳವಣಿಗೆ ತಡೆಯುವುದು ಹೇಗೆ ? - ಇದು ಅಮೆರಿಕದ ಸರ್ಕಾರದ ಯೋಚನಾ ಲಹರಿ. ಆದರೆ ಕ್ಯೂಬಾದ ಕಮ್ಯುನಿಸ್ಟ್ ಸರ್ಕಾರ ತನ್ನ ಯೋಚನಾ ಲಹರಿ ಹೇಗೆ ಜನಪರ, ಮಾನವೀಯ ಎಂದು ಪುರಾವೆ ಸಹಿತ ತೋರಿಸಿದೆ. ಇತ್ತೀಚೆಗೆ ಅದು ಎಂಟು ಅಮೆರಿಕನ್ ಡಾಕ್ಟರ್‌ಗಳನ್ನು ಉಡುಗೊರೆಯಾಗಿ ನೀಡಿತು. ಇವರು ಹವಾನಾದಲ್ಲಿರುವ ಲ್ಯಾಟಿನ್ ಅಮೆರಿಕನ್ ಸ್ಕೂಲ್ ಆಫ ಮೆಡಿಸಿನ್ ನಲ್ಲಿ ಆರು ವರ್ಷಗಳ ಉಚಿತ ವೈದ್ಯಕೀಯ ಶಿಕ್ಷಣ ಪಡೆದರು. ಈ ಎಂಟು ವಿದ್ಯಾರ್ಥಿಗಳು ಕ್ಯೂಬಾ ಸರಕಾರದ ಈ ಮಾನವೀಯ ಕಾರ್ಯಕ್ರಮದ ಮೊದಲ ಉಡುಗೊರೆಯಾಗಿ 25 ಲ್ಯಾಟಿನ್ ಅಮೆರಿಕದ 25 ದೇಶಗಳಿಂದ ಬಂದ 2100 ವಿದ್ಯಾರ್ಥಿಗಳ ಜತೆ ಅವರ ಡಾಕ್ಟರ್ ಪದವಿ ಪಡೆದರು.

ಈ ಎಂಟು ವಿದ್ಯಾರ್ಥಿಗಳು ಅಮೆರಿಕದ ಬಡ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರಾಗಿದ್ದು, ಕ್ಯೂಬಾ ಸರಕಾರದ ಈ ಕಾರ್ಯಕ್ರಮ ಇಲ್ಲದಿದ್ದರೆ ಡಾಕ್ಟರ್ ಆಗುವ ಕನಸು ಸಹ ಕಾಣುವ ಪರಿಸ್ಥಿತಿ ಇರಲಿಲ್ಲ. ತಮ್ಮ ದೇಶಗಳಿಗೆ ಮರಳಿ ಸಮುದಾಯ ವೈದ್ಯಕೀಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂಬುದು ಉಚಿತ ಶಿಕ್ಷಣಕ್ಕೆ ಏಕಮಾತ್ರ ಷರತ್ತು. ಇದನ್ನು ಚಾಚೂ ತಪ್ಪಿಸದೆ ಪಾಲಿಸುವುದಾಗಿ ಡಾಕ್ಟರುಗಳು ಪ್ರತಿಜ್ಞೆ ಮಾಡಿದರು. ಲ್ಯಾಟಿನ್ ಅಮೆರಿಕನ್ ಸ್ಕೂಲ್ ಆಫ ಮೆಡಿಸಿನ್ ನಲ್ಲಿ 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕ್ಯೂಬಾ ಸರಕಾರದ ಸ್ಕಾಲರ್ ಶಿಪ್



ಪಡೆದು ವೈದ್ಯಕೀಯ ಶಿಕ್ಷಣದಲ್ಲಿ ತೊಡಗಿದ್ದಾರೆ. ಇವರಲ್ಲಿ 90ಕ್ಕೂ ಹೆಚ್ಚು ಅಮೆರಿಕನ್ ವಿದ್ಯಾರ್ಥಿಗಳು ಸೇರಿದ್ದಾರೆ. ಅಮೆರಿಕದಲ್ಲಿಯೂ ಕ್ಯೂಬಾದಲ್ಲಿರುವಂತೆ ವೈದ್ಯಕೀಯ ಸೇವೆ ಎಲ್ಲರಿಗೂ ನಿಲುಕುವ (ಸಾಧ್ಯವಾದರೆ ಉಚಿತ) ಸೇವೆಯಾಗಬೇಕು. ಈಗ ಇರುವಂತೆ ಲಾಭ ಮಾಡುವ ಇನ್ನೊಂದು ಬೃಹತ್ ಉದ್ಯಮವಾಗಿ ಇರಬಾರದು. ಈ ಉದ್ದೇಶದತ್ತ ತಾವು ದುಡಿಯುವುದಾಗಿ ಈ ಎಂಟು ಡಾಕ್ಟರುಗಳು ಹೇಳಿದ್ದಾರೆ.

ಜಗತ್ತಿನ ಎಲ್ಲೆಡೆ ಸಾರ್ವತ್ರಿಕ ಉಚಿತ ವೈದ್ಯಕೀಯ ಸೇವೆ ಸ್ಥಾಪಿಸುವ ಉದ್ದೇಶದ ಕ್ಯೂಬಾದ ಈ ಕಾರ್ಯಕ್ರಮ ಮತ್ತು ಅದರ ಡಿಗ್ರಿಗೆ ವಿಶ್ವ ಆರೋಗ್ಯ ಸಂಸ್ಥೆ ಮಾನ್ಯತೆ ನೀಡಿದೆ. ಯಾರಾದರೂ ಊಹಿಸಬಹುದಾಂತೆ, ಬುಶ್ ಸರ್ಕಾರ ಇನ್ನೂ ಮಾನ್ಯತೆ ನೀಡಿಲ್ಲ. ವೈದ್ಯಕೀಯ ಸೇವೆಯಲ್ಲಿ ತೊಡಗಲು ಬೇಕಾದ ಲೈಸನ್ಸ್ ಗೆ ಅಗತ್ಯ ಪರೀಕ್ಷೆ ತೆಗೆದುಕೊಳ್ಳಲು ಈ ಎಂಟು ಚೊಚ್ಚಲ ಡಾಕ್ಟರುಗಳಿಗೆ ಬುಶ್ ಸರ್ಕಾರ ಅವಕಾಶ ನೀಡುತ್ತದೆಯೆ ಎಂದು ಕಾದು ನೋಡಬೇಕಾಗಿದೆ. ಅಮಾನವೀಯ ಉದ್ಯಮವಾಗಿರುವ ಕ್ರೂರ ವೈದ್ಯಕೀಯ ವ್ಯವಸ್ಥೆ ಬಗ್ಗೆ ಅಮೆರಿಕದಲ್ಲಿ ಈಗಾಗಲೇ ನಡೆದಿರುವ ತೀವ್ರ ಚರ್ಚೆಗೆ ಇದೂ ಸೇರಲಿದೆ. ಆಸ್ಕರ್ ಪ್ರಶಸ್ತಿ ವಿಜೇತ ಪ್ರಸಿದ್ಧ ಸಾಕ್ಷ್ಯ ಚಿತ್ರ ನಿರ್ದೇಶಕ ಮೈಕೆಲ್ ಮೂರ್ ಅವರ 'ಸಿಕ್ಕೊ' ಎಂಬ ಫಿಲಂ ಈ ತೀವ್ರ ಚರ್ಚೆಯನ್ನು ಎಬ್ಬಿಸಿದೆ. ಅಧ್ಯಕ್ಷೀಯ ಚುನಾವಣೆಯಲ್ಲೂ ಇದು ಪ್ರಮುಖ ವಿಷಯವಾಗುವ ಸೂಚನೆಗಳಿವೆ.

ಇರಾಕ್ ತೈಲ ಅಮೆರಿಕ ವಶ ಮಾಡುವ ಕಾನೂನಿಗೆ ತೀವ್ರ ತಡೆ

ಇರಾಕ್‌ನ ಈಗ ಇರುವ ಮತ್ತು ಮುಂದೆ ಶೋಧಿಸಬಹುದಾದ ತೈಲ ನಿಕ್ಷೇಪಗಳನ್ನು ಅಮೆರಿಕನ್ ದೈತ್ಯ ಕಂಪನಿಗಳ ಪೂರ್ಣ ವಶಕ್ಕೆ ಕೊಡುವುದು, ಅಮೆರಿಕದ ಇರಾಕ್ ಯುದ್ಧದ ಪ್ರಮುಖ ಗುರಿಯಾಗಿತ್ತು ಎಂಬುದರ ಬಗ್ಗೆ ಯಾರಿಗೂ ಅನುಮಾನ ಇಲ್ಲ. ಇದನ್ನು ಇರಾಕ್ ನ ಕೈಗೊಂಬೆ ಸರ್ಕಾರ ಮತ್ತು ಪಾರ್ಲಿಮೆಂಟು ಮಂಜೂರು ಮಾಡಿದ ಕಾನೂನು ಮೂಲಕ 'ಪ್ರಜಾಸತ್ತಾತ್ಮಕವಾಗಿ' ಸಾಧಿಸಲು ಬುಶ್ ಸರ್ಕಾರ ಹೆಣಗುತ್ತಿತ್ತು. ಈ ಪ್ರಯತ್ನಕ್ಕೆ ಇನ್ನೊಂದು ಬಾರಿ ಭಾರೀ ತಡೆ ಬಂದಿದೆ. ಈ ಕಾನೂನಿಗೆ ತೈಲ ಕಂಪನಿಗಳ ಕಾರ್ಮಿಕರ ಟ್ರೇಡ್ ಯೂನಿಯನ್ ಗಳು, ತೈಲ ಪರಿಣತರು, ಸುದ್ದಿ ಮಾಧ್ಯಮಗಳು - ಇವೆಲ್ಲರಿಂದ ಭಾರೀ ವಿರೋಧ ಬಂದಿದೆ. ತೈಲ ಕಂಪನಿಗಳ ಕಾರ್ಮಿಕರು ಮುಷ್ಕರವನ್ನೂ ಹೂಡಿದ್ದರು. ನೂರಕ್ಕೂ ಹೆಚ್ಚು ತೈಲ ಪರಿಣತರು (ಸದ್ದಾಂ ವಿರೋಧಿಗಳಾಗಿದ್ದು, ವಿದೇಶಗಳಲ್ಲಿ ನೆಲೆಸಿರುವವರು ಸೇರಿದಂತೆ) ಪಾರ್ಲಿಮೆಂಟು ಸದಸ್ಯರಿಗೆ ಈ ಕಾನೂನು ಮಂಜೂರು ಮಾಡಬಾರದು ಎಂದು ಪತ್ರ ಬರೆದಿದ್ದಾರೆ.

ಪಾರ್ಲಿಮೆಂಟಿನ ಈ ಅಧಿವೇಶನದಲ್ಲಿ ಈ ಕಾನೂನನ್ನು ಮಂಜೂರು ಮಾಡಿಸಲು ಬುಶ್ ಸರ್ಕಾರ, ಇರಾಕ್ ಸರ್ಕಾರ ಮತ್ತು ಪಾರ್ಲಿಮೆಂಟು ಸದಸ್ಯರ ಮೇಲೆ ಭಾರೀ ಒತ್ತಡ ತಂದಿತ್ತು. ಪಕ್ಷ, ಇಸ್ಲಾಮಿಕ್ ಪಂಥದ ಭೇಧವಿಲ್ಲದೆ ಹೆಚ್ಚಿನ ಪಾರ್ಲಿಮೆಂಟು ಸದಸ್ಯರು ಈ ಕಾನೂನಿಗೆ ಹಲವು ಪ್ರಮುಖ ತಿದ್ದುಪಡಿ ಸೂಚಿಸಿದ್ದು ಮಾತ್ರವಲ್ಲದೆ, ಈಗ ಇರುವ ರೂಪದಲ್ಲಿ ಇರಾಕ್ ನ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರೋಧವಾಗಿದೆ ಎಂದಿದ್ದಾರೆ. ಅಧ್ಯಯನ ಮಾಡಲು ಹೆಚ್ಚಿನ ಸಮಯ ಬೇಕು. ಕಾನೂನು ದೊಡ್ಡ ರೀತಿಯಲ್ಲಿ ಬದಲಾಗಬೇಕು ಎಂದಿದ್ದಾರೆ. ಬುಶ್ ಸರ್ಕಾರದ ಕೈಗೊಂಬೆ ಪಕ್ಷಗಳ ಸದಸ್ಯರ ಅಭಿಪ್ರಾಯ ಇದಾದರೆ, ಇನ್ನು ಬುಶ್ ಸರ್ಕಾರದ ತೀವ್ರ ವಿರೋಧಿಗಳಾಗಿರುವ ಪಕ್ಷಗಳು ಮತ್ತು ಬಹುಸಂಖ್ಯಾತ ಬೆಂಬಲಿಗರ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ಇದು ಬುಶ್ ಸರ್ಕಾರಕ್ಕೆ ನುಂಗಲಾರದ ತುತ್ತಾಗಿದೆ.

ತೈಲ ಕಾನೂನನ್ನು ಪಾರ್ಲಿಮೆಂಟಿನಿಂದ ಮಂಜೂರು ಮಾಡಿಸುವುದು ಬುಶ್ ಸರ್ಕಾರದ ಪ್ರಸಕ್ತ ಇರಾಕ್ ರಣನೀತಿಯ ಮಹತ್ವದ ಭಾಗ. ಇರಾಕ್ ನ ಹಲವು ಇಸ್ಲಾಮಿಕ್ ಪಂಥ (ಶೀಯಾ, ಸುನ್ನಿ ಇತ್ಯಾದಿ) ಮತ್ತು ಜನಾಂಗೀಯ ಗುಂಪು (ಉದಾ: ಕುರ್ದಿಶ್) ಗಳ ಕೆಲವು ನಾಯಕರ ಬೆಂಬಲವನ್ನು ಅಮೆರಿಕನ್ ಸರ್ಕಾರ ಪಡೆದಿದ್ದು, ತೈಲ ಆದಾಯದಿಂದ ಪಾಲು ಕೊಡುವ ಭರವಸೆ ಮೇಲೆ. ಮೊದಲು ಅಮೆರಿಕದ ಕಂಪನಿಗಳಿಗೆ ಇರಾಕ್ ತೈಲ ಸಂಪತ್ತು ವರ್ಗಾಯಿಸಿ, ಆ ಮೇಲೆ ಅಮೆರಿಕನ್ ಕಾನೂನು ಒಂದರ ಮೂಲಕ ಇಸ್ಲಾಮಿಕ್ ಮತ್ತು ಜನಾಂಗೀಯ ಗುಂಪು ಗಳಿಗೆ ಪಾಲು ಕೊಡಲಾಗುವುದು ಎಂದು ಹೇಳಲಾಗಿತ್ತು. ಅಮೆರಿಕನ್ ಸರ್ಕಾರದ ಭರವಸೆಗಳ ರುಚಿ ಕಂಡಿರುವ ಈ ಲಾಭಕೋರ ಬಾಲಬಡುಕರೂ ಕೂಡ, ಮೊದಲು ಅಮೆರಿಕನ್ ಕಾನೂನು ಮಾಡಿ ಎಂದು ಪಟ್ಟು ಹಿಡಿದಿದ್ದಾರೆ.

ತೈಲ ಕಾನೂನು ಮಂಜೂರು ಮಾಡಿಸುವುದು ಮತ್ತು ಇರಾಕ್ ಗೆ ಕಳಿಸಿರುವ ಹೆಚ್ಚಿನ ಸೈನ್ಯ ಬಳಸಿ 'ಶಾಂತಿ ಮತ್ತು ವ್ಯವಸ್ಥೆ' ಸ್ಥಾಪಿಸುವುದು - ಈ ಎರಡು ಗುರಿಗಳು ಸೆಪ್ಟೆಂಬರ್ ಮಧ್ಯದೊಳಗೆ ಈಡೇರುವುದು. ಆ ಮೇಲೆ ಅಮೆರಿಕನ್ ಸೈನ್ಯ ವಾಪಸಾತಿಗೆ ನಿರ್ದಿಷ್ಟ ಯೋಜನೆ ಮಾಡಲಾಗುವುದು. ಇದು ಅಮೆರಿಕನ್ ಸೈನ್ಯ ತಕ್ಷಣ ವಾಪಸಾತಿಗೆ ಸೆನೆಟ್ ನಲ್ಲಿ ಒತ್ತಡದಿಂದ ತಪ್ಪಿಸಿಕೊಳ್ಳಲು, ಬುಶ್ ಸರ್ಕಾರ ಕೊಟ್ಟಿದ್ದ ಯೋಜನೆ. ಹೆಚ್ಚಿನ ಸೈನ್ಯ ಬಳಸಿದ ಮೇಲೂ ಇರಾಕ್ ನಲ್ಲಿ 'ಶಾಂತಿ ಮತ್ತು ವ್ಯವಸ್ಥೆ' ಒಂದು ಇಂಚಿನಷ್ಟೂ ಸುಧಾರಿಸಿಲ್ಲ. ಬದಲಾಗಿ ಇನ್ನಷ್ಟು ಹದಗೆಟ್ಟಿದೆ. ಸೆಪ್ಟೆಂಬರ್ ಮಧ್ಯದಲ್ಲಿ ಬುಶ್ ಸರ್ಕಾರ ಈ ಎರಡು ಗುರಿಗಳ ಸಾಧನೆಯಲ್ಲಿ ಪ್ರಗತಿ ಬಗ್ಗೆ ವರದಿ ಮಾಡಬೇಕು. ಇರಾಕ್ ಪಾರ್ಲಿಮೆಂಟು ಎರಡು ತಿಂಗಳು ರಜೆಯಲ್ಲಿದ್ದು, ತೈಲ ಕಾನೂನು ಮಂಜೂರು ಆಗುವ ಪ್ರಶ್ನೆಯೇ ಇಲ್ಲ. 'ಶಾಂತಿ ಮತ್ತು ವ್ಯವಸ್ಥೆ' ಸ್ಥಿತಿ ಇನ್ನಷ್ಟೂ ಹದಗೆಡುವ ಎಲ್ಲಾ ಸೂಚನೆಗಳಿವೆ. ಈ ಹಿನ್ನೆಲೆಯಲ್ಲಿ ಈ ಎರಡೂ ಗುರಿಗಳು ಈಡೇರುವಂಥದ್ದಲ್ಲ. ಅಮೆರಿಕನ್ ಸೈನ್ಯ ತಕ್ಷಣ ವಾಪಸಾತಿ ಆಗಬೇಕು ಎಂದು ಡೆಮೊಕ್ರಾಟ್ ಸದಸ್ಯರು ಮತ್ತು ಇತರ ಯುದ್ಧವಿರೋಧಿಗಳು ಭಾರೀ ಒತ್ತಡ ಹೇರುವ ಸಾಧ್ಯತೆ ಇದೆ. ಅಧ್ಯಕ್ಷೀಯ ಚುನಾವಣೆ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಒತ್ತಡದಿಂದ ಆಳುವ ರಿಪಬ್ಲಿಕನ್ ಸದಸ್ಯರೂ ಇದರಲ್ಲಿ ಸೇರಬಹುದು. ಬುಶ್ ಮತ್ತು ಅಮೆರಿಕನ್ ಸರ್ಕಾರ ಇನ್ನೊಂದು 'ವಿಯೇಟ್ನಾಂ ಮುಖಭಂಗ'ದ ಹೊಸ್ತಿಲಲ್ಲಿ ಇದೆಯೆ ? ಕಾದು ನೋಡಬೇಕು.

ನೇಪಾಳದಲ್ಲಿ ಶಾಂತಿಯುತ ಬದಲಾವಣೆಗಳಿಗೆ ವಿಘ್ನಗಳು

ನೇಪಾಳದ ಜನತೆಯ ಎಲ್ಲಾ ಜನ ವಿಭಾಗಗಳ ಆಶೋತ್ತರಗಳನ್ನು ಈಡೇರಿಸುವ ಜನಪರ ಶಾಂತಿಯುತ ಬದಲಾವಣೆಗಳಿಗೆ ಹಲವು ವಿಘ್ನಗಳು ಕಾಣಿಸಿಕೊಳ್ಳಲಾರಂಭಿಸಿವೆ. ರಾಜನ ಸರ್ವಾಧಿಕಾರವನ್ನು ಸೋಲಿಸಿದ್ದು, ಮಾವೋವಾದಿಗಳನ್ನು ರಾಜಕೀಯ ಮುಖ್ಯಧಾರೆಗೆ ಕರೆತಂದಿದ್ದು, ನವಂಬರ್ ನಲ್ಲಿ ಸಂವೈಧಾನಿಕ ಸಭೆಗೆ ಚುನಾವಣೆ ಘೋಷಣೆ - ಈ ಪ್ರಜಾಸತ್ತಾತ್ಮಕ ಕ್ರಾಂತಿಯ ಸಾಧನೆಗಳು. ಈ ಸಾಧನೆಗಳನ್ನು ಕಾಪಾಡಿಕೊಳ್ಳುತ್ತಲೇ ಅದನ್ನು ಮುಂದಿನ ಹಂತಕ್ಕೆ ಒಯ್ಯುವುದರಲ್ಲಿ ಸಮಸ್ಯೆಗಳು ಉದ್ಭವಿಸಿವೆ. ತೆರಾಯ್ ಪ್ರದೇಶ ದಲ್ಲಿ ಮಾದೇಶಿಗಳು ಎಂದು ಕರೆಯಲಾಗುವ ಹಿಂದಿ ಮಾತನಾಡುವ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡಲು ಹೊಸ ನೇಪಾಳೀ ಸಂವಿಧಾನದಲ್ಲಿ ಭರವಸೆಗಳಿಗೆ ಒತ್ತಾಯ ಮಾಡಲು ಚಳುವಳಿ ಆರಂಭಿಸಿದ್ದಾರೆ. ಪ್ರಬುದ್ಧ ರಾಜಕೀಯ ನಾಯಕತ್ವದ ಕೊರತೆಯಿಂದಾಗಿ ಈ ಚಳುವಳಿ ಹಿಂಸಾತ್ಮಕ ರೂಪ ತಾಳಿ, ವ್ಯಾಪಕ ಅರಾಜಕತೆ ಉಂಟು ಮಾಡಿ ನವೆಂಬರ್ ಚುನಾವಣೆಗಳ ನಡೆಯುವ ಬಗ್ಗೆ ಅನುಮಾನ ಮೂಡಿಸಿದ್ದು ಇವುಗಳಲ್ಲಿ ಪ್ರಮುಖವಾದ್ದು.

ನವೆಂಬರ್ ಚುನಾವಣೆಗಳು ನಡೆಯದಂತೆ ಮಾಡುವುದರಲ್ಲಿ ಆಸಕ್ತಿ ಇರುವ ರಾಜ, ಆತನನ್ನು ಬೆಂಬಲಿಸುವ ರಾಜಕೀಯ ಪಕ್ಷಗಳು/ಶಕ್ತಿಗಳು ಮತ್ತು ವಿದೇಶಿ ಸಾಮ್ರಾಜ್ಯಶಾಹಿ ಈ ಸಮಸ್ಯೆಯನ್ನು ಉಲ್ಬಣಗೊಳಿಸುವಲ್ಲಿ, ದುರ್ಬಳಕೆ ಮಾಡುವಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ ಎಂಬ ಬಗ್ಗೆ ಯಾವುದೇ ಸಂಶಯವಿಲ್ಲ. ಆದರೆ ಎಂಟು ಪಕ್ಷಗಳ ಸರ್ಕಾರ ಮತ್ತು ಅದರ ಅಂಗಪಕ್ಷಗಳು ಐಕ್ಯತೆ, ಪ್ರಬುದ್ಧತತೆ, ದೃಢ ಮನಸ್ಸಿನಿಂದ ಈ ಸಮಸ್ಯೆಯನ್ನು ಎದುರಿಸಿಲ್ಲ. ಪರಿಹರಿಸಲು ಪ್ರಯತ್ನಿಸಿಲ್ಲ. ಮುಖ್ಯವಾಗಿ ನೇಪಾಳೀ ಕಾಂಗ್ರೆಸ್ ಮತ್ತು ಮಾವೋವಾದಿ ಪಕ್ಷದ ಬಣಗಳಲ್ಲಿ - ಆಂತರಿಕ ಭಿನ್ನಾಭಿಪ್ರಾಯ, ಇದನ್ನು ಇತರ ರಾಜಕೀಯ ಪಕ್ಷಗಳ ವಿರುದ್ಧ ಬಳಸುವ ಚಪಲ - ಇವುಗಳಿಂದಾಗಿ ಸಮಸ್ಯೆ ತೀವ್ರ ಸ್ವರೂಪ ತಾಳಿದೆ.

ತೀವ್ರವಾಗಿ ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ತಮ್ಮ ರಾಜಕೀಯ ಬಲಾಬಲ ಹೇಗಿರುವುದೋ ಎಂಬ ಬಗ್ಗೆ ಅನುಮಾನ ಇರುವ ರಾಜಕೀಯ ಪಕ್ಷಗಳು ನವೆಂಬರ್ ಚುನಾವಣೆಗಳು ಮುಂದಕ್ಕೆ ಹೋದರೆ ತಮ್ಮ ಬಲ ಹೆಚ್ಚಿಸಲು ಸಮಯ ಸಿಗಬಹುದೋ ಎಂದು ಬಯಸುತ್ತಿರುವಂತಿದೆ. ಮಾವೋವಾದಿ ಪಕ್ಷದ ಕೆಲವು ಬಣಗಳು ತಮ್ಮ ಹಳೆಯ ನೀತಿ ಬಿಟ್ಟುಕೊಡದೆ, ಹಿಂಸಾತ್ಮಕ ಚಟುವಟಿಕೆ ಮುಂದುವರೆಸಿದ್ದು ಇನ್ನಷ್ಟು ಸಂಕೀರ್ಣತೆಗೆ ಕಾರಣವಾಗಿದೆ. ಮಾವೋವಾದಿ ಪಕ್ಷವನ್ನು ರಾಜಕೀಯದಿಂದ ಹೊರಗಿಡಲು ಬಯಸುವ ರಾಜಕೀಯ ಶಕ್ತಿಗಳು ಈ ಪರಿಸ್ಥಿತಿಯ ಲಾಭ ಪಡೆಯಲು ಪ್ರಯತ್ನಿಸುತ್ತಿವೆ. ಶಾಂತಿಯುತ ಮತ್ತು ನ್ಯಾಯಯುತ ಸಂವೈಧಾನಿಕ ಸಭೆ ಚುನಾವಣೆಗಳು ನಡೆಯುವಂತಹ ಪರಿಸ್ಥಿತಿ ನಿರ್ಮಾಣ ಮಾಡಲು ನೇಪಾಳದ ಜನತೆ ರಾಜಕೀಯ ಒತ್ತಡ ಹಾಕುತ್ತಾರ್ ಎಂದು ಆಶಿಸಬೇಕಾಗಿದೆ.

ಜಸ್ಟಿಸ್ ರಾಜೇಂದ್ರ ಸಾಚರ್‌ರವರ ನೇತೃತ್ವದ 7 ಮಂದಿಯನ್ನೊಳಗೊಂಡ ಸಮಿತಿಯು ಮುಸ್ಲಿಂ ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ ಪ್ರಧಾನ ಮಂತ್ರಿಗಳಿಗೆ ನವೆಂಬರ್ 2006 ರಂದು ವರದಿ ಸಲ್ಲಿಸಿದೆ. ಇದು ಮುಸ್ಲಿಮರ ಹಿಂದಿರುವಿಕೆಯ ಅಗಾಧತೆಯನ್ನು ಗುರುತಿಸಿದೆ. ಅದನ್ನು ಸರಿಪಡಿಸಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ವಿವರವಾದ ಶಿಫಾರಸ್ಸುಗಳನ್ನು ಮಾಡಿದೆ. ವರದಿ ಸಲ್ಲಿಸಿ 8 ತಿಂಗಳು ಕಳೆದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವರದಿಯ ಶಿಫಾರಸ್ಸುಗಳ ಜಾರಿಗೆ ಮುಂದಾಗಿಲ್ಲ. ಈ ಸಂಬಂಧ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯು ಜುಲೈ 28, 2007 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಿತ್ತು. ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಕಾಂ: ಪ್ರಕಾಶ್ ಕಾರಟ್ ಸಮಾವೇಶವನ್ನು ಉದ್ಘಾಟಿಸಿದರು. 15 ಜಿಲ್ಲೆಗಳ 400 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮಾವೇಶದ ವರದಿ ಇಲ್ಲಿದೆ.

‘ಮುಸ್ಲಿಮರಿಗೆ ನ್ಯಾಯಬದ್ಧ ಪಾಲು ಸಿಗಲಿ’

ಮುಸ್ಲಿಮರ ಕುರಿತ ಸಾಚಾರ್ ವರದಿ ಜಾರಿಗೆ ರಾಜ್ಯಮಟ್ಟದ ಸಮಾವೇಶ ಒತ್ತಾಯ

ಸಾಚಾರ್ ಸಮಿತಿ ವರದಿ ಸಲ್ಲಿಸಿ 8 ತಿಂಗಳು ಕಳೆದರೂ ಕೇಂದ್ರ ಸರ್ಕಾರ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು.ಮುಂದಾಗುತ್ತಿಲ್ಲ. ಅಲ್ಲದೆ ಆ ವರದಿಯ ಬಗ್ಗೆ ಲೋಕಸಭೆಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸುತ್ತಿಲ್ಲ. ಈ ಕೂಡಲೇ ಲೋಕಸಭೆಯಲ್ಲಿ ಚರ್ಚೆಗೆ ಮುಂದಾಗಬೇಕೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ: ಪ್ರಕಾಶ್ ಕಾರಟ್ ಆಗ್ರಹಿಸಿದರು. ಅವರು ಬೆಂಗಳೂರಿನಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಆಯೋಜಿಸಿದ್ದ ಸಾಚಾರ್ ಸಮಿತಿ ವರದಿ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕೇಂದ್ರ ಸರ್ಕಾರ ಈ ವರದಿ ಆಧಾರದಲ್ಲಿ ಕ್ರಮ ವಹಿಸುವುದಾಗಿ ಆಶ್ವಾಸನೆ ನೀಡಿದ್ದರೂ ಏನೇನೂ ಕ್ರಮ ವಹಿಸಿಲ್ಲವೆಂದು ಅವರು ಟೀಕಿಸಿದರು. ಹೆಚ್ಚಿನ ಬಡವರಿರುವ ಮತ್ತು ಶೋಷಿತರಿರುವ ಮುಸ್ಲಿಂ ಸಮುದಾಯುವನ್ನು ಕಡೆಗಣಿಸಿದರೆ ಸಮಾನತೆಯ ಬೆಳವಣಿಗೆ ಸಾಧಿಸಲಾಗದೆಂದರು. ಶೇ.25 ರಷ್ಟು ಅಶಿಕ್ಷಿತ ಮಕ್ಕಳು ಇರುವ ಮುಸ್ಲಿಂ ಸಮುದಾಯದ ಶಿಕ್ಷಣಕ್ಕೆ ಅನುಕೂಲಕರವಾದ ವಾತಾವರಣ ನಿರ್ಮಿಸಬೇಕು. ಎಲ್ಲಾ ಹಂತಗಳಲ್ಲಿ ಸರ್ಕಾರ ಶಾಲಾ ಕಾಲೇಜುಗಳು, ಅದಕ್ಕೆ ಹೊಂದಿಕೊಂಡ ಹಾಸ್ಟೆಲ್ ಆರಂಭಿಸಬೇಕೆಂದರು. ಸದಾ ಅಭದ್ರತೆಯ ನಡುವೆ ಮುಸ್ಲಿಮರು ಬದುಕುತ್ತಿದ್ದಾರೆಂದ ಅವರು ಮಹಾರಾಷ್ಟ್ರ ಸರ್ಕಾರದ ಶ್ರೀಕೃಷ್ಣ ಕಮೀಷನ್ ವರದಿಯ ಬಗ್ಗೆ ಕ್ರಮ ವಹಿಸಿಲ್ಲ, ಗುಜರಾತ್ ದಂಗೆಗಳು ಮುಸ್ಲಿಮರ ನಡುವೆ ಆತಂಕ ಅಭದ್ರತೆಯನ್ನು ಹೆಚ್ಚಿಸಿದೆ, ನಾವು ಮತ್ತು ಸರ್ಕಾರಗಳು ಇದನ್ನು ದೂರ ಮಾಡಲು ಮುಂದಾಗಬೇಕೆಂದರು.

ದೇಶದ 90 ಜಿಲ್ಲೆಗಳಲ್ಲಿ ಅಧಿಕವಾಗಿರುವ ಮುಸ್ಲಿಮರನ್ನು ಮುಖ್ಯವಾಹಿನಿಗೆ ತರಲು ಅವರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಸ್ಥಿತಿಗತಿಗಳ ಬಗ್ಗೆ ಜನ ಸಾಮಾನ್ಯರಿಗೆ ತಿಳಿಸುವುದು ಅಗತ್ಯವೆಂದರು. ಇದನ್ನು ಒಂದು ಸಾಮಾಜಿಕ ನ್ಯಾಯದ ಭಾಗವಾಗಿ ಕಾಣಬೇಕಾಗಿದೆ ಎಂದು ಕಾಂ: ಕಾರಟ್ ಅಭಿಪ್ರಾಯಪಟ್ಟರು. ಈ ಬಗ್ಗೆ ಜನಾಭಿಪ್ರಾಯ ರೂಪಿಸಬೇಕಾಗಿದೆ ಎಂದರು. ಈ ವರದಿ ಮುಸ್ಲಿಮರ ತುಷ್ಟೀಕರಣವೆಂದು ಕಿಡಿಕಾರುವ ಕೇಸರಿ ಪಡೆಯ ಪ್ರಚಾರ ಸತ್ಯಕ್ಕೆ ದೂರವಾದುದು ಎಂದರು.

ಸಾಚಾರ್ ಸಮಿತಿ ವರದಿ ನಂತರ ಪಶ್ಚಿಮ ಬಂಗಾಳ ಸರ್ಕಾರ ಮುಂದಿನ ಬಡ್ಜೆಟ್‌ನಲ್ಲಿ ಮುಸ್ಲಿಂ ಉಪ ಯೋಜನೆಯನ್ನು ಜಾರಿ ಮಾಡಲಿದೆ. ಆ ಮೂಲಕ ಇತರ ರಾಜ್ಯಗಳಿಗೂ ಕೇಂದ್ರಕ್ಕೂ ಸಿಪಿಐ(ಎಂ) ಒತ್ತಡ ಹಾಕಿ ಉಪಯೋಜನೆಗಾಗಿ ಹೋರಾಡಲಿದೆ ಎಂದ ಪ್ರಕಾಶ್ ಕಾರಟ್‌ರವರು ಇದರಲ್ಲಿ ಕರ್ನಾಟಕದ ಮುಸ್ಲಿಮರು ಸಿಪಿಐ(ಎಂ) ಜೊತೆ ಕೈಜೋಡಿಸುವಂತೆ ಕೋರಿದರು.

ಕರ್ನಾಟಕದಲ್ಲಿ ಮುಸ್ಲಿಮರ ಸ್ಥಿತಿಗತಿಗಳ ಕುರಿತ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಕಾಂ: ಅಮಾನುಲ್ಲಾ ಅವರು, ಮುಸ್ಲಿಮರ ಸ್ಥಿತಿಗತಿಗಳನ್ನು ಅಂಕಿ ಅಂಶಗಳ ಸಮೇತ ವಿವರಿಸಿದರು. ರಾಜ್ಯದಲ್ಲಿ



ಬಿಜೆಪಿ, ಜೆಡಿ(ಎಸ್) ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೋಮುಗಲಭೆಗಳನ್ನು ಹುಟ್ಟು ಹಾಕಲಾಗುತ್ತಿರುವ ಬಗೆಗೆ ಆತಂಕ ವ್ಯಕ್ತಪಡಿಸಿದರು. ಪ್ರತಿದಿನ ಭಾರತೀಯ ಮುಸ್ಲಿಮನು ತಾನು ಭಾರತೀಯನೆಂದು ಸಾಬೀತುಪಡಿಸುವ ಸ್ಥಿತಿ ಇದೆ ಎಂದು ವಿಷಾದಿಸಿದರು.


ಸವತಿ ಮಕ್ಕಳಂತೆ ಕಾಡಬೇಡವ್ವಾ....

ಸಮಾವೇಶದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್‌ರವರು ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ, ಭಾರತದಲ್ಲಿ ಮುಸ್ಲಿಮರ ಸ್ಥಿತಿಯ ಕುರಿತು ಕನ್ನಡದ ಹಿರಿಯ ಕವಿ ಶ್ರೀ ನಿಸಾರ್ ಅಹಮದ್‌ರವರ ಕನವದ ಸಾಲುಗಳನ್ನು ‘ಸವತಿ ಮಕ್ಕಳಂತೆ ಕಾಡಬೇಡವ್ವಾ... ನಿಮ್ಮೊಡನಿದ್ದು ನಿಮ್ಮಂತಾಗದೆ...’ ಉದಾಹರಿಸಿ ಮಾತನಾಡಿದರು. ಮುಸ್ಲಿಮರು ಸಣ್ಣ ಪುಟ್ಟ ವ್ಯಾಪಾರಿಗಳಿದ್ದು ಅವರಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ದೊರೆಯುವಂತಾಗಬೇಕೆಂದರು. ಹಾಲಿ ಬಹುಪಾಲು ದುಡಿಮೆ ಬಡ್ಡಿ ವ್ಯವಹಾರಸ್ಥರ ಪಾಲಾಗುತ್ತಿದೆಯೆಂದು ವಿಷಾದಿಸಿದರು. ಉರ್ದು ಭಾಷೆ ಉಳಿಸಲು ಅಕಾಡೆಮಿಗೆ ಹೆಚ್ಚಿನ ಅನುದಾನಕ್ಕೆ ಒತ್ತಾಯಿಸಿದರು.

ಸಿಪಿಐ(ಎಂ) ಶಾಸಕರಾದ ಕಾಂ: ಜಿ.ವಿ. ಶ್ರೀರಾಮರೆಡ್ಡಿ ಅವರು ಮಾತನಾಡಿ ಮುಸ್ಲಿಮರನ್ನು 2ನೇ ದರ್ಜೆ ನಾಗರೀಕರಂತೆ ಎಲ್ಲಾ ರಂಗಗಳಲ್ಲಿ ಕಾಣಲಾಗುತ್ತಿದೆ. ಮುಸ್ಲಿಮರನ್ನೆಲ್ಲಾ ಭಯೋತ್ಪಾದಕರೆಂದು ಬಿಂಬಿಸಲಾಗುತ್ತಿದೆ. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆಯ ಸಂದರ್ಭ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಾಣತೆತ್ತ ಮುಸ್ಲಿಮರನ್ನು ಸ್ಮರಿಸಬೇಕಾಗಿದೆ. ಮುಸ್ಲಿಮರನ್ನು ಮತ ಬ್ಯಾಂಕುಗಳಾಗಿ ಬಳಸಲಾಗುತ್ತಿದೆ. ಮುಸ್ಲಿಂ ಸಮುದಾಯದ ಒಟ್ಟಾರೆ ಪ್ರಗತಿಗೆ ಅವರ ನಡುವಿನ ನಾಯಕತ್ವ ಬದ್ಧತೆಯಿಂದ ದುಡಿದಿಲ್ಲವೆಂದು ಟೀಕಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ: ಮಾರುತಿ ಮಾನ್ಪಡೆಯವರು ಮಾತನಾಡಿ, ಇಂದು ಭಾರತದಲ್ಲಿ ಶೇ.40 ರಷ್ಟು ಜನರ ಆಹಾರ ಪದ್ಧತಿಯಾದ ಮಾಂಸಾಹಾರ ಮೇಲೆ ದಾಳಿಗಳಾಗುತ್ತಿವೆ. ‘ಗೋಮಾಂಸ’ದ ಹೆಸರಿನಲ್ಲಿ ಮುಸ್ಲಿಮರ ಮೇಲೆ ದಬ್ಬಾಳಿಕೆಗಳಾಗುತ್ತಿವೆ ಎಂದ ಅವರು ಇದನ್ನೇ ದಂಗೆ ಸೃಷ್ಟಿಸಲು ಕಾರಣವಾಗಿಸುವ ಕೇಸರಿ ಪಡೆಗಳ ಪುಂಡಾಟಿಕೆಯನ್ನು ಖಂಡಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಸಿಐಟಿಯು ನ ಅಖಿಲ ಭಾರತ ಉಪಾಧ್ಯಕ್ಷರೂ ಆದ ಕಾಂ: ವಿ.ಜೆ.ಕೆ.ನಾಯರ್‌ರವರು ಉಪಸ್ಥಿತರಿದ್ದರು. ಅಲ್ಪಸಂಖ್ಯಾತ ಮುಸ್ಲಿಂ ಉಪ ಸಮಿತಿಯ ಸಂಚಾಲಕರಾದ ಕಾಂ:ಸೈಯದ್ ಮುಜೀಬ್‌ರವರು ಸಮಾವೇಶದ ಬೇಡಿಕೆಗಳಾಧಾರದಲ್ಲಿ ರೂಪಿಸಲಾದ ರಾಜ್ಯ ಬೇಡಿಕೆಗಳನ್ನು ಸಮಾವೇಶದ ಮುಂದಿಟ್ಟರು. ಶಿಕ್ಷಣ, ಅಭಿವೃದ್ಧಿ, ಉದ್ಯೋಗ ಭದ್ರತೆಯ ಆಧಾರದಲ್ಲಿ ರೂಪಿಸಲಾದ ಬೇಡಿಕೆಗಳಲ್ಲಿ, ಬೆಂಗಳೂರು-ಮಂಗಳೂರು ಕೋಮು ಗಲಭೆಗಳ ಕಾರಣಕರ್ತರ ಮೇಲೆ ಉಗ್ರಕ್ರಮ, ಎಲ್ಲಾ ಹಂತಗಳ ಹುದ್ದೆಗಳಲ್ಲಿ ಮುಸ್ಲಿಂ ಜನಸಂಖ್ಯೆಗೆ ಅನುಗುಣವಾದ ನೇಮಕಾತಿ, ಉದ್ಯೋಗ ಸಂಬಂಧ ಎಲ್ಲಾ ಸರ್ಕಾರಿ ನಿಗಮ ಮಂಡಳಿಗಳ ನೇಮಕಾತಿಗಳಲ್ಲಿ ಹಾನಿ ಮುಸ್ಲಿಮರಿಗಿರುವ ಶೇ. 4 ರಷ್ಟು ಮೀಸಲಾತಿಯ ಕಡ್ಡಾಯ ಜಾರಿಗೆ ಒತ್ತಾಯಿಸಲಾಯಿತು. ಆಯವ್ಯಯದ (ರಾಜ್ಯ ಸರ್ಕಾರ) ಶೇ.12.5 ರಷ್ಟು ಹಣವನ್ನು ಮುಸ್ಲಿಂ ಉಪಯೋಜನೆಗೆ ಮೀಸಲಿಡಬೇಕೆಂದು, ತಲ್ಲಾಕ್ ನೀಡಲಾಗಿರುವ ಮಹಿಳೆಯರಿಗೆ ರೂ.500 ತಿಂಗಳಿಗೆ ನೀಡಬೇಕೆಂದು



ಒತ್ತಾಯಿಸಲಾಯಿತು.

ಈ ಬಗ್ಗೆ ರಾಜ್ಯದ 15 ಜಿಲ್ಲೆಗಳಿಂದ ಬಂದ ಪ್ರತಿನಿಧಿಗಳು ತಮ್ಮ ಜಿಲ್ಲೆಗಳ ಪರಿಸ್ಥಿತಿ ವಿವರಿಸಿ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿದರು. ಮಂಗಳೂರಿನ ಮುನೀರ್ ಕಾಟಿಪಳ್ಳ, ರಾಯಚೂರಿನ ಷೇಕ್ ಷಾ ಖಾದ್ರಿ, ಕೋಲಾರದ ಅಕ್ರಂ, ತುಮಕೂರಿನ ಶ್ರೀಮತಿ ಸಾಹಿದ ಬೇಗಂ, ಸೈಯ್ಯದ್ ಅಲ್ತಾಫ್, ಗುಲ್ಬರ್ಗಾದ ಮಂಜೂರ್ ಪಾಟೀಲ್, ಹರಿಹರದ ಉಬೇದುಲ್ಲಾ ಮತ್ತಿತರರು ಮಾತನಾಡಿದರು.

ಸಾಚಾರ್ ಸಮಿತಿಯ ವರದಿ ಜಾರಿಗಾಗಿ ಮುಂದಿನ ದಿನಗಳಲ್ಲಿ ಜಿಲ್ಲಾ ಸಮಾವೇಶಗಳು ಹಾಗೂ ಅಗತ್ಯವಿದ್ದಾಗ ಹೋರಾಟಗಳನ್ನು ನಡೆಸುವ ನಿರ್ಣಯದೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಶಮೀಮ ಮುಜೀಬ್
ತುಮಕೂರು

‘ಸರ್ಕಾರ ನಮಗೆ ದುಃಖ ಕೊಟ್ಟಿದೆ. ನಾವು ನಮ್ಮ ಹಕ್ಕುಗಳಿಗೆ ಹೋರಾಡುತ್ತೇವೆ’

ಸಹೀದಾ, ತುಮಕೂರು

‘ಸಂಘ ಪರಿವಾರದ ದಬ್ಬಾಳಿಕೆ, ಭೂಮಿ ನಿರಾಕರಿಸಲ್ಪಟ್ಟ ಗ್ರಾಮಾಂತರ ಮುಸ್ಲಿಮರ ಸಂಖ್ಯೆ ದಕ್ಷಿಣ ಕನ್ನಡದಲ್ಲಿ ಹೆಚ್ಚು. ಸಣ್ಣ ವ್ಯಾಪಾರ, ವರದಕ್ಷಿಣೆ ಪೆಡಂಭೂತ ಅಭದ್ರತೆಯಲ್ಲಿ ಬದುಕು ಸಾಗಿದೆ. ಆದರೂ ಕೇಸರಿ ಪಡೆಯಿಂದ ಜಿಲ್ಲಾ ಆರ್ಥಿಕತೆ ನಿಯಂತ್ರಿಸುತ್ತಾರೆಂಬ ಆರೋಪವಿದೆ’

ಮುನೀರ್ ಕಾಟಿಪಳ್ಳ, ಮಂಗಳೂರು

‘ಹಿಂದುಳಿವಿಕೆಗೆ ನಮ್ಮ ಸಮುದಾಯದವರೂ ಜವಾಬ್ದಾರರೇ ಕೆಲ ಪದ್ಧತಿಗಳು ಪ್ರವೃತ್ತಿಗಳು ಬದಲಾಗಬೇಕು. ವೃತ್ತಿ ಆಧಾರಿತ ಮೀಸಲಾತಿ (ಮುಸ್ಲಿಂ) ಒಳ ಪಂಗಡಗಳಿಗೆ ಸಿಕ್ಕುತ್ತಿಲ್ಲ’

ಅಕ್ರಂ, ಕೋಲಾರ

‘ಹೈಸ್ಕೂಲ್ ಶಿಕ್ಷಣವು ಉರ್ದುವಿನಲ್ಲಿರಲಿ. ಹೆಚ್ಚು ಉರ್ದು ಹೈಸ್ಕೂಲ್‌ಗಳು ಬೇಕು. ಇದು ಡ್ರಾಪ್ ಔಟ್ ಕಡಿಮೆ ಮಾಡುತ್ತದೆ. ಚುನಾವಣೆಗಳಲ್ಲಿ ಮುಸ್ಲಿಮರು ಹೆಚ್ಚಿರುವ ಕಡೆ ಅವರು ಸ್ಪರ್ಧಿಸದಂತೆ ಮಾಡುವ ಕುತಂತ್ರ ನಡೆಯುತ್ತಿವೆ. ಇದು ಸರಿಯಲ್ಲ ಪೋಲಿಸ್ ಠಾಣೆಗಳು ವಸೂಲಾತಿ ಕೇಂದ್ರಗಳಾಗಿವೆ’

ಸೈಯದ್ ಅಲ್ತಾಫ್, ಕಾರ್ಯದರ್ಶಿ
ಕೊಳಗೇರಿ ನಿವಾಸಿಗಳ ಹಿತರಕ್ಷಣಾ ಸಮಿತಿ,
ತುಮಕೂರು

‘ಗಂಡ ತಲಾಕ್ ನೀಡಿ, ಒಬ್ಬಂಟಿಯಾಗಿರುವ ಮಹಿಳೆಯರಿಗೆ ಮಾಸಿಕ ರೂ.500 ನೀಡುವ ಯೋಜನೆಯನ್ನು ಸರ್ಕಾರ ರೂಪಿಸಬೇಕೆಂದು ಸಿಪಿಐ (ಎಂ) ಒತ್ತಾಯಿಸಿರುವುದು ನಿಜಕ್ಕೂ ಶ್ಲಾಘನೀಯ’

ಗೈಬು ಜೈನೆಖಾನ್,
ಬೆಳಗಾವಿ

‘ಸಿಪಿಐ(ಎಂ) ಮುಸ್ಲಿಮರ ನೈಜ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿರುವುದು ಸಂತೋಷಕರ. ನಾವು ನಿಮ್ಮೊಂದಿಗೆ ಇದ್ದೇವೆ. ಬೇರೆ ಬೇರೆ ರಾಜಕೀಯ ಪಕ್ಷಗಳು ನಮ್ಮನ್ನೂ ಬಳಸಿ ಬಿಸಾಕಿವೆ. ಬದಲಾವಣೆಗೆ ಕೆಲಸ ಮಾಡೋಣ’

ಮುಬಷರ್ ಅಹಮದ್, ಅಧ್ಯಕ್ಷರು,
ಅಜಾದ್ ಟಿಪ್ಪು ಸಂಘರ್ಷ ಸಮಿತಿ, ಹಾಸನ

JANASHAKTHI KANNADA VARA PATRIKE AUGUST 12 2007 Price : Rs. 5/- No. KARKAN /2006/17926 Postal Reg. No. RNP/KA/BGS/2078/2

ದುಃಖ, ದುಮ್ಮಾನ, ಸಂಕಷ್ಟಗಳ ಹುಡುಕಿ ಹೊರಟಾತನಿಗೆ ಹುಡುಕಿ ಬಂದಿದೆ ಪ್ರಶಸ್ತಿ

ಪಿ.ಸಾಯಿನಾಥ್‌ಗೆ ಮ್ಯಾಗ್ಸೆಸ್ಸೆ ಪ್ರಶಸ್ತಿ



ಮಾಧ್ಯಮ ಲೋಕದ ಭಿನ್ನ ಪಯಣಿಗನೆಂದೇ ಕರೆಯಲಾಗುವ ಪಾಲಗುಮ್ಮಿ ಸಾಯಿನಾಥ್‌ರಿಗೆ ಏಶಿಯಾದ ನೋಬೆಲ್ ಪ್ರಶಸ್ತಿ ಎಂದೇ ಕರೆಯಲಾಗುವ ರಾಮನ್ ಮ್ಯಾಗ್ಸೆಸ್ಸೆ ಪ್ರಶಸ್ತಿ 2007ನ್ನು ಪ್ರಕಟಿಸಲಾಗಿದೆ. ಈ ಮೂಲಕ ಅವರ ಸಾಧನೆ, ಪರಿಶ್ರಮ ವನ್ನು ಗೌರವಿಸಲಾಗಿದೆ.

ಜನಸಾಮಾನ್ಯರ ದುಗುಡ ದುಃಖ ದುಮ್ಮಾನ ಸಂಕಷ್ಟಗಳನ್ನೇ ಹುಡುಕಿ ಹೊರಟ ಸಾಯಿನಾಥ್‌ಗೆ ಪ್ರಶಸ್ತಿಗಳು ಹುಡುಕಿಕೊಂಡು ಬಂದಿರುವುದು ಹೊಸದೇನಲ್ಲ, ಹೆಗ್ಗಳಿಕೆಯೂ ಅಲ್ಲ.

50 ವಯಸ್ಸಿನ ಸಾಯಿನಾಥ್ ಸದ್ಯ 'ದಿ ಹಿಂದೂ' ಪತ್ರಿಕೆಯ ಗ್ರಾಮೀಣ ವಿದ್ಯಾಮಾನಗಳ ಸಂಪಾದಕರು.

ಬಹಳಷ್ಟು ಬರಹಗಾರರು ನಯವಾದ ರಸ್ತೆ, ಗಗನಚುಂಬಿ ಕಟ್ಟಡಗಳತ್ತ ಮುಖಮಾಡಿ ಹೊರಟಿದ್ದರೆ ಸಾಯಿನಾಥ್ ಭಾರತದ ಗ್ರಾಮಾಂತರದ ಕಲ್ಲುಮುಳ್ಳು ಹಾದಿಯತ್ತ ದೃಷ್ಟಿ ನೆಟ್ಟು ಹೆಜ್ಜೆ ಹಾಕಿದರು. ಕಂಡ ವಾಸ್ತವಗಳನ್ನು ಅದರಾಚೆಯ ಸತ್ಯಗಳನ್ನು ಗ್ರಹಿಸಿ ಲೋಕದೆದುರು ತೆರೆದಿಟ್ಟರು. ಬರವೆಂಬುದೂ ಕೂಡ ಹೇಗೆ ಶೋಷಕರಿಗೆ ಒಂದು ಆಹಾರ, ಅದೊಂದು ಲಾಭದಾಯಕ ದಂಧೆಯಾಗಿದೆ ಎಂಬುದನ್ನು ಬಯಲುಗೊಳಿಸಿದರು (ಅವರ ಪುಸ್ತಕ 'ಎವರಿಬಡಿ ಲವ್ಸ್ ಗುಡ್ ಡ್ರೌಟ್'- ಅಂದರೆ ಒಳ್ಳೆಯದೊಂದು ಬರವನ್ನು ಪ್ರತಿಯೊಬ್ಬರೂ ಪ್ರೀತಿಸುತ್ತಾರೆ) ಅನ್ಯಾಯಗಳನ್ನು ಎತ್ತಿ ತೋರಿಸಿದರು. ಅತ್ಯಂತ ಬಡ ಹಿಂದುಳಿದ ಜಿಲ್ಲೆಗಳ ಧಾರುಣ ಚಿತ್ರಗಳನ್ನು ಸಾಯಿನಾಥ್ ಹುಡುಕಿ ಹೆಕ್ಕಿ ತೆಗೆದಿದ್ದಾರೆ. ಈ ಧಾರುಣತೆ, ಜನರಲ್ಲಿನ ಬಡತನ, ಅನಕ್ಷರತೆ, ಜಾತಿ ತಾರತಮ್ಯಗಳು ಭಾರತದ ಅಸಮಾನ ರಚನೆಯಲ್ಲೇ ಅಡಗಿವೆ ಎಂಬುದನ್ನು ವಿಶ್ಲೇಷಣೆಯಿಂದ ಗುರುತಿಸಿದರು. ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಧಾಳಿ ಹೇಗೆ ಈ ಪರಿಸ್ಥಿತಿಯನ್ನು ಇನ್ನು ಭೀಕರಗೊಳಿಸುತ್ತಿದೆ ಎಂಬುದನ್ನು ತಿಳಿಸಿದರು. ಬರ, ದಲಿತರು, ಮಹಿಳೆಯರು, ಜಾತಿ, ಹಿಂಸೆ, ದಬ್ಬಾಳಿಕೆ, ಹಸಿವು, ಆಹಾರ, ನೀರು, ನಿರುದ್ಯೋಗ ಅಸಮಾನತೆ, ಮತ್ತು ಮಾಧ್ಯಮದ ಬೆಳವಣಿಗೆಗಳು ಅವುಗಳು ನಿರ್ವಹಿಸುತ್ತಿರುವ ಪಾತ್ರದ ವಿಷಯಗಳು ಅವರ ಅಧ್ಯಯನ, ನಿಖರ ಬದ್ಧತೆಯಲ್ಲಿನ ವಸ್ತುಗಳು.

ಸಾಯಿನಾಥ್ ಬರೀ ಬರಹಗಾರ ಮಾತ್ರವಲ್ಲ. ಅತ್ಯಂತ ಪರಿಣಾಮಕಾರಿ ಛಾಯಾಚಿತ್ರಕಾರರೂ ಹೌದು. ಅವರ ಛಾಯಾಚಿತ್ರಗಳು ದೇಶ ವಿದೇಶಗಳಲ್ಲಿಯೂ ಪ್ರದರ್ಶಿತವಾಗಿ ಪ್ರಶಂಸೆಗೆ ಒಳಗಾಗಿವೆ.

ಸಾಯಿನಾಥ್ ಕರ್ನಾಟಕದ ಉದ್ದಗಲಗಳಲ್ಲಿ ಓಡಾಡಿದ್ದಾರೆ. ಅಧ್ಯಯನ ನಡೆಸಿ ಲೇಖನಗಳನ್ನು ಬರೆದಿದ್ದಾರೆ. ಹೀಗಾಗಿ ಕರ್ನಾಟಕದೊಂದಿಗೆ ಅವರ ನಂಟು ನೆಚ್ಚು. ಈ ಪ್ರೀತಿಯಿಂದಲೇ ಗುಲ್ಬರ್ಗದಲ್ಲಿ 'ಜನಶಕ್ತಿ' ಪತ್ರಿಕೆಯ ವಾರದ ಸಂಚಿಕೆಯ ಉದ್ಘಾಟನೆಗೆ ಬನ್ನಿ ಎಂದಾಗ, ಮರು ಮಾ[...] ದಕ್ಷಿಣ ಆಫ್ರಿಕಾದಿಂದಲೇ 'ಹೂಂ' ಎಂದ[...] ಎಲ್ಲರೊಂದಿಗೆ ಬೆರೆತು, ಮಾತುಗಳ ಬೀ[...] ಹೋದರು.

ನಮ್ಮ ಸಾಯಿನಾಥ್‌ಗೆ ಬಂದ ಪ್ರಶಸ್ತಿ[...] ಸಂದರ್ಭ ಅಭಿನಂದಿಸಲು ನಮಗೆ ಒಂದ[...] ಮಾತ್ರ.



ಅದಿರಿನಿಂದ ಲೋಹಗಳನ್ನು ಬೇರ್ಪಡಿಸುವ ವಿಧಾನಗಳು

ಲೋಹಗಳು ಮಾನವಕೋಟಿಗೆ ಪ್ರಕೃತಿಯ ಅಮೂಲ್ಯ ಕೊಡುಗೆ ಮತ್ತು ನಾಗರೀಕತೆಯ ಬೆನ್ನೆಲುಬು. ಭೂಮಿಯಲ್ಲಿ ಅನೇಕ ಲೋಹಗಳಿವೆ. ಭೂಮಿಯ ಮೇಲ್ಪದರದಲ್ಲಿ ಶೇಕಡಾ 8 ಭಾಗ ಅಲ್ಯೂಮಿನಿಯಂ, ಶೇಕಡಾ 5 ಭಾಗ ಕಬ್ಬಿಣ ಮತ್ತು ಶೇಕಡಾ 4 ಭಾಗ ಕ್ಯಾಲ್ಸಿಯಂ ಇದೆಯೆಂದು ಹೇಳುತ್ತಾರೆ. ಚಿನ್ನ, ಸೀಸ ಮತ್ತು ಪಾದರಸ ಮುಂತಾದ ಭಾರವಾದ ಲೋಹಗಳು ಭೂಮಿಯ ಮೇಲ್ಪದರಕ್ಕಿಂತ ಹೆಚ್ಚಾಗಿ ಭೂಗರ್ಭದಲ್ಲಿ ದೊರಕುತ್ತವೆ.

ಲೋಹಗಳನ್ನು ಅದಿರಿನಿಂದ ಬೇರ್ಪಡಿಸುವ ವಿಧಾನದಿಂದ ಉದಯವಾದ 'ಲೋಹಯುಗ'ವು ನೂತನ ಶಿಲಾಯುಗದ ಮುಕ್ತಾಯಕ್ಕೆ ಕಾರಣವೆನ್ನಬಹುದು. ಆಧುನಿಕ ಲೋಹ ವಿಜ್ಞಾನದಲ್ಲಿ ಅದಿರಿನಿಂದ ಲೋಹವನ್ನು ಬೇರ್ಪಡಿಸಲು ಮತ್ತು ಅದನ್ನು ಶುದ್ದೀಕರಿಸಲು ಈ ಕೆಳಕಂಡ ವಿಧಾನಗಳನ್ನು ಉಪಯೋಗಿಸುತ್ತಾರೆ.

1. ಖನಿಜ ಪ್ರಸಾಧನ: ಈ ವಿಧಾನದಿಂದ ಲೋಹದ ಅದಿರಿನಲ್ಲಿರುವ ನಿಷ್ಪ್ರಯೋಜಕ ಪದಾರ್ಥಗಳನ್ನು ಬೇರ್ಪಡಿಸುತ್ತಾರೆ. ಮೊದಲು ಅದಿರನ್ನು ಪುಡಿ ಮಾಡಿ ಈ ಪುಡಿಯನ್ನು ನೀರಿಗೆ ಸೇರಿಸಿದಾಗ ಕಶ್ಮಲ ಮತ್ತು ನಿಷ್ಪ್ರಯೋಜಕ ವಸ್ತುಗಳು ತೇಲುತ್ತವೆ; ಇಲ್ಲವೆ ಗಾಳಿ ಅಥವಾ ಅನಿಲ ಗುಳ್ಳೆಗಳೊಡನೆ ನೀರಿನಲ್ಲಿ ಕೊಚ್ಚಿ ಹೋಗುತ್ತವೆ. ಅನೇಕ ರಾಸಾಯನಿಕ ವಸ್ತುಗಳು ಅಥವಾ ಎಣ್ಣೆಗಳು ಖನಿಜದ ಅಣುಗಳನ್ನು ಗುಳ್ಳೆ ಅಂಟಿಕೊಳ್ಳುವಂತೆ ಮಾಡುತ್ತವೆ.




2. ಹುರಿಯುವುದು: ಈ ವಿಧಾನವು ಅದಿರಿನಲ್ಲಿರುವ ಗಂಧಕ ಮತ್ತು ಇತರ ಕಲ್ಮಶಗಳನ್ನು ಬೇರ್ಪಡಿಸುತ್ತದೆ. ಅದಿರನ್ನು ಗಾಳಿಯಲ್ಲಿ ಹುರಿದಾಗ, ಗಂಧಕ ಮತ್ತು ಇತರ ಕಲ್ಮಶಗಳು ಗಾಳಿಯಲ್ಲಿನ ಆಮ್ಲಜನಕದೊಡನೆ ಸೇರಿ ಅನಿಲ ರೂಪದಲ್ಲಿ ಹೊರಗೆ ಹೋಗುತ್ತವೆ.

3. ಸಿಂಟರನ: ಖನಿಜದ ಅದಿರನ್ನು ಅಧಿಕ ಉಷ್ಣತೆಯಲ್ಲಿ ಹುರಿದಾಗ ಖಂಡ ದ್ರವೀಕರಣ ಅಥವಾ ಸಿಂಟರನ ಆಗುತ್ತದೆ. ಈ ವಿಧಾನವು ಅದಿರಿನ ಸಣ್ಣ ಕಣಗಳನ್ನು ಆಂಶಿಕವಾಗಿ ಕರಗಿಸುವುದರಿಂದ, ಅವು ಒಂದಕ್ಕೊಂದು ಅಂಟಿಕೊಂಡು ಒರಟು ಮುದ್ದೆಯಾಗುತ್ತವೆ. ಈ ಒರಟು ಮುದ್ದೆಗಳನ್ನು ಬೇರೆ ಬೇರೆ ವಿಧಾನಗಳಲ್ಲಿ ಲೋಹಗಳನ್ನು ಬೇರ್ಪಡಿಸಲು ಸುಲಭವಾಗಿ ಉಪಯೋಗಿಸಬಹುದು.

4. ಕರಗಿಸುವುದು: ಅದಿರುಗಳನ್ನು ಮೇಲೆ ತಿಳಿಸಿದ ಪ್ರಕ್ರಿಯೆಗಳಿಗೆ ಒಳಪಡಿಸಿದ ನಂತರ ಸಾಧಾರಣವಾಗಿ ಈ ವಿಧಾನವನ್ನು ಬಳಸುತ್ತಾರೆ. ಇದರಲ್ಲಿ ಅದಿರನ್ನು ಸಂಪೂರ್ಣವಾಗಿ ಕರಗಿಸಿ ಕಲ್ಮಶಗಳನ್ನು ಬೇರ್ಪಡಿಸುತ್ತಾರೆ. ಉದಾಹರಣೆಗೆ: ಕಬ್ಬಿಣದ ಅದಿರನ್ನು ಕೋಕ್ ಮತ್ತು ಸುಣ್ಣಕಲ್ಲುಗಳೊಡನೆ ಊದುಕುಲುಮೆಯ ಅಧಿಕ ಉಷ್ಣತೆಗೆ ಒಳಪಡಿಸುತ್ತಾರೆ. ಕೋಕ್ ಬೆಂದು ಕಾರ್ಬನ್ ಮಾನಾಕ್ಸೈಡ್ ಅನಿಲವನ್ನು ಹೊರಸೂಸುತ್ತದೆ. ಈ ಅನಿಲವು ಕಬ್ಬಿಣದಲ್ಲಿದ್ದ ಆಮ್ಲಜನಕವನ್ನು ಹೀರಿ ಅದನ್ನು ಶುದ್ಧಿಗೊಳಿಸುತ್ತದೆ. ಉಳಿದ ಅನೇಕ ಕಬ್ಬಿಣ ಕಲ್ಮಶಗಳು ಕರಗಿ ಸುಣ್ಣಕಲ್ಲಿನೊಡನೆ ಸೇರಿ ಕರಗಿದ ಕಬ್ಬಿಣದ ಮೇಲೆ ತೇಲುತ್ತವೆ. ಹೀಗೆ ಅದಿರಿನಿಂದ ಬೇರ್ಪಟ್ಟ ಕಬ್ಬಿಣವನ್ನು ಮತ್ತೆ ಶುದ್ಧಿಗೊಳಿಸಬಹುದು.



5. ಲೀಚನ: ಈ ವಿಧಾನದಲ್ಲಿ ಅದಿರಿನಲ್ಲಿದ್ದ ಲೋಹವನ್ನು ರಾಸಾಯನಿಕ ದ್ರಾವಣದಲ್ಲಿ ವಿಲೀನಗೊಳಿಸಿ, ಅದರಿಂದ ಲೋಹವನ್ನು ಮತ್ತೆ ಬೇರ್ಪಡಿಸುತ್ತಾರೆ. ಉದಾಹರಣೆಗೆ: ಚಿನ್ನದ ಅದಿರನ್ನು ಮೊದಲು ಸೋಡಿಯಂ ಸಯನೈಡ್ ದ್ರಾವಣದಲ್ಲಿ ಡುತ್ತಾರೆ. ಸೋಡಿಯಂ ಸಯನೈಡ್ ದ್ರಾವಣದಲ್ಲಿ ಚಿನ್ನ ಮಾತ್ರ ವಿಲೀನವಾದ ಮೇಲೆ ಅದನ್ನು ಸತು ಲೋಹದೊಡನೆ ಇಡುತ್ತಾರೆ. ಆಗ ಚಿನ್ನವು ಸತುಲೋಹದ ಮೇಲೆ ಹೆಪ್ಪುಗಟ್ಟಿ ದ್ರಾವಣದಿಂದ ಬೇರ್ಪಡೆಯಾಗುತ್ತದೆ.



6. ವಿದ್ಯುತ್ ವಿಭಜನೆ: ಸಾಧಾರಣವಾಗಿ ದ್ರಾವಣದಿಂದ ಲೋಹವನ್ನು ಬೇರ್ಪಡಿಸಲು ಈ ವಿಧಾನವನ್ನು ಉಪಯೋಗಿಸುತ್ತಾರೆ. ಉದಾಹರಣೆಗೆ: ಸಲ್ಫ್ಯೂರಿಕ್ ಆಮ್ಲದಲ್ಲಿ ತಾಮ್ರ ವಿಲೀನವಾಗುತ್ತದೆ. ತಾಮ್ರದ ಧನ ವಿದ್ಯುದ್ವಾರವೂ (ಆನೋಡ್) ಋಣ ವಿದ್ಯುದ್ವಾರವೂ (ಕ್ಯಾಥೋ[...] ಉಳ್ಳ ವಿದ್ಯುತ್ ವಿಭಜನಾಕೋಶದ[...] ದ್ರಾವಣವನ್ನು ಹಾಕುತ್ತಾರೆ. ಆಗ ಧನಾತ್ಮಕ ತಾ[...] ಅಯಾನು ಋಣಾತ್ಮಕ ತಾಮ್ರದ ಕ್ಯಾಥೋಡ್[...] ತಂಗಿ ದ್ರಾವಣದಿಂದ ಪ್ರತ್ಯೇಕಿಸುತ್ತದೆ. ಇದ[...] ಅಲ್ಯೂಮಿನಿಯಂ ಮತ್ತು ಮ್ಯಾಗ್ನಿಷಿ[...] ಲೋಹಗಳನ್ನು ಅವುಗಳ ಅದಿರಿ[...] ಬೇರ್ಪಡಿಸಬಹುದು.

7. ಅಮಾಲ್ಗಮನ: ಇದು ಚಿನ್ನ ಮತ್ತು ಬೆಳ್ಳಿ[...] ಅವುಗಳ ಅದಿರಿನಿಂದ ಬೇರ್ಪಡಿ[...] ಉಪಯೋಗಿಸುವ ವಿಶಿಷ್ಟ ವಿ[...] ಪಾದರಸವನ್ನೊಳಗೊಂಡ ತಟ್ಟೆಗಳ ಮೇಲೆ[...] ಕಣಗಳನ್ನಾಗಿ ಪುಡಿಮಾಡಿದ ಅದಿ[...] ದ್ರಾವಣದಲ್ಲಿ ಒಯ್ಯಲಾಗುತ್ತದೆ. ಆಗ ಪಾದ[...] ಚಿನ್ನ ಅಥವಾ ಬೆಳ್ಳಿಯನ್ನು ಆಕರ್ಷಿಸಿ, ಅದರ[...] ಸೇರಿ ಅಮಾಲ್ಗಂ ಉಂಟಾಗುತ್ತದೆ[...] ಅಮಾಲ್ಗಮನ್ನು ಕಾಯಿಸಿದಾಗ ಆವಿ ರೂ[...] ಹೊರಗೆ ಹೋಗಿ ಶುದ್ದ ಚಿನ್ನ ಅಥವಾ[...] ಉಳಿಯುತ್ತದೆ.

ಇವಲ್ಲದೆ ಲೋಹಗಳ ಭೌತಗುಣ[...] ಅಭಿವೃದ್ಧಿಪಡಿಸಲು ಉಪಯೋಗಿಸುವ [...] ಸಂಸ್ಕರಣ, ಗಾಲ್ವಾನೀಕರಣ(ಸತು ಲೇ[...] ಕಲಾಯಿ ಮಾಡುವುದು, ಲೋಹಗಳ ಮೇಲ್ಮೈ[...] ಶುದ್ಧಿ ಗೊಳಿಸುವುದು, ಇವೇ ಮುಂ[...] ವಿಧಾನಗಳೆಲ್ಲವು ಇವೆ. ಲೋಹಗ[...] ಅಂತಿಮರೂಪಕ್ಕೆ ತರಲು ಎರಕ ಹುಯ್ಯು[...] ಚಪ್ಪಟೆ ಮಾಡುವುದು, ಘೋರ್ಜನ, ಬೆಸೆಯು[...] ಒತ್ತುವುದು, ಹೊರದಬ್ಬುವುದು ಮುಂ[...] ವಿಧಾನಗಳನ್ನೂ ಉಪಯೋಗಿಸಬಹುದು.

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE-560027 Published by G.N.NAGARAJ, No 12, 18th Cross, S.R.Nagar, BANGALORE 560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE 560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor: S.Y.GURUSHANTH